ಸಂಪುಟ: 06 ಸಂಚಿಕೆ: 58 ಪುಟಗಳು: 08 ಮಂಗಳವಾರ 12 ಮೇ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಸ್ವರ್ಗ ಎಂದರೆ ಮತ್ತೇನೂ ಅಲ್ಲ... ಯಾವಾಗಲೂ ಸಂತೋಷವಾಗಿ ಇರುವವರ ಮನಸ್ಸೇ

## ಮರುಎಣಿಕೆ ಫಲಿತಾಂಶಕ್ಕೆ ತಡೆ ಶಾಸಕರಾಗಿ ರಾಜೇಗೌಡ ಮುಂದುವರಿಕೆ

• ಉದಯವಾಹಿನಿ, ನವದೆಹಲಿ

ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಗೆ ಸೂಚಿಸಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಮಾಜಿ ಶಾಸಕ ಟಿ.ಡಿ.ರಾಜೇಗೌಡ ಅವರಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆ. ರಾಜೇಗೌಡ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್, ಕೆ. ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠವು, ಏಪ್ರಿಲ್ 6ರಂದು ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶದ ಅನ್ವಯ ಕೈಗೊಳ್ಳಲಾದ ಎಲ್ಲಾ ಕ್ರಮಗಳನ್ನು ತಡೆಹಿಡಿಯುವಂತೆ ಸೂಚಿಸಿದೆ. ಮಧ್ಯಂತರ ಕ್ರಮವಾಗಿ ರಾಜೇಗೌಡ ಅವರನ್ನು ಶಾಸಕ ಸ್ಥಾನದಲ್ಲಿ ಮುಂದುವರಿಯಲು ಸೂಚಿಸಿದೆ.

## ಲೈಂಗಿಕ ಅಲ್ಪಸಂಖ್ಯಾತರ ಚಿಕಿತ್ಸೆ ಮುಂದುವರಿಕೆಗೆ ಅಸ್ತು: ಹೈ

• ಉದಯವಾಹಿನಿ, ಹುಬ್ಬಳ್ಳಿ

ತಮ್ಮನ್ನು ಮಹಿಳೆಯರು ಎಂದು ಗುರುತಿಸಿಕೊಂಡಿರುವ ನಗರದ ಇಬ್ಬರು ಲೈಂಗಿಕ ಅಲ್ಪಸಂಖ್ಯಾತರಿಗೆ 'ಹಾರ್ಮೋನ್ ಬದಲಿಸುವ ಥೆರಪಿ' (ಎಚ್‌ಆರ್‌ಟಿ) ಮುಂದುವರಿಸುವಂತೆ ಸಂಬಂಧಿಸಿದ ವೈದ್ಯರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ. 'ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಕಾಯ್ದೆ' ತಿದ್ದುಪಡಿ ಪ್ರಶ್ನಿಸಿ ಈ ಇಬ್ಬರು ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಜಯಾ ಕೊಠಾರಿ, 'ಅರ್ಜಿದಾರರಿಬ್ಬರೂ ನಗರದ ರಾಮಯ್ಯ ಆಸ್ಪತ್ರೆಯಲ್ಲಿ 'ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿ' ಪಡೆಯುತ್ತಿದ್ದಾರೆ. ಆದರೆ, ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ಬಳಿಕ ವೈದ್ಯರು ಚಿಕಿತ್ಸೆ ಮುಂದುವರಿಸಲು ಹಿಂಜರಿಯುತ್ತಿದ್ದಾರೆ. ವೈದ್ಯಕೀಯ ಚಿಕಿತ್ಸೆ ಪಡೆಯುವುದನ್ನು ನಿರ್ಬಂಧಿಸುವುದು ಮೂಲಭೂತ ಹಕ್ಕುಗಳ ಉಲ್ಲಂಘನೆ' ಎಂದು ಪ್ರತಿಪಾದಿಸಿದ್ದರು.

ಇದನ್ನು ಅಲ್ಲಗಳೆದಿದ್ದ ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, 'ಅರ್ಜಿದಾರರಿಗೆ ಚಿಕಿತ್ಸೆ ನೀಡುವುದನ್ನು ನಿರಾಕರಿಸಿದ ಅಥವಾ ನಿರ್ಬಂಧಿಸಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಪ್ರಸ್ತುತಪಡಿಸಲಾಗಿಲ್ಲ. ಈ ಹಂತದಲ್ಲಿ ಕಾಯ್ದೆಯ ತಿದ್ದುಪಡಿ ಮಾನ್ಯತೆಯನ್ನು ನಿರ್ಧರಿಸುವುದು ಸರಿಯಲ್ಲ. ಯಾಕೆಂದರೆ, ಈ ಕುರಿತಾದ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ.

## 'ಅರ್ಹರನ್ನು ಮತದಾರರ ಪಟ್ಟಿಯಿಂದ ಕೈ ಬಿಡಲು ಅವಕಾಶ ಕೊಡಲ್ಲ'

• ಉದಯವಾಹಿನಿ, ಸಾಗರ

'ಪಶ್ಚಿಮ ಬಂಗಾಳದಲ್ಲಿ ದೊಡ್ಡ ಸಂಖ್ಯೆಯ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡುವ ಕುತಂತ್ರದಿಂದಲೇ ಬಿಜೆಪಿ ಜಯಗಳಿಸಿದೆ. ರಾಜ್ಯದಲ್ಲಿ ಆ ರೀತಿ ಆಗಲು ಅವಕಾಶ ನೀಡುವುದಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು. ಖಾಸಗಿ ಕಾರ್ಯಕ್ರಮವೊಂದಕ್ಕೆ ಇಲ್ಲಿಗೆ ಆಗಮಿಸಿದ್ದ ಅವರು ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. 'ಅಂದಾಜು 93 ಲಕ್ಷ ಮತದಾರರಿಗೆ ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಮತದಾನಕ್ಕೆ ಅವಕಾಶ ಸಿಕ್ಕಿಲ್ಲ. ಬಿಜೆಪಿ ನಡೆಸಿರುವ ಇಂತಹ ಅಕ್ರಮಗಳ ವಿರುದ್ಧ ಕಾಂಗ್ರೆಸ್ ಪಕ್ಷ ಜನಾಂದೋಲನ ರೂಪಿಸಲಿದೆ' ಎಂದು ತಿಳಿಸಿದರು. 'ಈವರೆಗೆ ಸಿಬಿಐ, ಇ.ಡಿ ಮೊದಲಾದ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ತಮ್ಮ ರಾಜಕೀಯ ಎದುರಾಳಿಗಳನ್ನು ಹಿಮ್ಮೆಟ್ಟಿಸುವ ದಾರಿಯನ್ನು ಬಿಜೆಪಿ ಕಂಡುಕೊಂಡಿತ್ತು. ಅದರ ಮುಂದುವರಿದ ಭಾಗವಾಗಿ ಈಗ ಮತದಾರರ ಪಟ್ಟಿಯನ್ನೇ ತಮಗೆ ಬೇಕಾದಂತೆ ಸಿದ್ಧಪಡಿಸುವ ಅಕ್ರಮಕ್ಕೆ ಅದು ಮುಂದಾಗಿದೆ' ಎಂದು ಆರೋಪಿಸಿದರು.

## ಪಾಲಿಕೆಗಳಿಗೆ ಚುನಾವಣೆ ಸುರ್ಜೇವಾಲಾ ಜತೆ ಚರ್ಚೆ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಎ) ಐದು ನಗರ ಪಾಲಿಕೆಗಳಿಗೆ ಸದ್ಯದಲ್ಲೇ ಚುನಾವಣೆ ಘೋಷಣೆಯಾಗುವುದು ಖಚಿತವಾದ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಹತ್ವದ ಸಭೆ ನಡೆಸಿದರು. ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಭಾನುವಾರ ನಡೆದ ಸಭೆ ಸಂದರ್ಭದಲ್ಲಿ ಅಡ್ವಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಕೂಡಾ ಇದ್ದರು.

ಇತ್ತೀಚೆಗೆ ರಾಜ್ಯ ಚುನಾವಣಾ ಆಯುಕ್ತರು ಜಿ.ಎಸ್. ಸಂಗ್ರೇಶಿ ಅವರು ಜೂನ್ ಮಧ್ಯದಲ್ಲಿ ಜಿಬಿಎ ನಗರ ಪಾಲಿಕೆಗಳ ಚುನಾವಣೆ ನಡೆಸುವುದಾಗಿ ಸ್ಪಷ್ಟಪಡಿಸಿದ್ದಾರೆ.ಸುರ್ಜೇವಾಲಾ ಜೊತೆ ನಡೆದ ಸಭೆಯಲ್ಲಿ ಚುನಾವಣೆ ಮುಂದೂಡಲು ಸರ್ಕಾರದ ಮುಂದಿರುವ ಆಯ್ಕೆಗಳ ಬಗ್ಗೆ ಪರಿಶೀಲನೆ ನಡೆಸಿದರು ಎಂದು ಗೊತ್ತಾಗಿದೆ. ಯಾವುದಾದರೂ ಕಾರಣ ನೀಡಿ ಸುಪ್ರೀಂ ಕೋರ್ಟ್ ಎದುರು ಹೆಚ್ಚುವರಿ ಕಾಲಾವಕಾಶ ನೀಡಲು ಅವಕಾಶಗಳಿವೆಯೇ ಎಂಬ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಲಾಗಿದೆ.

ಭಾರತದ ಮೊದಲ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರು ಪುನಃಸ್ಥಾಪಿಸಿದ ಸೋಮನಾಥ ದೇವಾಲಯವನ್ನು ಉದ್ಘಾಟಿಸಿ 75 ವರ್ಷಗಳನ್ನು ಪೂರೈಸಿದ ಹಿನ್ನೆಲೆ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ ಸೋಮನಾಥ ದೇವಾಲಯದಲ್ಲಿ ಪ್ರಧಾನಿ ಮೋದಿ ಸೋಮವಾರ ಪ್ರಾರ್ಥನೆ ಸಲ್ಲಿಸಿದರು. ಸೋಮನಾಥ ಅಮೃತ ಮಹೋತ್ಸವದಲ್ಲಿ ಭಾಗವಹಿಸಿದ ಪ್ರಧಾನಿ, ದೇವಾಲಯದ ಆವರಣಕ್ಕೆ ಪ್ರವೇಶಿಸುವ ಮೊದಲು ಸೋಮನಾಥದಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಪ್ರತಿಮೆಗೆ ಗೌರವ ಸಲ್ಲಿಸಿದರು.



**ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಸುಳ್ಳಿನ ಮೇಲೆ ಸತ್ಯಕ್ಕೆ ವಿಜಯ**

**ಭಾರತದ ತಲೆ ಬಾಗಿಸಲು ಯಾವುದೇ ಶಕ್ತಿಗೆ ಸಾಧ್ಯವಿಲ್ಲ**

# ನಮೋ ಸೋಮನಾಥ

ಸೋಮನಾಥಕ್ಕೆ ನನ್ನ ಮುಂಬರುವ ಭೇಟಿಯ ಬಗ್ಗೆ ಮತ್ತು ಸೋಮನಾಥ ಮತ್ತು ನಮ್ಮ ನಾಗರಿಕತೆಯ ಶ್ರೇಷ್ಠತೆಗೆ ಸಂಬಂಧಿಸಿದಂತೆ ಈ ದಿನ ಯಾವಾಗಲೂ ಏಕೆ ಮಹತ್ವದ್ದಾಗಿರುತ್ತದೆ ಎಂಬುದರ ಕುರಿತು ಒಂದು ಬರೆದಿದ್ದೇನೆ. ಎಲ್ಲಾ ರೀತಿಯ ಸವಾಲುಗಳನ್ನು ಸಹಿಸಿಕೊಂಡು ಸೋಮನಾಥವನ್ನು ಯಾವಾಗಲೂ ರಕ್ಷಿಸಿದ ಮತ್ತು ಅದರ ವೈಭವವನ್ನು ಪುನಃಸ್ಥಾಪಿಸಿದ ಪ್ರತಿಯೊಬ್ಬ ವ್ಯಕ್ತಿಗೂ ಗೌರವ ಸಲ್ಲಿಸಿದೆ ಎಂದು ಹೇಳಿದ್ದಾರೆ. ಭಾರತದ ಮೊದಲ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರು ಪುನಃಸ್ಥಾಪಿಸಿದ ಸೋಮನಾಥ ದೇವಾಲಯವನ್ನು ಉದ್ಘಾಟಿಸಿ 75 ವರ್ಷಗಳನ್ನು ಪೂರೈಸಲಿದ್ದಾರೆ ಎಂದು ಪ್ರಧಾನಿ ತಮ್ಮ ಬರಲಿರುವ ಭೇಟಿಯಲ್ಲಿ ತಿಳಿಸಿದ್ದಾರೆ. ಈ ವರ್ಷದ ಆರಂಭದಲ್ಲಿ ಸೋಮನಾಥ ಸ್ವಾಭಿಮಾನ್ ಪರ್ವದಲ್ಲಿ ಭಾಗವಹಿಸಿದ್ದನ್ನು ಮೋದಿ ನೆನಪಿಸಿಕೊಂಡರು, ದೇವಾಲಯದ ಮೇಲಿನ ಮೊದಲ ದಾಳಿಯ 1,000 ವರ್ಷಗಳನ್ನು ಪೂರೈಸಿದ್ದನ್ನು ನೆನಪಿಸಿಕೊಂಡರು ಮತ್ತು ಸೋಮನಾಥನ ಪ್ರಯಾಣವನ್ನು ವಿನಾಶದಿಂದ ನವೀಕರಣಕ್ಕೆ ಅಥವಾ ವಿಧ್ವಂಸದಿಂದ ಸೃಜನ್‌ಗೆ ಎಂದು ಬಣ್ಣಿಸಿದರು.

**ದೇವಾಲಯದ ಮೇಲಿನ ಮೊದಲ ದಾಳಿ**

• ಉದಯವಾಹಿನಿ, ಗಿರ್ ಸೋಮನಾಥ



ನರೇಂದ್ರಮೋದಿ ಸೋಮನಾಥ ದೇವಾಲಯಕ್ಕೆ ಹೋಗುವ ಮಾರ್ಗಮಧ್ಯೆ ರೋಡ್ ಶೋ ನಡೆಸಿದರು, ಈ ಸಂದರ್ಭದಲ್ಲಿ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು, ನಗರದ ಪ್ರಮುಖ ಸ್ಥಳಗಳಲ್ಲಿ ಬಿಗಿ ಭದ್ರತಾ ವ್ಯವಸ್ಥೆಗಳನ್ನು ನಿಯೋಜಿಸಲಾಗಿತ್ತು.

**ಧಾರ್ಮಿಕ ಕಾರ್ಯಕ್ರಮದಲ್ಲಿ ಪ್ರಧಾನಿ ಭಾಗಿ:** ಐತಿಹಾಸಿಕ ಸೋಮನಾಥ ದೇವಾಲಯದಲ್ಲಿ ಆಯೋಜಿಸಲಾಗಿದ್ದ ಭವ್ಯ ಸೋಮನಾಥ ಅಮೃತ ಮಹೋತ್ಸವದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾದರು.

ಪ್ರಧಾನಿ ಮೋದಿ ಅವರು ತವರು ರಾಜ್ಯ ಗುಜರಾತ್‌ನಲ್ಲಿ ಸೋಮನಾಥ ದೇವಾಲಯದ ಪುನರ್ನಿರ್ಮಾಣದ 75 ವರ್ಷದ ಹಿನ್ನೆಲೆಯಲ್ಲಿ ಸೋಮನಾಥ್ ಪರ್ವದಲ್ಲಿ ಭಾಗಿಯಾಗಿದರು.ಸೋಮನಾಥ ಮಂದಿರ ಭಕ್ತರು ಮತ್ತು ಗುಜರಾತ್ ಜನರಿಗೆ ಈ ದಿನ ವಿಶೇಷ ಮಹತ್ವ ಪಡೆದುಕೊಂಡಿದೆ. ಸೋಮನಾಥ ಆಚರಣೆಯ ಆಚರಣೆಯ ಭಾಗವಾಗಿ, ದೇಶಾದ್ಯಂತ 11 ಪವಿತ್ರ ಯಾತ್ರಾ ಸ್ಥಳಗಳಿಂದ ತರಲಾದ ಪವಿತ್ರ ನೀರನ್ನು ಬಳಸಿ ಪ್ರಧಾನಿ ವಿಶೇಷ ಕುಂಭಾಭಿಷೇಕ ನಡೆಸಿದರು.ದೇವಾಲಯದ ಆವರಣದಲ್ಲಿ ಸಾಂಪ್ರದಾಯಿಕ ಆಚರಣೆಗಳು ಮತ್ತು ಧಾರ್ಮಿಕ ಪಠಣಗಳ ನಡುವೆ ವಿಧ್ಯುಕ್ತ ಧ್ವಜಾರೋಹಣವೂ ನಡೆಯಿತು. ಮೆಗಾ ಕಾರ್ಯಕ್ರಮಕ್ಕಾಗಿ ವ್ಯಾಪಕ ಸಿದ್ಧತೆ ಕೈಗೊಳ್ಳಲಾಗಿದ್ದು, ಭಕ್ತರನ್ನು ಸ್ವಾಗತಿಸಲು ದೇವಾಲಯವನ್ನು ಸುಂದರವಾಗಿ ಅಲಂಕರಿಸಲಾಗಿದೆ. ಸೋಮನಾಥ ಪರ್ವ ಹಿನ್ನೆಲೆಯಲ್ಲಿ ದೇವಾಲಯದ ಮೇಲೆ ಸೂರ್ಯಕಿರಣ್ ವಿಮಾನಗಳು ವೈಮಾನಿಕ ಪ್ರದರ್ಶನ ನಡೆಸಿದವು.

ಮತ್ತೊಂದು ಕಡೆ ದೇವಸ್ಥಾನದ ಮೇಲೆ ಹೂವಿನ ದಳಗಳನ್ನು ಸುರಿಸುವ ಮೂಲಕ ಆಚರಣೆಗೆ ಮತ್ತಷ್ಟು ಮೆರಗು ತಂದು ಕೊಟ್ಟಿತು. ಪ್ರಧಾನಿ ಮೋದಿ ಅವರು ಭೇಟಿ ಮತ್ತು ಸೋಮನಾಥ ಪರ್ವ ವಿಶೇಷ ಆಚರಣೆಯ ಸಮಯದಲ್ಲಿ ನಿರೀಕ್ಷಿಸಲಾದ ದೊಡ್ಡ ಜನಸಮೂಹವನ್ನು ಗಮನದಲ್ಲಿಟ್ಟುಕೊಂಡು ಬಿಗಿ ಭದ್ರತಾ ವ್ಯವಸ್ಥೆಗಳನ್ನು ಸಹ ಮಾಡಲಾಗಿತ್ತು.

ಜಗತ್ತಿನ ಯಾವುದೇ ಶಕ್ತಿಯೂ ಭಾರತವನ್ನು ಬಗ್ಗಿಸಲು ಅಥವಾ ಒತ್ತಡ ಹಾಕಿ ಮಣಿಸಲು ಸಾಧ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು. ಇಲ್ಲಿನ ಸೋಮನಾಥ ದೇವಾಲಯದ ಪುನರ್ ಪ್ರತಿಷ್ಠಾಪನೆಯ 75ನೇ ವರ್ಷದ ಅಮೃತ ಮಹೋತ್ಸವದಲ್ಲಿಂದು ಪಾಲ್ಗೊಂಡು ಮಾತನಾಡಿದ ಅವರು, ಭಾರತವು ಜಾಗತಿಕವಾಗಿ ಯಾವುದೇ ಒತ್ತಡಕ್ಕೆ ಮಣಿಯುವ ರಾಷ್ಟ್ರವಲ್ಲ. ಯಾರ ಮುಂದೆ ತಲೆ ಬಾಗುವುದಿಲ್ಲ ಎಂದರು. ಇದೇ ವೇಳೆ ತುಷ್ಟೀಕರಣದ ರಾಜಕಾರಣವನ್ನು ಟೀಕಿಸಿದ ಪ್ರಧಾನಿ ಮೋದಿ, ದೇಶದಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ತುಷ್ಟೀಕರಣದಲ್ಲಿ ತೊಡಗಿವೆ. ಅಯೋಧ್ಯೆಯ ರಾಮಮಂದಿರ ನಿರ್ಮಾಣದಿಂದ ಹಿಡಿದು ಸೋಮನಾಥ ಪುನರ್ ನಿರ್ಮಾಣದವರೆಗೂ ಇಂತಹದೇ ಮನಸ್ಥಿತಿಯನ್ನು ಕಂಡಿದ್ದೇವೆ ಎಂದು ವಿಪಕ್ಷಗಳ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

1947ರಲ್ಲಿ ಸ್ವಾತಂತ್ರ್ಯವನ್ನು ಪಡೆದರೆ, 1951ರಲ್ಲಿ ನಡೆದ ಸೋಮನಾಥ ದೇವಾಲಯದ ಪ್ರಾಣ ಪ್ರತಿಷ್ಠಾಪನೆಯು ದೇಶದ ಮುಕ್ತ ಪ್ರಜ್ಞೆಯ ಘೋಷಣೆಯಾಗಿತ್ತು. ಸೋಮನಾಥದ ಅಮೃತ ಮಹೋತ್ಸವವು ಕೇವಲ ಭೂತಕಾಲದ ನೆನಪಲ್ಲ, ಬದಲಿಗೆ ಮುಂದಿನ ಸಾವಿರ ವರ್ಷಗಳವರೆಗೆ ಭಾರತಕ್ಕೆ ಪ್ರೇರಣೆ ನೀಡುವ ಹಬ್ಬವಾಗಿದೆ ಎಂದು ಬಣ್ಣಿಸಿದರು.

ಮೇ 11ನೇ ಮಹತ್ವದ ದಿನಾಂಕವಾಗಿದೆ. ಇದು ಸೋಮನಾಥ ದೇವಾಲಯದ ಪ್ರತಿಷ್ಠಾಪನೆಯನ್ನು ಮಾತ್ರವಲ್ಲದೆ, 1998ರಲ್ಲಿ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದಲ್ಲಿ ನಡೆದ ಭಾರತದ ಪರಮಾಣು ಪರೀಕ್ಷೆಯನ್ನು ನೆನಪಿಸುತ್ತದೆ ಎಂದು ಅವರು ಹೇಳಿದರು. ಮೇ 11, 1998ರಂದು ದೇಶವು ಪರಮಾಣು ಪರೀಕ್ಷೆಗಳನ್ನು ನಡೆಸಿತು. ನಮ್ಮ ವಿಜ್ಞಾನಿಗಳು ಭಾರತದ ಸಾಮರ್ಥ್ಯ ಮತ್ತು ಶಕ್ತಿಯನ್ನು ಇಡೀ ಜಗತ್ತಿಗೆ ಪ್ರದರ್ಶಿಸಿದರು. ಈ ಪರೀಕ್ಷೆಗಳು ಜಗತ್ತಿನಾದ್ಯಂತ ಸಂಚಲನ ಮೂಡಿಸಿದವು ಮತ್ತು ಹಲವಾರು ದೇಶಗಳಿಂದ ತೀವ್ರ ಆಕ್ರೋಶದ ಪ್ರತಿಕ್ರಿಯೆಗಳನ್ನು ಉಂಟುಮಾಡಿದವು ಎಂದು ಮೋದಿ ಹೇಳಿದರು.

**ವೈಮಾನಿಕ ಪ್ರದರ್ಶನ**

ಸೋಮನಾಥ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಭಾರತೀಯ ವಾಯುಪಡೆದ ಸೂರ್ಯಕಿರಣ್ ತಂಡದಿಂದ ಅದ್ಭುತ ವೈಮಾನಿಕ ಪ್ರದರ್ಶನ ನಡೆಯಿತು.ಅದ್ದೂರಿ ಆಚರಣೆಯ ಭಾಗವಾಗಿ, ಭಾರತೀಯ ವಾಯುಪಡೆಯ ಹೆಸರಾಂತ ಸೂರ್ಯಕಿರಣ್ ಏರೋಬ್ಯಾಟಿಕ್ ತಂಡ ಅದ್ಭುತವಾದ ವೈಮಾನಿಕ ಪ್ರದರ್ಶನ ನೀಡಿ ಭಕ್ತರನ್ನು ಮಂತ್ರಮುಗ್ಧಗೊಳಿಸಿತು. ಸೋಮನಾಥ ಅಮೃತ ಮಹೋತ್ಸವ ಉತ್ಸವಗಳಿಗೆ ದೇಶಭಕ್ತಿಯ ಉತ್ಸಾಹ ಮತ್ತು ಭಕ್ತರ ಉತ್ಸಾಹವವನ್ನು ಇಮ್ಮಡಿಗೊಳಿಸಿತು.

### ಮಿತವ್ಯಯ'ಕ್ಕಾಗಿ ಮೋದಿ ಸಲಹೆಯನ್ನು ದೇಶದ ಜನ ಸ್ವಾಗತಿಸಬೇಕು:

**ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮದ ನಡುವೆ ಇಂಧನ ಉಳಿತಾಯ ಮತ್ತು ವಿದೇಶಿ ವಿನಿಮಯ ಸಂರಕ್ಷಣೆಗಾಗಿ ಪ್ರಧಾನಿ ನರೇಂದ್ರ ಮೋದಿಯವರ ಮನವಿಯನ್ನು ಸ್ವಾಗತಿಸಬೇಕು ಎಂದು ಜೆಡಿ(ಎಸ್) ಸರ್ವೋಚ್ಚ ನಾಯಕ, ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ ಹೇಳಿದ್ದಾರೆ. ಸಂಘರ್ಷದಿಂದ ಉಂಟಾದ ಜಾಗತಿಕ ಬಿಕ್ಕಟ್ಟಿನ ನಡುವೆ ಇಂಧನ ಹಾಗೂ ಭಾರತ ಆಮದು ಮಾಡಿಕೊಳ್ಳುತ್ತಿರುವ ಇನ್ನಿತರ ವಸ್ತುಗಳ ಬಳಕೆಯಲ್ಲಿ ಎಚ್ಚರಿಕೆ ವಹಿಸುವಂತೆ ಮೋದಿ ಸಲಹೆ ನೀಡಿದ್ದಾರೆ ಎಂದು ಮಾಜಿ ಪ್ರಧಾನಿ ಹೇಳಿದ್ದಾರೆ. ತೆಲಂಗಾಣದಲ್ಲಿ ಪ್ರಧಾನಿ ಕೆಲವು ಸಲಹೆಗಳನ್ನು ನೀಡಿದರು. ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧದ ಪ್ರತಿಕೂಲ ಪರಿಣಾಮದಿಂದಾಗಿ, ಇಂಧನ ಸಾಗಿಸುವ ಹಡಗುಗಳ ಚಲನೆಯಲ್ಲಿ ಅಡಚಣೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ, ಬಳಕೆಯಲ್ಲಿ ಎಚ್ಚರಿಕೆ ವಹಿಸುವಂತೆ ಮೋದಿ ಸಲಹೆ ನೀಡಿದ್ದಾರೆ ಎಂದು ದೇವೇಗೌಡ ಹೇಳಿದ್ದಾರೆ.**

**1** ಒಂದು ವರ್ಷ ಚಿನ್ನ ಖರೀದಿ ಮಾಡದಂತೆ ಭಾರತೀಯರಿಗೆ ಪ್ರಧಾನಿ ಮೋದಿ ಮನವಿ.

**2** ಚಿನ್ನದ ಮೇಲೆ ಹೂಡಿಕೆ ಮಾಡುವವರ ಮುಂದಿರುವ ಆಯ್ಕೆಗಳೇನು?

**3** ಭಾರತದಲ್ಲಿ ಚಿನ್ನದ ಮೌಲ್ಯ ಕುಸಿಯುತ್ತದೆಯೇ? ಅಂತೆ-ಕಂತೆಗಳಿಗೆ ಇಲ್ಲಿದೆ ಉತ್ತರ.




## ಬಿಜೆಪಿ ನಾಯಕರು, ಕಾರ್ಯಕರ್ತರಿಂದ ತ್ಯಾಗ ಪ್ರಾರಂಭವಾಗಲಿ

• ಉದಯವಾಹಿನಿ, ಬೆಂಗಳೂರು

ಅಮೆರಿಕಾ- ಇರಾನ್ ಯುದ್ಧದ ಹಿನ್ನೆಲೆಯಲ್ಲಿ ಚಿನ್ನ ಖರೀದಿ ಮಾಡಬೇಡಿ, ಇಂಧನ ಬಳಕೆ ಕಡಿಮೆ ಮಾಡಿ ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದಾರೆ. ಬಿಜೆಪಿ ಶಾಸಕರು, ನಾಯಕರು ಹಾಗೂ ಕಾರ್ಯಕರ್ತರಿಂದ ತ್ಯಾಗ ಪ್ರಾರಂಭವಾಗಲಿ ಎಂದು ಡಿಸಿಎಂ ಡಿಕೆ ಶಿವಕುಮಾರ್ ತಿರುಗೇಟು ನೀಡಿದರು. ಈ ಕುರಿತಾಗಿ ಸೋಮವಾರ ಮಾತನಾಡಿ, ಪ್ರಧಾನ ಮಂತ್ರಿಗಳು, ಇವುಗಳ ಬೆಲೆ ಏರಿಕೆಯಾಗಿದ್ದು ಯಾಕೆ? ಯಾರಿಂದ ಬೆಲೆ ಏರಿಕೆಯಾಗಿದೆ ಎಂಬುದನ್ನು ವಿವರಿಸಬೇಕು ಎಂದು ಆಗ್ರಹಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ದೇಶದ ಜನರಿಗೆ ಕೊಟ್ಟಿರುವ ಸಲಹೆ ಬಗ್ಗೆ ಕೇಳಿದಾಗ, 'ಮದುವೆ, ಮುಂಜಿ ಮಾಡುವವರು ಚಿನ್ನ ತೆಗೆದುಕೊಳ್ಳಬೇಡಿ ಎಂದು ಹೇಳಲು ಸಾಧ್ಯವೇ? ಅವರು ಸಲಹೆಗಳನ್ನು ನೀಡುತ್ತಾರೆ. ಹಿಂದೆ ಕೋವಿಡ್ ಬಂದಾಗ ದೀಪ ಹಚ್ಚಿಸಿ, ಚಪ್ಪಾಳೆ ತಟ್ಟಿಸಿದರು. ಅದರಿಂದ ಸಮಸ್ಯೆ ನಿಂತು ಹೋಯಿತಾ?' ಎಂದು ಪ್ರಶ್ನಿಸಿದರು. ಮದುವೆಯಾದ ಮಹಿಳೆ ಚಿನ್ನದ ತಾಳಿ, ಸರ ಹಾಕಿಕೊಳ್ಳುವುದುನ್ನು ಬೇಡ ಎನ್ನಲು ಸಾಧ್ಯವೇ? ಅವರ ಬದುಕಿನಲ್ಲಿ ಕಷ್ಟವೋ ಸುಖವೋ, ಸಾಲ ಮಾಡಿ ಚಿನ್ನ ಖರೀದಿ ಮಾಡುತ್ತಾರೆ. ಎಲ್ಲರನ್ನು ಸಾರ್ವಜನಿಕ ಸಾರಿಗೆಯಲ್ಲೇ ಓಡಾಡಿ ಎನ್ನುವುದಾದರೆ, ಪ್ರಧಾನ ಮಂತ್ರಿಗಳು ಕೇಂದ್ರ ಸರ್ಕಾರದ ಅಧಿಕಾರಿಗಳು ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುವಂತೆ ಸೂಚಿಸಲಿ. ಅವರ ಕೇಂದ್ರ ಸಚಿವರಿಗೆ ತಾಕೀತು ಮಾಡಲಿ. ನಾವು ಮೊದಲು ನಡೆದುಕೊಂಡು ನಂತರ ಸಾಮಾನ್ಯ ಜನಕ್ಕೆ ಸಂದೇಶ ನೀಡಬೇಕು ಎಂದು ತಿರುಗೇಟು ನೀಡಿದರು.



### ಬೆಂಗಳೂರಿಗೆ ಗ್ಯಾರಂಟಿ ಯೋಜನೆ; ಮೇ 13ರಂದು ಪ್ರಕಟ

**ನಿನ್ನೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ ಅವರೊಂದಿಗೆ ಜಿಬಿಎ ಸಭೆ ಮಾಡಿದ್ದೀರಿ ಎಂದು ಕೇಳಿದಾಗ, ''ಸುರ್ಜೆವಾಲ ಅವರ ಜೊತೆ ರಾಜಕೀಯವಾಗಿ ಸಭೆ ಮಾಡಿದ್ದೇವೆ. ಅಧಿಕಾರಿಗಳನ್ನು ಕರೆದು ಕೆಲವು ಸೂಚನೆ ನೀಡಿದ್ದು, ಬೆಂಗಳೂರು ನಗರಕ್ಕೆ ದೊಡ್ಡ ಗ್ಯಾರಂಟಿಗಳನ್ನು ನೀಡುತ್ತಿದ್ದೇವೆ, ಈ ಬಗ್ಗೆ ಮೇ 13ರಂದು ಮಾಹಿತಿ ನೀಡುತ್ತೇವೆ'' ಎಂದು ತಿಳಿಸಿದರು.**

ಬಿಜೆಪಿ ಶಾಸಕರು, ನಾಯಕರು, ಕಾರ್ಯಕರ್ತರಿಂದ ತ್ಯಾಗ ಪ್ರಾರಂಭವಾಗಲಿ

ಜಗತ್ತಿನ ಪರಿಸ್ಥಿತಿ ಸರಿಯಿಲ್ಲ ಕೆಲವೊಮ್ಮೆ ತ್ಯಾಗಕ್ಕೂ ಸಿದ್ಧವಾಗಿರಬೇಕು ಎಂಬ ಕಾರಣಕ್ಕೆ ಸಂದೇಶ ನೀಡಿದ್ದಾರೆ ಎಂದಾಗ, ''ಮೊದಲು ತ್ಯಾಗವನ್ನು ಮಂತ್ರಿಗಳು, ಕೇಂದ್ರ ಸರ್ಕಾರದ ಸಚಿವರು, ಅಧಿಕಾರಿಗಳು, ಬಿಜೆಪಿ ಆಡಳಿತ ರಾಜ್ಯಗಳಲ್ಲಿರುವ ಅಧಿಕಾರಿಗಳಿಂದ, ಅವರ ಪಕ್ಷದ ಶಾಸಕರು, ನಾಯಕರು ಹಾಗೂ ಕಾರ್ಯಕರ್ತರಿಂದ ತ್ಯಾಗ ಆರಂಭವಾಗಲಿ. ನಂತರ ಬೇರೆಯವರಿಗೆ ತ್ಯಾಗದ ಸಲಹೆ ನೀಡಲಿ'' ಎಂದು ತಿರುಗೇಟು ನೀಡಿದರು.

## ಕಲ್ಯಾಣ ಕರ್ನಾಟಕಕ್ಕಿಲ್ಲ ಶುದ್ಧ ಕುಡಿಯೋ ನೀರಿನ ಸೌಕರ್ಯ

### ■ ಸರ್ಕಾರದ ಅಂಕಿ– ಅಂಶಗಳನ್ನೇ ಮುಂದಿಟ್ಟು ಪ್ರಿಯಾಂಕ್‌ಗೆ ಛಲವಾದಿ ತರಾಟೆ

• ಉದಯವಾಹಿನಿ, ಬೆಂಗಳೂರು

ಕಲ್ಯಾಣ ಕರ್ನಾಟಕಕ್ಕೆ ಶುದ್ಧವಾದ ಕುಡಿಯುವ ನೀರನ್ನು ಪೂರೈಕೆ ಮಾಡಲು ಸಾಧ್ಯವಾಗಿಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತಾಗಿ ಅವರು ಸರ್ಕಾರದ ಅಂಕಿ– ಅಂಶಗಳನ್ನು ಮುಂದಿಟ್ಟುಕೊಂಡು ವಾಗ್ದಾಳಿ ನಡೆಸಿದ್ದಾರೆ. ಪ್ರಿಯಾಂಕ್ ಖರ್ಗೆಯವರೇ, ನಿಮ್ಮ ಅಂಕಿಅಂಶಗಳ ವೈಫಲ್ಯಕ್ಕೆ ಉತ್ತರವಿದೆಯೇ? ಇಲ್ಲಿದೆ ನಿಮ್ಮ ಇಲಾಖಾ ವೈಫಲ್ಯದ ಕಟು ವಾಸ್ತವ ಎಂದು ಆರೋಪಗಳನ್ನು ಮಾಡಿದ್ದಾರೆ. ಒಬ್ಬ ಸಚಿವರ ಕರ್ತವ್ಯವೆಂದರೆ ಕೇವಲ ಸಿದ್ಧಾಂತಗಳ ಮೇಲೆ ಭಾಷಣ ಮಾಡುವುದಲ್ಲ. ಬದಲಾಗಿ ಸಾಮಾನ್ಯ ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದಾಗಿದೆ ಎಂಬುದನ್ನು ನೀವು ಮರೆತಂತಿದೆ. ಆದರೆ ಕಲ್ಯಾಣ ಕರ್ನಾಟಕದ ಭಾಗದವರೇ ಆದ ನೀವು, ನಿಮ್ಮ ಸ್ವಂತ ಜಿಲ್ಲೆ ಮತ್ತು ಇಲಾಖೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನಂತಹ ಕನಿಷ್ಠ ಸೌಲಭ್ಯ ಒದಗಿಸುವಲ್ಲೇ ಸಂಪೂರ್ಣ ವಿಫಲರಾಗಿರುವುದು ಮಾರ್ಚ್ ತಿಂಗಳಲ್ಲಿ ಹೆಮ್ಮೆಯಿಂದ ಸಚಿವರೇ ಸದನಕ್ಕೆ ನೀಡಿರುವ ಅಂಕಿಅಂಶಗಳಿಂದಲೇ ಸಾಬೀತಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

**ಅಂಕಿಅಂಶಗಳ ಕನ್ನಡಿ: ವೈಫಲ್ಯದ ಪರಾಕಾಷ್ಠೆ**

ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಒಟ್ಟು 3965 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಗ್ರಾಮ ಪಂಚಾಯತ್ ಸುಪರ್ದಿಯಲ್ಲಿರುವ





2987 ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕೇವಲ 1708 ಮಾತ್ರ. ಅಂದರೆ ಶೇ.43 ರಷ್ಟು ಘಟಕಗಳು ಇಂದು ಸ್ಥಗಿತಗೊಂಡು ಧೂಳು ಹಿಡಿಯುತ್ತಿವೆ. ಕಳೆದ ಮೂರು ವರ್ಷಗಳಲ್ಲಿ ಘಟಕಗಳ ನಿರ್ವಹಣೆ ಮತ್ತು ದುರಸ್ತಿ ಹೆಸರಿನಲ್ಲಿ ರೂ.17 ಕೋಟಿಗೂ ಅಧಿಕ ಹಣ ಖರ್ಚಾಗಿದೆ ಎಂದು ವಿವರಿಸಿದ್ದಾರೆ. ಈ ರೂ.17 ಕೋಟಿ ಹಣ ಯಾರ ಜೇಬಿಗೆ ಸೇರಿದೆ, ಇಷ್ಟೊಂದು ಹಣ ಖರ್ಚಾದರೂ 1279 ಘಟಕಗಳು ಏಕೆ ಸ್ಥಗಿತಗೊಂಡಿವೆ? ದುರಸ್ತಿಗೆ ಆದೇಶ ನೀಡಲು ಪುರುಸೊತ್ತಿಲ್ಲವೇ? ಎಂದು ಪ್ರಶ್ನೆ ಮಾಡಿದ್ದಾರೆ. ಅಲ್ಲದೆ, ಸರ್ಕಾರದ ಖಜಾನೆ ಖಾಲಿಯಾಗಿದೆಯೇ ಅಥವಾ ನಿಮ್ಮ 'ಫ್ಯಾಕ್ಟ್ ಚೆಕ್' ಅಭಿವೃದ್ಧಿಯ ಕಡೆಗೆ ತಿರುಗುತ್ತಿಲ್ಲವೇ? ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಒಂದು ಕಡೆ ಸರ್ಕಾರ 'ಅಭಿವೃದ್ಧಿ' ಎಂಬ ಬಣ್ಣದ ಜಾಹೀರಾತುಗಳನ್ನು ಕೊಡುತ್ತಿದೆ, ಇನ್ನೊಂದು ಕಡೆ ಜನರು ಹನಿ ನೀರಿಗಾಗಿ ಪರದಾಡುತ್ತಿದ್ದಾರೆ. ಇದು ಅಭಿವೃದ್ಧಿಯೇ? ಅಥವಾ ಜನರ ದುರಂತದ ಮೇಲೆ ನಡೆಯುತ್ತಿರುವ ಪ್ರಚಾರ ರಾಜಕಾರಣವೇ? ಸ್ವಂತ ಜಿಲ್ಲೆಯಲ್ಲೇ ''ಕತ್ತಲೆ'' ಕಲಬುರಗಿಯ ದುಸ್ಥಿತಿ! ನಿಮ್ಮ ಉಸ್ತುವಾರಿ ಜಿಲ್ಲೆಯಾದ ಕಲಬುರಗಿಯಲ್ಲಿ ಪರಿಸ್ಥಿತಿ ಇನ್ನೂ ಭೀಕರವಾಗಿದೆ.

ಅಲ್ಲಿರುವ 510 ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕೇವಲ 132 ಮಾತ್ರ. ಅಂದರೆ ಶೇ.75 ರಷ್ಟು ಘಟಕಗಳು ಸ್ಥಗಿತಗೊಂಡು ಕೆಟ್ಟು ನಿಂತಿವೆ. ನಿಮ್ಮ ಮೂಗಿನ ನೇರಕ್ಕೇ ಜನರು ಕುಡಿಯುವ ನೀರಿಗಾಗಿ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ನಿಮ್ಮ ಇಲಾಖೆಯ ವೈಫಲ್ಯದ ಬಗ್ಗೆ ಯಾರು 'ಫ್ಯಾಕ್ಟ್ ಚೆಕ್' ಮಾಡಬೇಕು? ಜಿಲ್ಲಾ ಉಸ್ತುವಾರಿ ಸಚಿವರಾಗಿ ನೀವು ಕಲಬುರಗಿಗೆ ಬರುವುದು ಜನರ ಸಮಸ್ಯೆ ಆಲಿಸಲಿಕ್ಕೋ ಅಥವಾ ಕೇವಲ 'ಪಿಕ್ನಿಕ್ ರಾಜಕಾರಣ' ಮಾಡಲಿಕ್ಕೋ? ನಿಮ್ಮದೇ ಜಿಲ್ಲೆಯ ಜನರಿಗೆ ಕುಡಿಯುವ ನೀರು ಕೊಡಲಾಗದ ನೀವು, ಇಡೀ ರಾಜ್ಯದ ಅಭಿವೃದ್ಧಿಯ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾಗಿದೆ ಎಂದು ಕಿಡಿಕಾರಿದ್ದಾರೆ.

ಸ್ವಂತ ಜಿಲ್ಲೆಯಲ್ಲೇ ಶೇ.75 ರಷ್ಟು ವೈಫಲ್ಯ ವಿಟ್ಟುಕೊಂಡು ರಾಜ್ಯ ಅಭಿವೃದ್ಧಿಯ ದೊಡ್ಡ ದೊಡ್ಡ ಭಾಷಣ ಮಾಡುವುದು ರಾಜಕೀಯ ದುರಹಂಕಾರದ ಪರಮಾವಧಿಯಾಗಿದೆ. ''ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ'' ಎಂಬ ಗಾದೆಯಂತೆ ಅಧಿಕಾರದ ಮದದಲ್ಲಿ ಜನರ ಸಂಕಷ್ಟವನ್ನು ಮರೆತಿರುವ ಸರ್ಕಾರಕ್ಕೆ ಕಾಲವೇ ಉತ್ತರ ನೀಡಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

### ಪ್ರಚಾರದ ಮೋಹ, ಕರ್ತವ್ಯದ ದ್ರೋಹ!

**ನಿಮ್ಮ ಸಂಪೂರ್ಣ ಗಮನ ಖಖಖ, ಬಿಜೆಪಿ ನಾಯಕರು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ 'ಫ್ಯಾಕ್ಟ್ ಚೆಕ್' ಮಾಡುವುದರಲ್ಲೇ ಮುಳುಗಿದೆ. ನೀವು ಗ್ರಾಮೀಣಾಭಿವೃದ್ಧಿ ಸಚಿವರಿಗಿಂತ ಕಾಂಗ್ರೆಸ್ ಸರ್ಕಾರದ 'ಪ್ರಚಾರ ಮಂತ್ರಿ'ಯಾಗಿ ಹೆಚ್ಚು ಕೆಲಸ ಮಾಡುತ್ತಿರುವುದು ಸ್ಪಷ್ಟವಾಗಿದೆ. ಬೇರೆಯವರ ತಟ್ಟೆಯಲ್ಲಿ ಏನಿದೆ ಎಂದು ಇಣುಕಿ ನೋಡುವ ಮುನ್ನ, ನಿಮ್ಮ ಇಲಾಖೆಯ ತಟ್ಟೆಯಲ್ಲಿರುವ ಕೊಳೆಯನ್ನು ಮೊದಲು ಸ್ವಚ್ಛಗೊಳಿಸಿ ಎಂದು ಒತ್ತಾಯಿಸಿದ್ದಾರೆ.**

| | | | | |
|---|---|---|---|---|
| ಈ ದಿನದ ದರ | ಪೆಟ್ರೋಲ್: 102.92 ₹/L | ಡೀಸೆಲ್ : 91.06 ₹/L | ಬಂಗಾರ: ₹15,213/Gram24ct ₹13,945/Gram22ct | ಬೆಳ್ಳಿ: ₹265.00/Gram |

## ಆಧ್ಯಾತ್ಮಿಕ ಪರಂಪರೆ ಪೊರೆಯುತ್ತಿರುವ ಬೆಂಗಳೂರು:ಪ್ರಧಾನಿ ಮೋದಿ

• ಉದಯವಾಹಿನಿ, ಬೆಂಗಳೂರು

‘ಇಡೀ ಜಗತ್ತಿಗೆ ಮಾಹಿತಿತಂತ್ರಜ್ಞಾನ ಸೇವೆ ಒದಗಿಸುವುದಕ್ಕೆ ಮಾತ್ರವೇ ಬೆಂಗಳೂರು ಹೆಸರುವಾಸಿಯಲ್ಲ. ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನೂ ಈ ನಗರ ಪೊರೆಯುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು. ನಗರದ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯು ಭಾನುವಾರ ಆಯೋಜಿಸಿದ್ದ 45ನೇ ವಾರ್ಷಿಕೋತ್ಸವದಲ್ಲಿ ನೂತನ ಧ್ಯಾನ ಮಂದಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ‘ಅಧ್ಯಾತ್ಮ ಅಂದರೆ ಕೇವಲ ಧ್ಯಾನವಲ್ಲ. ಸಮಾಜ ಸೇವೆಯನ್ನು ಒಳಗೊಂಡಾಗಷ್ಟೇ ಅದು ಪರಿಪೂರ್ಣವಾಗುತ್ತದೆ. ಭಾರತೀಯ ಪರಂಪರೆಯಲ್ಲಿ ಸೇವೆ ಎನ್ನುವುದು ಪರಮ ಧರ್ಮ. ಪರೋಪಕಾರವೇ ಪುಣ್ಯ, ಪರಪೀಡನೆಯೇ ಪಾಪ’ ಎಂದರು. ‘ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ಇಲ್ಲಿ ಸ್ಥಾಪಿಸಿದ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯು 180ಕ್ಕೂ ಹೆಚ್ಚು ದೇಶಗಳಲ್ಲಿ ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನು ಪಸರಿಸುತ್ತಿದೆ. 45 ವರ್ಷಗಳ ಹಿಂದೆ ಬಿತ್ತಿದ ಬೀಜವು, ಇಂದು ವಿಶಾಲವಾದ ಹೆಮ್ಮರವಾಗಿ ಬೆಳೆದಿದೆ. ಈ ವೃಕ್ಷದ ಸಾವಿರಾರು ಶಾಖೆಗಳು ಜಗತ್ತಿನಾದ್ಯಂತ ಲಕ್ಷಾಂತರ ಜನರ ಬದುಕನ್ನು ಸುಂದರಗೊಳಿಸುತ್ತಿವೆ’ ಎಂದು ಹೇಳಿದರು.

## ಮೆಡಿಕವರ್ ತಾಯಿ, ಮಕ್ಕಳ ಆಸ್ಪತ್ರೆ ಉದ್ಘಾಟನೆ

• ಉದಯವಾಹಿನಿ, ಕೆ.ಆರ್.ಪುರ

ವೈಟ್‌ಫೀಲ್ಡ್‌ನ ಹೂಡಿಯಲ್ಲಿ ನಿರ್ಮಿಸಿರುವ 100 ಹಾಸಿಗೆ ಸಾಮರ್ಥ್ಯದ ಮೆಡಿಕವರ್ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಚಿತ್ರನಟಿ ರುಕ್ಮಿಣಿ ವಸಂತ ಉದ್ಘಾಟಿಸಿದರು. ಗರ್ಭಧಾರಣೆ, ನವಜಾತ ಶಿಶುವಿನ ತೀವ್ರ ನಿಗಾ ಘಟಕ, ಮಕ್ಕಳ ತುರ್ತು ಚಿಕಿತ್ಸೆ ಸೇವೆ ಒದಗಿಸಲಾಗುತ್ತದೆ. ಲೆವೆಲ್-3 ಎನ್‌ಐಸಿಯು, ಪಿಐಸಿಯು, ಮೆಟರ್ನಲ್ ಐಸಿಯು, ರೊಬೋಟಿಕ್ ಶಸ್ತ್ರಚಿಕಿತ್ಸೆ ಹಾಗೂ 24X7 ಮಕ್ಕಳ ತುರ್ತು ಚಿಕಿತ್ಸಾ ಸೇವೆಗಳು ಒಂದೇ ಸೂರಿನಡಿ ಲಭ್ಯವಿದೆ. ಉದ್ಘಾಟನೆ ಅಂಗವಾಗಿ ವಿಶೇಷ ಪ್ಯಾಕೇಜ್ ಪರಿಚಯಿಸಿದೆ. ನಟಿ ರುಕ್ಮಿಣಿ ವಸಂತ ಮಾತನಾಡಿ, ‘ತಾಯಿಯ ಪ್ರೀತಿ ಪ್ರತಿಯೊಂದು ಮನೆಯ ಹೃದಯ ಬಡಿತದಂತಿದೆ. ಆ ಹೃದಯವನ್ನು ಕಾಪಾಡುವ ಈ ರೀತಿಯ ಆಸ್ಪತ್ರೆಯನ್ನು ತಾಯಂದಿರ ದಿನದಂದು ಉದ್ಘಾಟಿಸುವ ಅವಕಾಶ ಸಿಕ್ಕಿರುವುದು ಸಂತೋಷದ ಸಂಗತಿ’ ಎಂದರು. ಆಸ್ಪತ್ರೆಯ ಅಧ್ಯಕ್ಷ ಡಾ.ಜಿ.ಅನಿಲ್ ಕೃಷ್ಣ ಮಾತನಾಡಿ, ‘ತಾಯಿ ಮತ್ತು ಮಕ್ಕಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾಗಿ ರೂಪುಗೊಂಡ ಆಸ್ಪತ್ರೆಯನ್ನು ನಗರಕ್ಕೆ ನೀಡುತ್ತಿದ್ದೇವೆ’ ಎಂದರು.

## ಆರೋಗ್ಯಕ್ಕಾಗಿ ಓಟದ ಖುಷಿ

• ಉದಯವಾಹಿನಿ, ಬೆಂಗಳೂರು

ಅಸೆಟ್ ಸಂಸ್ಥೆಯ ಸಹಯೋಗದೊಂದಿಗೆ ನಗರದಲ್ಲಿ ಭಾನುವಾರ ಆಯೋಜಿಸಿದ್ದ ರೆಡ್ ಎಫ್‌ಎಂ ವಾಕಥಾನ್ ಯಶಸ್ವಿಯಾಗಿ ನಡೆಯಿತು. ಆರೋಗ್ಯ ಪಾಲನೆ ಮತ್ತು ಸಮಾಜದ ಒಳಿತಿಗಾಗಿ ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆಯಲ್ಲಿ ನಡೆದ ಈ ನಡಿಗೆಯಲ್ಲಿ 5,000ಕ್ಕೂ ಹೆಚ್ಚು ಮಂದಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ವೇಗವಾಗಿ ಬೆಳೆಯುತ್ತಿರುವ ನಗರ ಜೀವನದಲ್ಲಿ ಆರೋಗ್ಯದ ಮಹತ್ವ ಸಾರಲು 3 ಕಿ.ಮೀ., 5 ಕಿ.ಮೀ. ಮತ್ತು 10 ಕಿ.ಮೀ. ವಿಭಾಗಗಳಲ್ಲಿ ವಾಕಥಾನ್ ಆಯೋಜಿಸಲಾಗಿತ್ತು. ಬೆಳಗಿನ 5.30ರ ಹೊತ್ತಿಗೆ ಉತ್ಸಾಹದಿಂದಲೇ ಆರಂಭವಾದ ಕಾರ್ಯಕ್ರಮದಲ್ಲಿ ಲೈವ್ ಮ್ಯೂಸಿಕ್ ಮತ್ತು ಜುಂಬಾ ಸೆಷನ್‌ಗಳು ಗಮನ ಸೆಳೆದವು.

ಒಲಿಂಪಿಕ್ ಪದಕ ವಿಜೇತೆ ಸೈನಾ ನೆಹ್ವಾಲ್ ವಾಕಥಾನ್‌ಗೆ ಚಾಲನೆ ನೀಡಿ, ಪಾಲ್ಗೊಂಡವರಲ್ಲಿ ಫಿಟ್ನೆಸ್ ಬಗ್ಗೆ ಉತ್ಸಾಹ ತುಂಬಿದರು. ‘ಹಿಂದುಳಿದ ಮಕ್ಕಳಿಗೆ ಎಐ ಚಾಲಿತ ಶಿಕ್ಷಣ ಸೌಲಭ್ಯವನ್ನು ಒದಗಿಸಲು ಸಹಾಯ ಮಾಡಲಿರುವ ಈ ಆಂದೋಲನದ ಭಾಗವಾಗಲು ನನಗೆ ಹೆಮ್ಮೆ ಎನಿಸುತ್ತದೆ’ ಎಂದು ಹೇಳಿದರು. ’ದೈಹಿಕ ಸಾಮರ್ಥ್ಯ ಯಾವಾಗಲೂ ನನ್ನ ಜೀವನದ ಪ್ರಮುಖ ಭಾಗವಾಗಿದೆ. ಪ್ರತಿಯೊಂದು ಸಣ್ಣ ಹೆಜ್ಜೆಯೂ ನಮ್ಮನ್ನು ದೊಡ್ಡ ಗುರಿಯತ್ತ ಕೊಂಡೊಯ್ಯುತ್ತದೆ ಎಂಬುದನ್ನು ಬ್ಯಾಡ್ಮಿಂಟನ್ ಕೋರ್ಟ್ ನನಗೆ ಕಲಿಸಿದೆ’ ಎಂದು ಸೈನಾ ಹೇಳಿದರು.

## 56 ಸಾವಿರ ಬಾಡಿಗೆ, 1.3 ಲಕ್ಷ ಖರ್ಚು: ಬೆಂಗಳೂರು ಜೀವನ ಕಷ್ಟ ಎಂದ ದಂಪತಿ

• ಉದಯವಾಹಿನಿ, ಬೆಂಗಳೂರು

ಜನಸಾಮಾನ್ಯರು ಇಲ್ಲಿ ಜೀವನ ನಡೆಸಲು ಪರದಾಡುವಂತಹ ಸ್ಥಿತಿ ಎದುರಾಗಿದೆ. ಇಲ್ಲಿನ ಬಾಡಿಗೆ ಹಾಗೂ ಖರ್ಚುಗಳು ಗಗನಕ್ಕೇರಿವೆ. ಪ್ರತಿ ತಿಂಗಳು 1.3 ಲಕ್ಷಕ್ಕೂ ಹೆಚ್ಚು ಖರ್ಚಾಗುತ್ತಿದ್ದು, ಇದರಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ದಂಪತಿ ಹೇಳಿಕೊಂಡಿರುವ ವಿಡಿಯೋ ಒಂದು ಭಾರಿ ಚರ್ಚೆ ಹುಟ್ಟುಹಾಕಿದೆ. ಸಾಮಾಜಿಕ ಮಾಧ್ಯಮ ಇನ್‌ಸ್ಟಾಗ್ರಾಮ್‌ನಲ್ಲಿ ದಂಪತಿಗಳು ವಿಡಿಯೊ ಒಂದನ್ನು ಹಂಚಿಕೊಂಡಿದ್ದಾರೆ. ಅದರ ಪ್ರಕಾರ ಇಬ್ಬರಿಗೂ ಉತ್ತಮ ಉದ್ಯೋಗ ಇದೆ. ಆದರೂ, ಮಾಸಿಕ ಖರ್ಚು ವೆಚ್ಚಗಳ ಕುರಿತು ಆತಂಕ ವ್ಯಕ್ತಪಡಿಸಿದ್ದಾರೆ.

ಐಷಾರಾಮಿ ಬದುಕಿಗಾಗಿ ಅಲ್ಲ, ದಿನನಿತ್ಯದ ಸಾಮಾನ್ಯ ಖರ್ಚಿಗೂ ಬೆಂಗಳೂರು ಬಲು ದುಬಾರಿ ಎಂದಿದ್ದಾರೆ. ದಂಪತಿ ಹೇಳಿರುವ ಪ್ರಕಾರ, ಬೆಂಗಳೂರಿನಲ್ಲಿ ದುಬಾರಿ ಎಂದರೆ, ಅದು ಮನೆಯ ಬಾಡಿಗೆ. ದಂಪತಿಯು ಅಪಾರ್ಟ್‌ಮೆಂಟ್ ಒಂದರಲ್ಲಿ ವಾಸಿಸುತ್ತಿದ್ದಾರೆ.

ಅದರ ಬಾಡಿಗೆ ತಿಂಗಳಿಗೆ 56 ಸಾವಿರ ಇದೆ ಎಂದು ಹೇಳಿಕೊಂಡಿದ್ದಾರೆ. ದಿನಸಿ, ಮನೆಗೆ ಬೇಕಾದ ಅಗತ್ಯ ವಸ್ತುಗಳು, ಇಂಟರ್ನೆಟ್ ಬಿಲ್, ವಿದ್ಯುತ್, ಶಾಪಿಂಗ್, ಹೊರಗಡೆ ಆಹಾರ ಸೇವಿಸುವುದು, ಪ್ರಯಾಣ ಮಾಡಲು ಮತ್ತು ಆನ್‌ಲೈನ್ ಚಂದಾದಾರಿಕೆಗಳು ಸೇರಿ ವೆಚ್ಚ ಇನ್ನೂ ಹೆಚ್ಚಾಗಿದೆ ಎಂದಿದ್ದಾರೆ. ಕಂಪನಿಯ ಕೆಲಸಗಳ ಒತ್ತಡದಿಂದಾಗಿ ಮನೆಗೆಲಸ ಮಾಡಲು ಕೆಲಸಗಾರರನ್ನೂ ನೇಮಿಸಿದ್ದೇವೆ. ಈ ಎಲ್ಲಾ ಖರ್ಚುಗಳು ಸೇರಿ ತಿಂಗಳಿಗೆ 1.3 ಲಕ್ಷ ಖರ್ಚು ಆಗುತ್ತಿದೆ. ಹಾಗಾಗಿ ಬೆಂಗಳೂರು ಹೆಚ್ಚು ಹಣ ಗಳಿಸುವವರನ್ನೂ ಕೂಡ ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸಬಲ್ಲದು ಎಂದು ಹೇಳಿಕೊಂಡಿದ್ದಾರೆ.

# ನರೇಂದ್ರ ಮೋದಿ ಬೆಂಗಳೂರು ಪ್ರವಾಸದ ವೇಳೆ ಬಾಂಬ್ ಸ್ಫೋಟದ ಬೆದರಿಕೆ

## ಬಂಧಿತ ಆರೋಪಿ ಲೋಹಿತ್ ಮಾನಸಿಕ ಅಸ್ವಸ್ಥ ಅಲ್ಲ ಎಂಬುವುದು ತನಿಖೆಯಲ್ಲಿ ಬಯಲು

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ 'ದಿ ಆರ್ಟ್ ಆಫ್ ಲಿವಿಂಗ್'ನ 45ನೇ ವಾರ್ಷಿಕೋತ್ಸವದಲ್ಲಿ ಭಾಗಿಯಾಗಲು ಬೆಂಗಳೂರಿಗೆ ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಪೊಲೀಸ್ ಕಂಟ್ರೋಲ್ ರೂಂಗೆ ಫೋನ್ ಕರೆ ಮಾಡಿ ಎರಡು ಕಡೆಗಳಲ್ಲಿ ಬಾಂಬ್ ಸ್ಫೋಟದ ಬೆದರಿಕೆ ಹಾಕಿದ್ದ ವ್ಯಕ್ತಿ ಲೋಹಿತ್ ಎಂಬಾತನ ಬಂಧನ ಆಗಿದೆ. ಬಂಧಿತ ಲೋಹಿತ್ ಮಾನಸೀಕ ಅಸ್ವಸ್ಥ ಎಂದು ಆರಂಭದಲ್ಲಿ ಹೇಳಲಾಗಿತ್ತು. ಆದರೆ, ಪೊಲೀಸ್ ವಿಚಾರಣೆಯ ವೇಳೆ ಮಾನಸಿಕ ಅಸ್ವಸ್ಥ ಅಲ್ಲ ಎಂಬುವುದು ಖಚಿತವಾಗಿದೆ.

ಭಾನುವಾರ ಬೆಂಗಳೂರಿಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಸಂಚರಿಸಿದ ನೈಸ್ ರಸ್ತೆಯ ಪಕ್ಕದಲ್ಲೇ ಎರಡು ಜೆಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಇದು ಆತಂಕಕ್ಕೆ ಎಡೆಮಾಡಿಕೊಟ್ಟಿತ್ತು. ಈ ನಡುವೆ ಬೆಳಗ್ಗೆ 7.30ಕ್ಕೆ ವ್ಯಕ್ತಿಯೊಬ್ಬ ಪೊಲೀಸ್ ಕಂಟ್ರೋಲ್ ರೂಂಗೆ ಫೋನ್ ಕರೆ ಮಾಡಿ ಎಚ್‌ಎಎಲ್ ಹಾಗೂ ಆರ್ಟ್ ಆಫ್ ಲಿವಿಂಗ್ ಬಳಿ ಬಾಂಬ್ ಸ್ಫೋಟದ ಬೆದರಿಕೆ ಹಾಕಿದ್ದ. ಕೂಡಲೇ ತನಿಖೆ ನಡೆಸಿದ ಪೊಲೀಸರು ಲೋಹಿತ್ ಎಂಬಾತನನ್ನು ವಶಕ್ಕೆ ಪಡೆದುಕೊಂಡಿದ್ದರು. ಈ ವೇಳೆ ಲೋಹಿತ್ ಮಾನಸಿಕ ಅಸ್ವಸ್ಥ ಎಂದು ಪೋಷಕರು ಹೇಳಿಕೊಂಡಿದ್ದರು.




ಆದರೆ, ಕೋರಮಂಗಲ ಪೊಲೀಸರು ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದ್ದರು. ಈ ವೇಳೆ ಆರೋಪಿ ಮಾನಸಿಕ ಅಸ್ವಸ್ಥ ಅಲ್ಲ ಎಂಬುವುದು ಸಾಬೀತಾಗಿದೆ. ಅಲ್ಲದೆ, ಈ ಕುರಿತಾಗಿ ಆರೋಪಿಯ ಪೋಷಕರು ಸುಳ್ಳು ಹೇಳಿಕೆ ನೀಡಿದ್ದಾರೆ ಎಂಬುವುದು ಕೂಡಾ ದೃಢಪಟ್ಟಿದೆ.

**ಈ ಹಿಂದೆಯೂ ಬೆದರಿಕೆ ಹಾಕಿದ್ದ ಆರೋಪಿ**

ಬಾಂಬ್ ಸ್ಫೋಟದ ಬೆದರಿಕೆ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದರು. ಕೋರಮಂಗಲ ಠಾಣಾ ಪೊಲೀಸರು ಮತ್ತು ಸಿಸಿಬಿ ಪೊಲೀಸರು ಜಂಟಿ ಕಾರ್ಯಾಚರಣೆ ಮಾಡಿ ಬೆದರಿಕೆ ಹಾಕಿದ್ದ ಆರೋಪಿ ಲೋಹಿತ್ (40) ಎಂಬಾತನನ್ನು ವಶಕ್ಕೆ ಪಡೆದುಕೊಂಡಿದ್ದರು.

ಲೋಹಿತ್ ಕೋರಮಂಗಲ ಮನೆಯಲ್ಲಿದ್ದ ಸಂದರ್ಭದಲ್ಲೇ ಆತನನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು. ಈ ಹಿಂದೆ ಕೂಡಾ ಗಣ್ಯರು ಬೆಂಗಳೂರಿಗೆ ಆಗಮಿಸಿದ್ದ ವೇಳೆ ಲೋಹಿತ್ ಇದೇ ರೀತಿಯಲ್ಲಿ ಫೋನ್ ಕರೆ ಮಾಡಿ ಬಾಂಬ್ ಸ್ಫೋಟದ ಬೆದರಿಕೆ ಹಾಕಿದ್ದ. ಹಾಗಾಗಿ ಈ ಹಿಂದೆಯೂ ಆತ ಬಂಧನಕ್ಕೆ ಒಳಗಾಗಿದ್ದ. ಬಳಿಕ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದ. ಮತ್ತೊಮ್ಮೆ ಇಂತಹದ್ದೇ ವರ್ತನೆ ತೋರಿಸಿದ್ದಾನೆ. ಅಲ್ಲದೆ, ಲೋಹಿತ್ ಹಿನ್ನಲೆ ಏನು ಎಂಬ ಬಗ್ಗೆಯೂ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.



ಜೆಲೆಟಿನ್ ಕಡ್ಡಿಗಳು ಪತ್ತೆಯಾದ ಹಿನ್ನಲೆಯಲ್ಲಿ ಸ್ಥಳಕ್ಕೆ ಕೇಂದ್ರ ವಲಯದ ಐಜಿಪಿ ಎಸ್ ಗಿರೀಶ್ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್ ಗೌಡ ಭೇಟಿ ನೀಡಿದ್ದರು.

ಕಗ್ಗಲೀಪುರ ಪೊಲೀಸ್ ಠಾಣೆಯ ಸಿಬ್ಬಂದಿ ಸ್ಥಳ ಮಹಜರು ನಡೆಸಿದ್ದಾರೆ. ಜೆಲೆಟಿನ್ ಕಡ್ಡಿಯನ್ನು ಯಾವ ಉದ್ದೇಶಕ್ಕಾಗಿ ಅಲ್ಲಿ ತರಲಾಗಿತ್ತು ಎಂಬುವುದರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.

**ಚುರುಕುಗೊಂಡ ತನಿಖೆ**

**ಈ ನಡುವೆ ನೈಸ್ ರಸ್ತೆಯಲ್ಲಿ ಸಿಕ್ಕ ಎರಡು ಜೆಲೆಟಿನ್ ಕಡ್ಡಿಗಳ ಕುರಿತಾಗಿಯೂ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಬಾಂಬ್ ಬೆದರಿಕೆ ಹಾಕಿದ್ದ ಲೋಹಿತ್‌ಗೂ ಜೆಲೆಟಿನ್ ಕಡ್ಡಿಗಳು ಪತ್ತೆಯಾದ ಪ್ರಕರಣಕ್ಕೂ ಏನಾದರೂ ಸಂಬಂಧ ಇದ್ಯಾ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ.**

ಈಗಾಗಲೇ ತನಿಖೆಗಾಗಿ ಆರು ತಂಡಗಳನ್ನು ರಚನೆ ಮಾಡಲಾಗಿದೆ.ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. 50ಕ್ಕೂ ಹೆಚ್ಚು ಸಿಬ್ಬಂದಿಯನ್ನು ಒಳಗೊಂಡ 6 ತಂಡಗಳು ವಿವಿಧ ಆಯಾಮದಲ್ಲಿ ತನಿಖೆ ನಡೆಸಲಿದೆ.ಕಲ್ಲು ಕ್ವಾರಿಗಳಲ್ಲಿ ಜೆಲೆಟಿನ್ ದಾಸ್ತಾನು ಹಾಗೂ ಜೆಲೆಟಿನ್ ಸರಬರಾಜು ಮಾಡುವವರ ಕುರಿತಾಗಿಯೂ ತನಿಖೆ ನಡೆಸಲಾಗುತ್ತಿದೆ. ಸಿಸಿ ಕ್ಯಾಮೆರಾಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ.

## ಜಿಮ್ ಪ್ರಕರಣಗಳ ಹಿನ್ನೆಲೆ: ರಾಜ್ಯವ್ಯಾಪಿ ಸಮಗ್ರ ತನಿಖೆಗೆ ಆಗ್ರಹ!

### ಸಿಎಂ ಮತ್ತು ಗೃಹ ಇಲಾಖೆಗೆ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯಿಂದ ಮನವಿ ಸಲ್ಲಿಕೆ !

• ಉದಯವಾಹಿನಿ, ನೆಲಮಂಗಲ

ಮಹಾರಾಷ್ಟ್ರದ ನಾಸಿಕ್‌ನ ಐಟಿ ಕಂಪನಿಯಲ್ಲಿ ಬಹಿರಂಗಗೊಂಡಿರುವ ಗಂಭೀರ ಪ್ರಕರಣದ ಹಿನ್ನೆಲೆ ರಾಜ್ಯದ ವಿವಿಧ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಮತ್ತು ಜಿಮ್‌ಗಳಲ್ಲಿ ಮಹಿಳಾ ಸುರಕ್ಷತೆ, ಧಾರ್ಮಿಕ ಒತ್ತಡ ಮತ್ತು ಕಾರ್ಯಸ್ಥಳದ ದುರ್ಬಳಕೆ ಕುರಿತಾಗಿ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ವತಿಯಿಂದ ನೆಲಮಂಗಲದ ಮಾನ್ಯ ತಹಶೀಲ್ದಾರ್ ಕಚೇರಿಯ ಮೂಲಕ ಮುಖ್ಯ ಮಂತ್ರಿಗಳು, ಗೃಹ ಸಚಿವಾಲಯಕ್ಕೆ ಮನವಿ ಸಲ್ಲಿಸಲಾಯಿತು.

ಈ ಸಂಧರ್ಭದಲ್ಲಿ ಬಿಜೆಪಿ ಮುಖಂಡರಾದ ಶ್ರೀ. ರವಿ ನೆಲಮಂಗಲ, ಉದ್ಯಮಿಗಳಾದ ಶ್ರೀ.ಜಯರಾಮ ಎಸ್, ಶ್ರೀ.ಬೊಮ್ಮಜ್ಜಯ್ಯ, ಸನಾತನ ಸಂಸ್ಥೆಯ ಸೌ. ಜಯಲಕ್ಷ್ಮಿ, ಹಿಂದೂ ಜನಜಾಗೃತಿ ಸಮಿತಿಯ ಶ್ರೀ.ರಾಮಮೂರ್ತಿ, ಶ್ರೀ ವೆಂಕಟೇಶಮೂರ್ತಿ ಮುಂತಾದವರು ಉಪಸ್ಥಿತರಿದ್ದರು.



ಈ ವಿಷಯಕ್ಕೆ ಸಂಬಂಧಿಸಿದಂತೆ, ಇತ್ತೀಚೆಗೆ 19 ಏಪ್ರಿಲ್ 2026, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಹಲವು ಹಿಂದೂ ಸಂಘಟನೆಗಳ ಪ್ರಮುಖರು ಮತ್ತು ಧರ್ಮಾಭಿಮಾನಿಗಳು ಭಾಗವಹಿಸಿದ್ದರು.

ಪ್ರತಿಭಟನೆಯಲ್ಲಿ ಮಾತನಾಡಿದ ಮುಖಂಡರು, ನಾಸಿಕ್‌ನಲ್ಲಿ ನಡೆದ ಘಟನೆ ಕೇವಲ ಮಹಿಳಾ ಹಿಂಸೆ ಪ್ರಕರಣವಲ್ಲದೆ, ಕಾರ್ಯಸ್ಥಳದಲ್ಲಿ ನಡೆಯುತ್ತಿರುವ ಗಂಭೀರ ದುರುಪಯೋಗ ಮತ್ತು ಸಂಘಟಿತ ಅಪರಾಧದ ಸೂಚನೆಯಾಗಿರಬಹುದು ಎಂದು ಕಳವಳ ವ್ಯಕ್ತಪಡಿಸಿದ್ದರು.

ಮಹಿಳಾ ನೌಕರರಿಂದ ಬಂದ ದೂರಿನ ಪ್ರಕಾರ, ಕೆಲವು ಕಂಪನಿಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ, ಬೆದರಿಕೆ, ಧಾರ್ಮಿಕ ಒತ್ತಡ ಸೇರಿದಂತೆ ಗಂಭೀರ ಆರೋಪಗಳು ಕೇಳಿಬರುತ್ತಿದ್ದು, ಇಂತಹ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿ ನಿಷ್ಪಕ್ಷಪಾತ ತನಿಖೆ ನಡೆಸುವುದು ಅಗತ್ಯವಾಗಿದೆ ಎಂದು ಸಮಿತಿ ಮನವಿ ಮಾಡಿದೆ. ಸಮಿತಿ ತಿಳಿಸಿರುವಂತೆ, ಮಹಿಳಾ ಗೌರವ ಮತ್ತು ಸುರಕ್ಷತೆ ಯಾವುದೇ ಸಮಾಜದ ಮೂಲಭೂತ ಅಂಶವಾಗಿದ್ದು, ಇಂತಹ ಪ್ರಕರಣಗಳಲ್ಲಿ ತಕ್ಷಣ ಕ್ರಮ ಕೈಗೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಸ್ಪಷ್ಟಪಡಿಸಲಾಯಿತು.

## ಬೆಂಗಳೂರಿಗೆ ಬಂದಾಗ ಫೋನ್ ಮಾಡಿ; ಹಾರೈಕೆ

• ಉದಯವಾಹಿನಿ, ಬೆಂಗಳೂರು



ತಮಿಳುನಾಡುವ ವಿಧಾನಸಭೆ ಚುನಾವಣೆಯಲ್ಲಿ ಭರ್ಜರಿ ಜಯ ಸಾಧಿಸಿ ಮುಖ್ಯಮಂತ್ರಿಯಾಗಿರುವ ನೀವು ಇತಿಹಾಸ ನಿರ್ಮಿಸಿದ್ದೀರಿ. ಇದಕ್ಕಾಗಿ ನಿಮಗೆ ಅಭಿನಂದನೆ. ಇದು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಮಿಳುನಾಡು ನೂತನ ಮುಖ್ಯಮಂತ್ರಿ ದಳಪತಿ ವಿಜಯ್ ಅವರಿಗೆ ಶುಭ ಕೋರಿರುವ ಪರಿ. ಹೌದು, ತಮಿಳುನಾಡು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ವಿಜಯ್ ಅವರಿಗೆ, ಕರ್ನಾಟಕ ಸಿಎಂ ಸಿದ್ದರಾಮಯ್ ಅವರು ದೂರವಾಣಿ ಕರೆ ಮಾಡಿ ಅಭಿನಂದನೆ ಸಲ್ಲಿಸಿದ್ದಾರೆ. ಅಲ್ಲದೇ ಮುಂದಿನ ಬಾರಿ ಬೆಂಗಳೂರಿಗೆ ಬಂದಾಗ ತಮ್ಮನ್ನು ಭೇಟಿ ಮಾಡುವಂತೆ ವಿಜಯ್ ಅವರಿಗೆ ಸಿದ್ದರಾಮಯ್ಯ ತಿಳಿಸಿದ್ದಾರೆ. ಸಿದ್ದರಾಮಯ್ಯ ಅವರು ವಿಜಯ್ ಜೊತೆ ನಡೆಸಿದ ಚುಟುಕು ಸಂಭಾಷಣೆಯ ವಿಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಈ ಆಪ್ತ ಸಮಾಲೋಚನೆ ಇದೀಗ ವೈರಲ್ ಆಗಿದೆ. ನೆರೆ ರಾಜ್ಯದ ನೂತನ ಮುಖ್ಯಮಂತ್ರಿಗೆ ಕರ್ನಾಟಕ ಸಿಎಂ ಶುಭ ಕೋರಿರುವುದು, ದಕ್ಷಿಣ ರಾಜಕಾರಣದ ಕುರಿತ ವಿಶ್ಲೇಷಣೆಗಳಿಗೆ ದಾರಿ ಮಾಡಿಕೊಟ್ಟಿದೆ. ತಮಿಳುನಾಡು ವಿಧಾನಸಭೆ ಚುನಾವಣೆ ಘೋಷಣೆ ದಿನವೇ, ಟಿವಿಕೆ ಪ್ರದರ್ಶನಕ್ಕೆ ಅಚ್ಚರಿ ವ್ಯಕ್ತಪಡಿಸಿದ್ದ ಸಿದ್ದರಾಮಯ್ಯ, ಅತಿ ಕಡಿಮೆ ಅವಧಿಯಲ್ಲಿ ರಾಜ್ಯದ ಜನರ ಮನಗೆಲ್ಲುವಲ್ಲಿ ವಿಜಯ್ ಯಶಸ್ವಿಯಾಗಿದ್ದಾರೆ ಎಂದು ಮೆಚ್ಚುಗೆಯ ಮಾತುಗಳನ್ನಾಡಿದ್ದರು. ಇದೀಗ ಖುದ್ದು ದೂರವಾಣಿ ಕರೆ ಮಾಡಿ, ಸಿಎಂ ದಳಪತಿ ಅವರನ್ನು ಅಭಿನಂದಿಸಿದ್ದಾರೆ.

# ವರದಕ್ಷಿಣೆ ಕಿರುಕುಳ ಬೆಂಗಳೂರಲ್ಲೇ ಹೆಚ್ಚು, ವರದಿಯಲ್ಲಿ ಬಯಲು

## ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೋ ಬಿಡುಗಡೆಗೊಳಿಸಿರುವ ವರದಿಯಲ್ಲಿ ಈ ಅಂಕಿ–ಅಂಶ

• ಉದಯವಾಹಿನಿ, ಬೆಂಗಳೂರು

ಐಟಿ ಸಿಟಿ, ಸಿಲಿಕಾನ್ ಸಿಟಿ ಎಂದೆಲ್ಲ ಖ್ಯಾತಿ ಪಡೆದ ಬೆಂಗಳೂರಿನಲ್ಲಿ ವರದಕ್ಷಿಣೆ ಕಿರುಕುಳ ಪ್ರಕರಣಗಳು ಕೂಡ ಏರಿಕೆಯಾಗಿರುವುದು ಆತಂಕ ಸೃಷ್ಟಿಸಿದೆ. ದೇಶದ ಹಲವು ಮಹಾನಗರಗಳಲ್ಲಿನ ವರದಕ್ಷಿಣೆ ಪ್ರಕರಣಗಳ ಕುರಿತು ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೋ ಬಿಡುಗಡೆಗೊಳಿಸಿರುವ ವರದಿಯಲ್ಲಿ ಈ ಅಂಕಿ- ಅಂಶ ಬಯಲಾಗಿದೆ.

ವರದಕ್ಷಿಣೆ ನಿಷೇಧ ಕಾಯಿದೆ-1961 ರಡಿ ವಿವಿಧ ನಗರಗಳಲ್ಲಿ 2024 ರಲ್ಲಿ 1,008 ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಬೆಂಗಳೂರಿನಲ್ಲಿ 878 (ಶೇ.87) ಪ್ರಕರಣ ದಾಖಲಾಗಿವೆ. ವರದಕ್ಷಿಣೆ ಸಂಬಂಧಿತ ಪ್ರಕರಣಗಳಲ್ಲಿ 25 ಜನರು ಸಾವನ್ನಪ್ಪಿದ್ದಾರೆ.

ದಕ್ಷಿಣ ಭಾರತದ ಇತರೆ ನಗರಗಳಾದ ಚೆನ್ನೈ, ಕೋಝಿಕೋಡ್, ಕೊಚ್ಚಿ, ಕೊಯಮತ್ತೂರು ನಗರಗಳಲ್ಲಿ ವರದಕ್ಷಿಣೆ ಸಂಬಂಧಿತ ಸಾವಿನ ಸಂಖ್ಯೆ ಶೂನ್ಯವಾಗಿದ್ದರೆ, ಹೈದರಾಬಾದ್‌ನಲ್ಲಿ 14 ಪ್ರಕರಣಗಳು ಮಾತ್ರ ದಾಖಲಾಗಿವೆ. ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ 109 ಪ್ರಕರಣ ದಾಖಲಾಗಿವೆ. ವರದಕ್ಷಿಣೆ ಸಂಬಂಧಿತ ಪ್ರಕರಣಗಳಲ್ಲಿ ಬೆಂಗಳೂರಿನ ಬಳಿಕ 48 ಪ್ರಕರಣಗಳು ದಾಖಲಾಗಿರುವ ಲಖನೌ ಎರಡನೇ ಸ್ಥಾನದಲ್ಲಿದೆ.

ಮುಂಬಯಿನಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದಡಿ 857 ಪ್ರಕರಣ ದಾಖಲಾಗಿದ್ದರೆ, ಬೆಂಗಳೂರಿನಲ್ಲಿ 897 ಪ್ರಕರಣ ದಾಖಲಾಗಿವೆ. ಗಂಡನಿಂದ ಪತ್ನಿಯ ಮೇಲಾಗುವ ದೌರ್ಜನ್ಯ ಸಂಬಂಧ ರಾಜ್ಯದಲ್ಲಿ 2,947 ಪ್ರಕರಣಗಳು ದಾಖಲಾಗಿವೆ. ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಅಲ್ಲಿ 21,266 ಕೇಸ್‌ಗಳಿವೆ. ಉಳಿದಂತೆ ಮಹಾರಾಷ್ಟ್ರದಲ್ಲಿ 10,538 ಹಾಗೂ ರಾಜಸ್ಥಾನದಲ್ಲಿ 10,578 ಪ್ರಕರಣಗಳು ವರದಿಯಾಗಿವೆ.



**ಮಹಿಳೆಯರ ಮೇಲಿನ ದೌರ್ಜನ್ಯವೂ ಹೆಚ್ಚಳ**

**2024 ರ ಅಪರಾಧ ದಾಖಲೆಗಳ ವರದಿಯ ಪ್ರಕಾರ, ವರದಕ್ಷಿಣೆ ಪ್ರಕರಣಗಳ ಜತೆಗೆ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಕೂಡ ನಗರದಲ್ಲಿ ಏರಿಕೆ ಕಂಡಿವೆ. 1,051 ಮಹಿಳಾ ದೌರ್ಜನ್ಯ ಪ್ರಕರಣಗಳು ನಗರದಲ್ಲಿ ದಾಖಲಾಗಿದ್ದು, ವಿವಿಧ ಮಹಾನಗರಗಳ ಪೈಕಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ.**

**ಪತಿಗೆ ನೇಣು ಕುಣಿಕೆ ಫೋಟೊ ಕಳಿಸಿ ಆತ್ಮಹತ್ಯೆ**

ಗಂಡನಿಗೆ ನೇಣು ಕುಣಿಕೆ ಫೋಟೋವನ್ನು ವಾಟ್ಸ್ಯಾಪ್‌ನಲ್ಲಿ ಕಳಿಸಿ ನವವಿವಾಹಿತೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಯಶವಂತಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಎಸ್.ಎಲ್.ನಗರದ ನಿವಾಸಿ ಶಾರದಾ (40) ಆತ್ಮಹತ್ಯೆಗೆ ಶರಣಾದವರು. ವರದಕ್ಷಿಣೆ ಕಿರುಕುಳ ಆರೋಪದ ಮೇರೆಗೆ ಅವರ ಪತಿ ಮಹೇಶ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಶಾರದಾ ಹಾಗೂ ಮಹೇಶ್ ಮದುವೆಯಾಗಿ ಒಂಬತ್ತು ತಿಂಗಳಾಗಿತ್ತು. ಎಸ್‌ಎಲ್ ನಗರದಲ್ಲಿ ನೆಲೆಸಿದ್ದ ದಂಪತಿ ನಡುವೆ ಇತ್ತೀಚೆಗೆ ಕೌಟುಂಬಿಕ ವಿಚಾರಗಳಿಗೆ ಜಗಳ ನಡೆಯುತ್ತಿತ್ತು. ಮಂಗಳವಾರ ರಾತ್ರಿ ಕೊಠಡಿಯಲ್ಲಿ ಪ್ರತ್ಯೇಕವಾಗಿ ಮಲಗಿದ್ದ ಶಾರದಾ, ತಡರಾತ್ರಿ ತನ್ನ ಗಂಡನಿಗೆ ವಾಟ್ಸ್ಯಾಪ್‌ನಲ್ಲಿ ನೇಣುಕುಣಿಕೆ ಪೋಟೊ ಕಳಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ನಡುಮನೆಯಲ್ಲಿ ಮಲಗಿದ್ದ ಮಹೇಶ್ ಬೆಳಗ್ಗೆ ನಿದ್ರೆಯಿಂದ ಎದ್ದ ಬಳಿಕ ವಾಟ್ಸ್ಯಾಪ್ ನೋಡಿದಾಗ ಪತ್ನಿ ನೇಣುಕುಣಿಕೆ ಫೋಟೊ ಹಾಗೂ ಸಂದೇಶ ಕಳಿಸಿರುವುದನ್ನು ಕಂಡು ಕಂಗಾಲಾಗಿದ್ದರು. ಕೊಠಡಿಗೆ ತೆರಳಿ ನೋಡಿದಾಗ ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ನನ್ನ ಸಹೋದರಿ ಸಾವಿಗೆ ವರದಕ್ಷಿಣೆ ಕಿರುಕುಳ ಕಾರಣ’ ಆರೋಪಿಸಿ ಶಾರದಾ ಅಣ್ಣ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಮಹೇಶ್‌ನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

## ಕೆಲಸ ಕೊಡಿಸುವುದಾಗಿ ವಂಚನೆ: ಎಫ್‌ಐಆರ್

• ಉದಯವಾಹಿನಿ, ಬೆಂಗಳೂರು

ವಿಧಾನಸೌಧದಲ್ಲಿ ‘ಡಿ’ ಗ್ರೂಪ್ ನೌಕರಿ ಕೊಡಿಸುವುದಾಗಿ ನಂಬಿಸಿ 24 ಲಕ್ಷ ಪಡೆದು ವಂಚಿಸಿದ್ದ ಪ್ರಕರಣದ ಸಂಬಂಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ರಾಜಾಜಿನಗರದ ನಿವಾಸಿ ಪುಷ್ಪಾ ನೀಡಿದ ದೂರಿನ ಮೇಲೆ ಡಾಲರ್ಸ್ ಕಾಲೊನಿ ಆರ್.ಎಂ.ವಿ ಎರಡನೇ ಹಂತದ ಎಚ್.ಜೆ.ಪವಿತ್ರಾಗೌಡ ಹಾಗೂ ಅವರ ಸಹೋದರ ಚರಣ್ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಮೂಲಗಳು ಹೇಳಿವೆ. 15 ವರ್ಷದಿಂದ ದೂರುದಾರೆ ಪುಷ್ಪಾ ಹಾಗೂ ಹಾಸನದ ಎಚ್.ಜೆ.ಪವಿತ್ರಾಗೌಡ ಪರಸ್ಪರ ಪರಿಚಯ ಇದ್ದರು. ಕೆಲಸದ ನಿಮಿತ್ತ ಪವಿತ್ರಾಗೌಡ ಆಗಾಗ್ಗೆ ವಿಧಾನಸೌಧಕ್ಕೆ ಬರುತ್ತಿದ್ದರು.

‘ಎಲ್ಲಾ ಸಚಿವರೂ ನನಗೆ ಪರಿಚಯವಿದ್ದು, ವಿಧಾನಸೌಧದಲ್ಲಿ ಯಾರಿಗಾದರೂ ಕೆಲಸ ಬೇಕಿದ್ದರೆ ಕೊಡಿಸುತ್ತೇನೆ’ ಎಂದು ನಂಬಿಸಿದ್ದರು. ಒಂದು ಹುದ್ದೆಗೆ 15 ಲಕ್ಷ ಆಗಲಿದೆ ಎಂದೂ ತಿಳಿಸಿದ್ದರು.

ಆರೋಪಿ ಮಾತು ನಂಬಿದ್ದ ಪುಷ್ಪಾ, ತಮಗೆ ಪರಿಚಯವಿದ್ದ ಶಶಾಂಕ್ ಹಾಗೂ ಶಾಲಿನಿಗೂ ಮಾಹಿತಿ ನೀಡಿದ್ದರು. ಶಶಾಂಕ್ ತಮ್ಮ ಅಜ್ಜಿಗೆ ಸೇರಿದ ಚಿನ್ನಾಭರಣವನ್ನು ಅಡಮಾನವಿಟ್ಟು ಆರೋಪಿಗಳಿಗೆ ಹಣ ನೀಡಿದ್ದರು. ಶಾಲಿನಿ ಸಹ ಆಭರಣ ಗಿರವಿಯಿಟ್ಟು ಹಣ ಹೊಂದಿಸಿ, ಆರ್‌ಟಿಜಿಎಸ್ ಮೂಲಕ ಪವಿತ್ರಾಗೌಡಗೆ ವರ್ಗಾವಣೆ ಮಾಡಿದ್ದರು’ ಎಂದು ಮೂಲಗಳು ಹೇಳಿವೆ.

**ಹಣ ವಾಪಸ್ ಕೇಳಿದ್ದಕ್ಕೆ ನಿಂದನೆ:** ಹಲವು ತಿಂಗಳು ಕಳೆದರೂ ಕೆಲಸವನ್ನು ಕೊಡಿಸದೇ ಇದ್ದಾಗ ಹಣ ವಾಪಸ್ ಕೊಡುವಂತೆ ಪುಷ್ಪಾ ಮನವಿ ಮಾಡಿದ್ದರು. ಹಣ ವಾಪಸ್ ಕೊಡದಿದ್ದರೆ ಪೊಲೀಸರಿಗೆ ದೂರು ನೀಡಲಾಗುವುದು ಎಂಬುದಾಗಿ ಹೇಳಿದ್ದರು. ಆಗ 10 ಲಕ್ಷವನ್ನು ಬ್ಯಾಂಕ್ ಖಾತೆಗೆ ವಾಪಸ್ ಹಾಕಿದ್ದರು. ಉಳಿದ ಹಣವನ್ನು ಮನೆಗೆ ಬಂದರೆ ಕೊಡುವುದಾಗಿ ಪವಿತ್ರಾಗೌಡ ಹೇಳಿದ್ದರು.

ಅದರಂತೆ, ಡಾಲರ್ಸ್ ಕಾಲೊನಿಯಲ್ಲಿರುವ ಮನೆಯ ಬಳಿಗೆ ಹೋದಾಗ ದೂರುದಾರೆಯ ಮೊಬೈಲ್ ಕಸಿದುಕೊಂಡು ನಿಂದಿಸಿದ್ದರು. ಪುಷ್ಪಾ ಅವರನ್ನು ಕತ್ತರಿಸಿ ಹಾಕುವುದಾಗಿಯೂ ಆರೋಪಿ ಬೆದರಿಕೆ ಹಾಕಿದ್ದರು ಎಂದು ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

**ದತ್ತಾಂಶ ಅಳಿಸಿರುವ ಆರೋಪ:** ದೂರುದಾರರ ಮೊಬೈಲ್‌ನಲ್ಲಿದ್ದ ಚಾಟ್ ಗಳು, ಫೋಟೊಗಳು, ದಾಖಲೆಗಳನ್ನು ಆರೋಪಿ ಅಳಿಸಿಹಾಕಿದ್ದು, ಸಾಕ್ಷ್ಯ ನಾಶ ಪಡಿಸಲಾಗಿದೆ ಎಂದು ಪೊಲೀಸರು ಹೇಳಿದರು.

## ಸರ್ಕಾರಿ ಉದ್ಯೋಗದ ಆಕಾಂಕ್ಷಿಗಳಿಗೆ ಅನ್ಯಾಯ!

### ಅಧಿಸೂಚನೆ ಹೊರಡಿಸದೆ ಇರುವ ಸರ್ಕಾರದ ನಡೆಗೆ ಕಿಡಿ

• ಉದಯವಾಹಿನಿ, ಬೆಂಗಳೂರು

ಐದು ಪಾಲಿಕೆಯ ಆರೋಗ್ಯ, ಕಂದಾಯ ಮತ್ತು ಇಂಜನಿಯರ್ ಮತ್ತು ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಎ.ಅಮೃತ್ ರಾಜ್ ರವರು ಮಾತನಾಡಿ ಆಯುಕ್ತರ ಕಛೇರಿಯಲ್ಲಿ ಸೌಲಭ್ಯಗಳ ಪಡೆಯುವ ಕಡತಗಳಲ್ಲಿ ವಿನಾಕಾರಣ ವಿಳಂಬವಾಗುತ್ತಿದೆ. ಮೃತಪಟ್ಟ ಅಧಿಕಾರಿ, ನೌಕರರ ಕುಟುಂಬದವರಿಗೆ ನಿವೃತ್ತಿ ವೇತನ ಉಪದಾನ ಮತ್ತು ಇನ್ನಿತರ ಆರ್ಥಿಕ ಸೌಲಭ್ಯವನ್ನು ಪಾಲಿಕೆಯಿಂದ ನೀಡುವುದಕ್ಕೆ ವಿಳಂಬದಿಂದ ಕುಟುಂಬದವರು ಸಂಕಷ್ಟ ಎದುರಿಸುತ್ತಿದ್ದಾರೆ.

ಅಧಿಕಾರಿ, ನೌಕರರಿಗೆ ನಿವೃತ್ತಿ, ಉಪದಾನವನ್ನು ಸಕಾಲಕ್ಕೆ ನೀಡುವಂತೆ ಕ್ರಮ. ಪಾಲಿಕೆ ನೌಕರರಿಗೆ ನಿಗದಿತ ದಿನಾಂಕದಂದು ವೇತನ ಪಾವತಿ ಬಗ್ಗೆ ಕ್ರಮ.

ರಜೆ, ವಾರ್ಷಿಕ ವೇತನ, ಬಡ್ತಿ, ವೇತನ ಶ್ರೇಣಿ, ಟೈಮ್ ಬಾಂಡ್, ಇನ್ನಿತರ ಆರ್ಥಿಕ ಸೌಲಭ್ಯ ಪಡೆಯಲು ವಿಳಂಬವಾಗುತ್ತಿರುವುದರಿಂದ ಕೊಡಲೆ ಅಗತ್ಯ ಕ್ರಮ.

ಅಧಿಕಾರಿ ಮತ್ತು ನೌಕರರಿಗೆ ಮತ್ತು ಅವಲಂಬಿತ ಕುಟುಂಬದವರಿಗೆ ಆರೋಗ್ಯ ಚಿಕಿತ್ಸೆ ಪಡೆಯಲು ಆಸ್ಪತ್ರೆ ಬಿಲ್ಲು ಪಾವತಿ ಮತ್ತು ಆಸ್ಪತ್ರೆಗಳ ಜೊತೆಯಲ್ಲಿ ಒಪ್ಪಂದ ಮಾಡಿಕೊಳ್ಳಬೇಕು. ಜಿಬಿಎ ಜಾರಿಯಾದ ನಂತರ ಅರ್ಹ ಅಧಿಕಾರಿ, ನೌಕರರಿಗೆ ವಸತಿಗೃಹ ಮಂಜೂರಾತಿ ಹಂಚಿಕೆಗೆ ಸೂಕ್ತ ಕ್ರಮ. ಅನವ್ಯಶಕ ಇಲ್ಲದೇ ಇರುವ ಉನ್ನತ ಹುದ್ದೆ ಗಳಿಗೆ ಕಡಿವಾಣ ಹಾಕಬೇಕು.



ವೃಂದ ಮತ್ತು ನೇಮಕಾತಿ ನಿಯಮಾವಳಿ ಅಧಿಕಾರಿ, ನೌಕರರಿಗೆ ಮುಂಬಡ್ತಿ ಪಡೆಯುವಲ್ಲಿ ವಿಳಂಬವಾಗುತ್ತಿದೆ ಈ ಸಮಸ್ಯೆ ಬಗೆಹರಿಸಿ ಸೂಕ್ತ ಸಮಯಕ್ಕೆ ಬಡ್ತಿ ಸಿಗಬೇಕು. 2026ಸೇವಾ ಜೇಷ್ಠತಾಪಟ್ಟಿ ಅಂತಿಮಗೊಳಿಸಬೇಕು.

ಅಧಿಕಾರಿ ಮತ್ತು ನೌಕರರಿಗೆ ನಾಡಪ್ರಭು ಕೆಂಪೇಗೌಡ ದಿನಾಚರಣೆ ಅಂಗವಾಗಿ ಕ್ರೀಡಾಕೂಟ ಆಯೋಜಿಸಬೇಕು. ಪಂಚ ಪಾಲಿಕೆಯಲ್ಲಿ ಆಡಳಿತ ಶಾಖೆ, ಆರೋಗ್ಯ, ಹಣಕಾಸು ಇಲಾಖೆ ಅಗತ್ಯ ಸಿಬ್ಬಂದಿಗಳು ಇಲ್ಲದೇ ಕೆಲಸ ಕಾರ್ಯ ನಿರ್ವಹಣೆ, ಕಡತಗಳ ವಿಲೇವಾರಿ ವಿಳಂಬವಾಗುತ್ತಿದೆ ಇದರ ಕುರಿತು ಸಮಸ್ಯೆ, ಬೇಡಿಕೆ ಈಡೇರಿಕೆಗಾಗಿ ಉಪಮುಖ್ಯಮಂತ್ರಿಗಳ ಗಮನ ಸೆಳೆಯಲು ಪೋಸ್ಟ್ ಕಾರ್ಡ್ ಚಳುವಳಿ ಮತ್ತು ಆಡಳಿತಾಧಿಕಾರಿ, ಮುಖ್ಯ ಆಯುಕ್ತರಿಗೆ ಮನವಿ ಪತ್ರ ನೀಡಲಾಗುವುದು ಸಮಸ್ಯೆ ಬಗೆಹರಿಯದೇ ಹೋದರೆ ಪ್ರತಿಭಟನೆ ಮಾಡಲಾಗುವುದು ಎಂದು ಹೇಳಿದರು.

# ಸರ್ಕಾರಿ ನೌಕರರಿಗೆ ಗುಡ್‌ನ್ಯೂಸ್: ತುಟ್ಟಿ ಭತ್ಯೆ ಶೇ. 1.50ರಷ್ಟು ಹೆಚ್ಚಳ

## ಯುಜಿಸಿ / ಎಐಸಿಟಿಇ / ಐಸಿಎಆರ್ ವೇತನ ಶ್ರೇಣಿಗಳ ನಿವೃತ್ತ ನೌಕರರುಗಳಿಗೂ ಸಹ ಅನ್ವಯ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಸರ್ಕಾರಿ ನೌಕರರಿಗೆ ಇದೀಗ ಗುಡ್ ನ್ಯೂಸ್ ಸಿಕ್ಕಿದೆ. 2024ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನವನ್ನು ಪಡೆಯುತ್ತಿರುವ ಸರ್ಕಾರಿ ನೌಕರರಿಗೆ ಜನವರಿ 1 2026ರಿಂದ ಜಾರಿಗೆ ಬರುವಂತೆ ತುಟ್ಟಿ ಭತ್ಯೆಯನ್ನು ಹೆಚ್ಚಳ ಮಾಡಲಾಗಿದೆ.

ಪ್ರಸ್ತುತ ಮೂಲ ವೇತನದ ಶೇ 14.25 ರಿಂದ ಶೇ 15.75ಕ್ಕೆ ಪರಿಷ್ಕರಿಸಿ ಮಂಜೂರು ಮಾಡಲು ನಿರ್ಧಾರ ಮಾಡಲಾಗಿದೆ. 2024ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ಶ್ರೇಣಿಯು ಗರಿಷ್ಠಕ್ಕಿಂತ ಹೆಚ್ಚಾಗಿ ಸ್ಥಗಿತ ವೇತನ ಬಡ್ತಿಯನ್ನು ನೀಡಲಾಗಿದ್ದರೆ, ಆ ಸ್ಥಗಿತ ವೇತನಕ ಬಡ್ತಿ ಸಿಗಲಿದೆ. ಅಥವಾ 2024ರ ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 3(ಸಿ) ಯನ್ನು ಓದಿಕೊಂಡು 7ನೇ ನಿಯಮದ (3)ನೇ ಉಪ ನಿಯಯಮದ ಮೇರೆಗೆ ನೀಡಲಾದ ವೈಯಕ್ತಿಕ ವೇತನ ಇದ್ದರೆ ಅದರ ಆಧಾರದಲ್ಲಿ ತುಟ್ಟಿಭತ್ಯೆ ಹೆಚ್ಚಳ ಆಗಲಿದೆ. ಜೊತೆಗೆ ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ಮಂಜೂರು ಮಾಡಲಾಗಿರುವ ಹೆಚ್ಚುವರಿ ಬಡ್ತಿ ಯಾವುದಾದರು ಇದ್ದಲ್ಲಿ ಅವುಗಳು ಸೇರುತ್ತದೆ. ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೂ ಇದು ಅನ್ವಯ ಆಗಲಿದೆ.



ಜನವರಿ 1, 2026 ರಿಂದ ಜಾರಿಗೆ ಬರುವಂತೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರಗಳನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಪ್ರಸಕ್ತ ಶೇಕಡ 14.25 ರಿಂದ ಶೇಕಡ 15.75 ಕ್ಕೆ ಹೆಚ್ಚಿಸಿ ಮಂಜೂರು ಮಾಡಲು ಸಹ ಸರ್ಕಾರ ಆದೇಶದಲ್ಲಿ ಉಲ್ಲೇಖಿಸಿದೆ. ತುಟ್ಟಿ ಭತ್ಯೆಯ ಮಂಜೂರಾತಿಯ ಉದ್ದೇಶಕ್ಕಾಗಿ ಕ.ನಾ.ಸೇ(ಪ.ವೇ) ನಿಯಮಗಳು, 2024ರ ನಿಯಮ 3ರಲ್ಲಿ ಸೂಚಿಸಿರುವ ಮತ್ತು ಈ ನಿಯಮದಡಿ ಹೊರಡಿಸಿರುವ ಆದೇಶಗಳಲ್ಲಿ ಸೂಚಿಸಿರುವ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನವನ್ನು ಹೊರತುಪಡಿಸಿ ಇತರೆ ಯಾವುದೇ ಉಪಲಬ್ಧಗಳನ್ನು ಸೇರಿಸತಕ್ಕದ್ದಲ್ಲ ಎಂದಿದೆ. ಈ ಆದೇಶದ ಮೇರೆಗೆ ಲಭ್ಯವಿರುವ ತುಟ್ಟಿ ಭತ್ಯೆಯನ್ನು ಮುಂದಿನ ಆದೇಶದವರೆಗೆ ನಗದಾಗಿ ಪಾವತಿ ಮಾಡಲಾಗುವುದು. ತುಟ್ಟಿಭತ್ಯೆಯ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ವ್ಯತ್ಯಾಸಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು ಎಂದು ಉಲ್ಲೇಖ ಮಾಡಲಾಗಿದೆ.

**ನಿವೃತ್ತ ನೌಕರರಿಗೂ ಅನ್ವಯ**

**ಯುಜಿಸಿ / ಎಐಸಿಟಿಇ / ಐಸಿಎಆರ್ ವೇತನ ಶ್ರೇಣಿಗಳ ನಿವೃತ್ತ ನೌಕರರುಗಳಿಗೂ ಸಹ ಈ ಆದೇಶಗಳು ಅನ್ವಯಿಸುತ್ತವೆ. ಸರ್ಕಾರದ ಮತ್ತು ಜಿಲ್ಲಾ ಪಂಚಾಯತ್‌ಗಳ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ವರ್ಕ್‌ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರುಗಳಿಗೆ ಈ ಆದೇಶ ಅನ್ವಯಿಸುತ್ತದೆ. ಯುಜಿಸಿ/ಎಐಸಿಟಿಇ/ಐಸಿಎ ಆರ್ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ನೌಕರರಿಗೆ ಮತ್ತು ಎನ್‌ಜೆಪಿಸಿ ವೇತನ ಶ್ರೇಣಿಗಳ ನ್ಯಾಯಾಂಗ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶಗಳನ್ನು ಹೊರಡಿಸಲಾಗುವುದು ಎಂದು ತಿಳಿಸಲಾಗಿದೆ.**

## ಪಾದಚಾರಿ ಮಾರ್ಗ ಒತ್ತುವರಿ ತೆರವು

• ಉದಯವಾಹಿನಿ, ಬೆಂಗಳೂರು

ಪೂರ್ವ ನಗರ ಪಾಲಿಕೆ ಭಾಗದ ಹಲವು ಪ್ರದೇಶ ಗಳಲ್ಲಿ ಪಾದಚಾರಿ ಮಾರ್ಗದ ಒತ್ತುವರಿಯನ್ನು ಭಾನುವಾರ ತೆರವುಗೊಳಿಸಲಾಯಿತು. ‘ಪ್ರಮುಖ ರಸ್ತೆ ಬದಿಗಳು ಹಾಗೂ ಸಾರ್ವಜನಿಕ ಸ್ಥಳಗಳನ್ನು ಒತ್ತುವರಿ ಮಾಡಿಕೊಂಡಿರುವ ಅಂಗಡಿಗಳು, ತಾತ್ಕಾಲಿಕ ನಿರ್ಮಾಣಗಳು, ವ್ಯಾಪಾರ ಮಳಿಗೆಗಳು, ಕಟ್ಟಡ ಸಾಮಗ್ರಿಗಳು, ಜಾಹೀರಾತು ಫಲಕಗಳು ಹಾಗೂ ಇತರೆ ವಸ್ತುಗಳಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ’ ಎಂದು ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ತಿಳಿಸಿದ್ದಾರೆ. ಹೂಡಿ ವಿಭಾಗ ವ್ಯಾಪ್ತಿಯಲ್ಲಿ ಹೂಡಿ ಸರ್ಕಲ್‌ನಿಂದ ಲಯನ್ಸ್ ಪಾರ್ಕ್ ರಸ್ತೆ, ಹೂಡಿ ಸರ್ಕಲ್‌ನಿಂದ ಕುಂದಲಹಳ್ಳಿ ಗೇಟ್, ಹೂಡಿ ಸರ್ಕಲ್‌ನಿಂದ ಅಯ್ಯಪ್ಪನಗರ ಮುಖ್ಯ ರಸ್ತೆ, ಹೂಡಿ ಸರ್ಕಲ್‌ನಿಂದ ಐಟಿಪಿಎಲ್ ಮುಖ್ಯರಸ್ತೆ, ಹೂಡಿ ಸರ್ಕಲ್‌ನಿಂದ ಬೆಳ್ಳಂದೂರುವರೆಗೆ ಕಾರ್ಯಾಚರಣೆ ನಡೆಸಲಾಯಿತು. ಕಾಡುಗೋಡಿ ವಿಭಾಗ ವ್ಯಾಪ್ತಿಯಲ್ಲಿ ಚನ್ನಸಂದ್ರ ಮುಖ್ಯ ರಸ್ತೆ, ಐಟಿಪಿಎಲ್ ಮುಖ್ಯರಸ್ತೆ, ವೈಟ್‌ಫೀಲ್ಡ್ ಮುಖ್ಯ ರಸ್ತೆ, ಕಾಡುಗೋಡಿ ಮುಖ್ಯರಸ್ತೆಗಳಲ್ಲಿ ಒತ್ತುವರಿ ತೆರವು ಮಾಡಲಾಗಿದೆ.

# ರಾಷ್ಟ್ರ ಮಟ್ಟದಲ್ಲಿ ಡೊಳ್ಳು ಕುಣಿತ ಬೇಡಿಕೆಯ ಕಲೆ : ಸಹಾಯಕ ನಿರ್ದೇಶಕ ಕೆ. ಸತೀಶ್

• ಉದಯವಾಹಿನಿ, ರಾಮನಗರ

ರಾಜ್ಯದ ಕೆಲವಷ್ಟೇ ಪ್ರದೇಶಗಳಲ್ಲಿ ಸೀಮಿತವಾಗಿದ್ದ ಡೊಳ್ಳು ಕಲೆ ಇಂದು ರಾಜ್ಯ ಸೇರಿದಂತೆ ಅಂತರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯ ಕಲೆಯಾಗಿದೆ, ಇದಕ್ಕೆ ಖ್ಯಾತಿ ತಂದುಕೊಟ್ಟ ಶ್ರೇಯ ಕಲಾವಿದ ಶ್ರೀನಿವಾಸ್ ಅವರಿಗೆ ಸಲ್ಲುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೆ. ಸತೀಶ್ ಬಣ್ಣಿಸಿದರು.

ರಾಮನಗರದ ಜಾನಪದ ಲೋಕದಲ್ಲಿ ಡಾ. ಎಚ್.ಎಲ್. ನಾಗೇಗೌಡರ ನೆನಪಿನಲ್ಲಿ ಪ್ರತಿ ತಿಂಗಳ ನಡೆಯುವ ತಿಂಗಳ ಅತಿಥಿ'' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಡೊಳ್ಳು ಕಲಾವಿದರಾದ ಶ್ರೀನಿವಾಸ್ ಅವರ ನಿಸ್ವಾರ್ಥ ಕೊಡುಗೆಯಿಂದ ಇಂದು ಶುಭ ಸಮಾರಂಭಗಳಿಗೆ ಡೊಳ್ಳು ಕಲೆ ವಾಣಿಜ್ಯ ಕಲೆಯಾಗಿ ಬೆಳೆದಿದೆ ಇವರ ಮಗ ಚಂದ್ರು ಐ.ಪಿ.ಎಸ್, ಐ.ಎ.ಎಸ್ ಅಧಿಕಾರಿಗಳಿಗೆ ತರಬೇತಿಯನ್ನು ನೀಡುವ ಅವಕಾಶವನ್ನು ಪಡೆದಿದ್ದಾರೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನಡೆಯುವ ಅನೇಕ ಕಾರ್ಯಕ್ರಮಗಳಲ್ಲಿ ಈ ರೀತಿಯ ಜನಪದ ಕಲಾವಿದರಿಗೆ ಗೌರವವನ್ನು ನೀಡುತ್ತಾ ಬಂದಿದೆ ಎಂದರು.



ಸಾಹಿತಿಗಳು ಮತ್ತು ಕರ್ನಾಟಕ ಜಾನಪದ ಪರಿಷತ್ತಿನ ಚನ್ನಪಟ್ಟಣ ತಾಲ್ಲೂಕು ಘಟಕದ ಅಧ್ಯಕ್ಷರಾದ ಡಾ. ವಿಜಯ ರಾಂಪುರ ಮಾತನಾಡಿ ಕರ್ನಾಟಕದ ಗಂಡು ಕಲೆ ಜನಪ್ರಿಯ ಕಲೆ ಶಕ್ತಿಯುತವಾದ ಕಲೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿದೆ.

ಯಾವುದೇ ಕಲೆ ಹುಟ್ಟಬೇಕಾದರೆ ಆರಾಧನೆ ಅಥವಾ ಮನರಂಜನಾ ಕಲೆಯಿಂದ ಹುಟ್ಟಿಕೊಳ್ಳುತ್ತದೆ ಆದರೆ ಡೊಳ್ಳು ಕುಣಿತ ಆರಾಧನೆ ಕಲೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ಜೊತೆಗೆ ಪೌರಾಣಿಕ ಹಿನ್ನೆಲೆಯಲ್ಲಿ ಇದೆ. ಹಬ್ಬ ಹರಿದಿನ ಜಾತ್ರೆಗಳಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇತ್ತೀಚಿನ ದಿನಮಾನಗಳಲ್ಲಿ ರಾಜಕೀಯ ಕಾರ್ಯಕ್ರಮಗಳಲ್ಲಿ ಕಲಾವಿದರು ಮಿಂಚುತ್ತಿದ್ದಾರೆ, ಆರ್ಥಿಕವಾಗಿ ಸಬಲೀಕರಣವಾಗಬೇಕು ಎನ್ನುವ ದೃಷ್ಟಿಯಿಂದ ಕಲೆ ಬೆಳೆದು ವಿಜೃಂಭಿಸಲಿ ಎಂದರು.

ಗಂಡು ಕಲೆ ಇಂದು ಕೇವಲ ಗಂಡು ಕಲೆಯಾಗಿ ಇರದೆ ಹೆಣ್ಣು ಮಕ್ಕಳು ಕಲಿಯುತ್ತಿದ್ದಾರೆ ಎಂದರು.ಕಾರ್ಯಕ್ರಮದಲ್ಲಿ ಡೊಳ್ಳು ಕುಣಿತ ಕಲಾವಿದರಾದ ಶ್ರೀನಿವಾಸ್ ಅವರನ್ನು ಗೌರವಿಸಲಾಯಿತು. ನಂತರ ನಡೆದ ಸಂವಾದದಲ್ಲಿ ಕಲೆ ಮತ್ತು ತಾವು ಕಲಿತ ಆಸಕ್ತಿ ಬಗ್ಗೆ ವಿವರಿಸಿದರು .ಡೊಳ್ಳು ತಂಡದವರು ಕಲಾಪ್ರದರ್ಶನ ನಡೆಸಿಕೊಟ್ಟರು.ಜಾನಪದ ಲೋಕದ ಕ್ಯೂರೇಟರ್ ಡಾ. ರವಿ ಯು.ಎಂ, ಸಂಚಾಲಕ ಡಾ. ಸಂದೀಪ್ ಕೆ.ಎಸ್, ಡಿಪ್ಲೊಮಾ ವಿದ್ಯಾರ್ಥಿಗಳು, ಲೋಕದ ಸಿಬ್ಬಂದಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

> ಕಲೆಯನ್ನು ಪ್ರೇಕ್ಷಕರು ಅಂತರಂಗದಿಂದ ಕಾಪಾಡಬೇಕು, ಜಿಲ್ಲೆಯಲ್ಲಿ ಡೊಳ್ಳು ಕಲೆಗೆ ಬುನಾದಿ ಹಾಕಿಕೊಟ್ಟವರು. ಶ್ರೀ ನಿವಾಸರವರು ಇವರ ಮೂಲಭೂತ ಸೌಕರ್ಯದ ಕೊರತೆಯ ನಡುವೆಯೂ ಜಾನಪದ ಲೋಕದಲ್ಲಿ ಈ ಕಲೆಯನ್ನು ಉಳಿಸಿ ಬೆಳೆಸಿ ಸಮೃದ್ಧಿಗೊಳಿಸಿದ್ದಾರೆ.
>
> **ಶಿವಕುಮಾರ್ ಬ್ಯಾಡ್ರಳ್ಳಿ ಅಂತರಾಷ್ಟ್ರೀಯ ಗಾಯಕ**

## ರಸ್ತೆ ಕಾಮಗಾರಿ ವಿಳಂಬ: ಜನ ಹೈರಾಣು

• ಉದಯವಾಹಿನಿ, ಮಾಗಡಿ



ಉದಯವಾಹಿನಿ ಚಿತ್ರ


ಪಟ್ಟಣದಲ್ಲಿ ಕುಂಟುತ್ತಾ ಸಾಗುತ್ತಿರುವ ಕೆ-ಶಿಪ್ ಚತುಷ್ಪಥ ಕಾಮಗಾರಿಯಿಂದಾಗಿ ಸಾರ್ವಜನಿಕರು ಮತ್ತು ವಾಹನ ಸವಾರರು ತೀವ್ರ ಸಂಕಷ್ಟ ಎದುರಿಸುವಂತಾಗಿದೆ.

ಅವೈಜ್ಞಾನಿಕ ಚರಂಡಿ ವ್ಯವಸ್ಥೆ ಹಾಗೂ ವಿಪರೀತ ದೂಳಿನಿಂದಾಗಿ ಜನರು, ವಾಹನ ಸವಾರರು ಪರದಾಡುತ್ತಿದ್ದಾರೆ.

ಜೆಡಿಎಸ್ ಕಚೇರಿಯ ಮುಂಭಾಗ ಹಾಗೂ ಮಾರುತಿ ಮೋಹನ್ ಚಿತ್ರಮಂದಿರ ಮುಂಭಾಗ ಸರಿಯಾಗಿ ಚರಂಡಿ ಸಂಪರ್ಕ ಇಲ್ಲದೆ ಕೊಳಚೆ ನೀರು ರಸ್ತೆ ತುಂಬಾ ಹರಿಯುತ್ತಿದೆ. ಇದರಿಂದ ಹೊರಹೊಮ್ಮುವ ಅಸಾಧ್ಯ ದುರ್ವಾಸನೆಯಿಂದ ಮಾಗಡಿ-ಬೆಂಗಳೂರು ಮುಖ್ಯರಸ್ತೆ ಸಂಚಾರ ಎಂದರೆ ಬೆದರುವಂತಾಗಿದೆ.

ಮಾಗಡಿ ಮಾರ್ಗವಾಗಿ ಬೆಂಗಳೂರಿನಿಂದ ಕುಣಿಗಲ್, ಹಾಸನ, ಮಂಗಳೂರು, ಹುಲಿಯೂರುದುರ್ಗ, ಮದ್ದೂರು ಹಾಗೂ ಮೈಸೂರಿಗೆ ಸಾವಿರಾರು ವಾಹನ ಸಂಚರಿಸುತ್ತವೆ. ಅದರಲ್ಲೂ ವಾರಾಂತ್ಯ, ರಜಾ ದಿನಗಳಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿರುತ್ತದೆ. ರಸ್ತೆ ಕಾಮಗಾರಿ ಪೂರ್ಣಗೊಳ್ಳದ ಕಾರಣ ತಾಸುಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ. ಶೀಘ್ರ ಕಾಮಗಾರಿ ಮುಗಿಸಿ ಚರಂಡಿ ವ್ಯವಸ್ಥೆ ಸರಿಪಡಿಸಬೇಕು. ಇಲ್ಲವಾದರೆ ಕೆ-ಶಿಪ್ ವಿರುದ್ಧ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ವಿಜಯ ಕುಮಾರ್ ಎಚ್ಚರಿಸಿದ್ದಾರೆ.

# ಮಾದಪ್ಪನ ಭಕ್ತರಿಗಿಲ್ಲ ಸುರಕ್ಷತೆ



ಉದಯವಾಹಿನಿ ಚಿತ್ರ

1 ಮಲೆ ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿಗೆ ಬಾಲಕ ಬಲಿ

2 ಬೆಂಗಳೂರು ಮೂಲದ ಲಗ್ಗೇರೆಯ ಸುರೇಶ್ ಎಂಬುವವರ ಪುತ್ರ, ಹರ್ಷಿತ್ (10) ಮೃತ ಬಾಲಕ

3 ಸುರೇಶ್ ಅವರ ಕುಟುಂಬ ನಾಗಮಲೆಯ ದರ್ಶನಕ್ಕಾಗಿ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದಾಗ ದುರ್ಘಟನೆ

### ಬೋನಿಗೆ ಬಿದ್ದ ಚಿರತೆ

ಸುಮಾರು ದಿನಗಳಿಂದ ರೈತರ ನಿದ್ದೆಗೆಡಿಸಿದ್ದ ಚಿರತೆಯೊಂದು ಕೊನೆಗೂ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಬಿದ್ದಿದ್ದು ಸಾರ್ವಜನಿಕರು ನಿಟ್ಟುಸಿರು ಬಿಟ್ಟಂತಾಗಿದೆ. ಹೋಬಳಿಯ ಶ್ರಾವಂಡನಹಳ್ಳಿ ಹೊರವಲಯದ ಜಮೀನುಗಳಲ್ಲಿ ಓಡಾಡುತ್ತಿದ್ದ ಚಿರತೆ ಒಂದು ಮೇಕೆ, ಐದು ನಾಯಿಗಳನ್ನು ಕೊಂದು ತಿಂದು ಗ್ರಾಮಸ್ಥರಲ್ಲಿ ಭಯದ ವಾತಾವರಣ ಸೃಷ್ಟಿಸಿತ್ತು. ಇದರಿಂದ ಬಹುತೇಕ ಈ ಭಾಗದ ಸಾರ್ವಜನಿಕರು ಆತಂಕದಲ್ಲಿದ್ದು ಕೊನೆಗೂ ಅರಣ್ಯ ಇಲಾಖೆ ಬೋನಿಗೆ ಚಿರತೆ ಶರಣಾಗಿದೆ. ಈ ಭಾಗದ ಬಹುತೇಕ ನಾಯಿಗಳು, ಹೊಲದಲ್ಲಿ ಕುರಿ ಮೇಕೆಗಳನ್ನು ದಾಳಿ ಮಾಡಿ ಭಕ್ಷಿಸುತ್ತಿದ್ದ ಖಚಿತ ಮಾಹಿತಿ ಮೇರೆಗೆ ಸ್ಥಳ ಪರಿಶೀಲಿಸಿದ ಅರಣ್ಯ ಸಿಬ್ಬಂದಿ ಅಲ್ಲಲ್ಲಿ ಬೋನ್ ಗಳನ್ನು ಇಟ್ಟಿಧಿದ್ದಧಿರು.

ರೈತರ ನಿರೀಕ್ಷೆಯಂತೆ ಕೊನೆಗೂ ಚಿರತೆ ಬೋನಿಗೆ ಬಿದ್ದಿರುವುದನ್ನು ಕಂಡ ಗ್ರಾಮಸ್ಥರು ಭಯದ ವಾತಾವರಣದಿಂದ ಮುಕ್ತರಾಗಿದ್ದಾರೆ.

### ಸಂಘರ್ಷ ಹೆಚ್ಚಬಹುದು

ಬೇಸಿಗೆ ಸಂದರ್ಭದಲ್ಲಿ ಅರಣ್ಯದೊಳಗೆ ನೀರಿನ ಮೂಲಗಳು ಬತ್ತಿದಾಗ ಅಥವಾ ಆಹಾರದ ಕೊರತೆಯಾದಾಗ ಚಿರತೆ ಸೇರಿದಂತೆ ವನ್ಯಜೀವಿಗಳು ಜನನಿಬಿಡ ಪಾದಚಾರಿ ಮಾರ್ಗಗಳಿಗೆ ಲಗ್ಗೆ ಇಡುತ್ತವೆ. ಹಾಗಾಗಿ ಪಾದಯಾತ್ರಿಗಳ ಮೇಲೆ ಇಂಥ ದಾಳಿ ಹೆಚ್ಚಾಗಬಹುದಾದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಅದರಲ್ಲೂ ವಿಶೇಷವಾಗಿ ಚಿರತೆಗಳು ರಾತ್ರಿ ಮತ್ತು ಮುಂಜಾನೆ ವೇಳೆಯಲ್ಲಿ ಹೆಚ್ಚು ಸಕ್ರಿಯವಾಗಿರುತ್ತವೆ. ಯಾತ್ರಾರ್ಥಿಗಳು ಬಿಸಿಲಿನ ತಾಪ ತಪ್ಪಿಸಲು ರಾತ್ರಿ ಅಥವಾ ಮುಂಜಾನೆ ಕಾಲ್ನಡಿಗೆಯಲ್ಲಿ ಸಾಗುವುದು ಚಿರತೆಗಳ ದಾಳಿಗೆ ಕಾರಣವಾಗಬಹುದು.

• ಉದಯವಾಹಿನಿ,ಚಾಮರಾಜನಗರ

ಮಲೆ ಮಹದೇಶ್ವರಬೆಟ್ಟ ವನ್ಯಧಾಮದ ವ್ಯಾಪ್ತಿಯ ಮಾದಪ್ಪನ ಭಕ್ತರ ಮೇಲೆ ಚಿರತೆ ದಾಳಿ ಮರುಕಳಿಸಿದ್ದು, ಪಾದಯಾತ್ರಿ ಸುರಕ್ಷತೆಗೆ ಪರ್ಯಾಯವೇನು ಎಂಬ ಪ್ರಶ್ನೆ ಮೂಡಿದೆ. ಕಳೆದ ಜನವರಿ ತಿಂಗಳಲ್ಲಿ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಹೊರಟಿದ್ದ ಮಂಡ್ಯ ಮೂಲದ ಯುವಕನನ್ನು ಚಿರತೆ ಎಳೆದೊಯ್ದು ಕೊಂದು ಹಾಕಿತ್ತು. ಆದಾದ ಕೆಲವೇ ದಿನಗಳಲ್ಲೇ ಬಾಲಕನ ಮೇಲೆ ಚಿರತೆ ದಾಳಿಗೆ ಯತ್ನಿಸಿತ್ತು. ಅವೆರಡು ಘಟನೆಗಳು ಮಾಸುವ ಮುನ್ನವೇ ನಾಗಮಲೆಗೆ ಹೊರಟಿದ್ದ ಭಕ್ತರ ಗುಂಪಿನಲ್ಲಿದ್ದ ಬಾಲಕನನ್ನು ಚಿರತೆ ಎಳೆದೊಯ್ದು ಕೊಂದು ಹಾಕಿದೆ. ಇಂಥ ಘಟನೆಗಳು ಪದೇ ಪದೆ ನಡೆಯುತ್ತಿದ್ದರೆ ಮಾದಪ್ಪನ ಭಕ್ತರಿಗೆ ಸುರಕ್ಷತೆ ಹೇಗೆ ? ಶಾಶ್ವತ ಪರ್ಯಾಯ ಕ್ರಮಗಳನ್ನು ಸರಕಾರ ರೂಪಿಸಬೇಕಿದೆ ಎಂಬ ಒತ್ತಾಯ ಕೇಳಿ ಬಂದಿದೆ. ಶಿವರಾತ್ರಿ ವೇಳೆ ಯುವಕನನ್ನು ಕೊಂದು ಹಾಕಿದ್ದ ಚಿರತೆಯನ್ನು ಅರಣ್ಯ ಇಲಾಖೆಯವರು ಸೆರೆ ಹಿಡಿದಿದ್ದರು. ಅಲ್ಲದೇ ಆ ಘಟನೆ ನಂತರ ಪಾದಯಾತ್ರೆಗೆ ಸಮಯ ನಿಗದಿಯಾಗಿತ್ತು. ಅವೆರಡು ಘಟನೆಗಳು ಮಾಸುವ ಮುನ್ನವೇ ನಾಗಮಲೆಗೆ ಹೊರಟಿದ್ದ ಭಕ್ತರ ಗುಂಪಿನಲ್ಲಿದ್ದ ಜಾತ್ರೆ ವೇಳೆಯಲ್ಲಿ ಇಲಾಖೆ ಸಿಬ್ಬಂದಿ ಬಂದೋಸ್ತನಲ್ಲಿ ಪಾದಯಾತ್ರಿಗಳನ್ನು ಕರೆದೊಯ್ಯಲಾಗಿತ್ತು. ಆದರೆ, ಕಾಲಕ್ರಮೇಣ ಸಮಯ ನಿಗದಿ ಇಲ್ಲವಾಯಿತೇ? ಇಲಾಖೆ ಸಹ ಕ್ರಮೇಣ ತಾತ್ಸಾರ ಮಾಡಿತೇ ಅದರ ಪರಿಣಾಮವೇ ಇಂದಿನ ದಾಳಿಗೆ ಕಾರಣವಾಯಿತೆ ಎಂಬ ಪ್ರಶ್ನೆ ಎದ್ದಿದೆ.



## ಮೇ 12ರಂದು ಆರೋಗ್ಯ ಉಚಿತ ತಪಾಸಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಂಡ್ಯ


ಪರಿಚಯ ಪ್ರಕಾಶನ, ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿ, ದೇವರಕಾಡು ಬಳಗ, ಚಿತ್ರಕೂಟದ ಸಹಯೋಗದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅವರ ಜನ್ಮದಿನದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವು ಮೇ 12 ರಂದು ಬೆಳಿಗ್ಗೆ 9.30 ಗಂಟೆಗೆ ನಗರದಲ್ಲಿ ನಡೆಯಲಿದೆ. ನಗರದ ಶಿವನಂಜಪ್ಪ ಪಾರ್ಕ್ (ದೇವರಕಾಡು)ನಲ್ಲಿ ಕೆಟಿಎಸ್ -72'ಹೆಸರಿನಲ್ಲಿ ಕಾರ್ಯಕ್ರಮ ನಡೆಯುತ್ತಿದ್ದು, ಮೊದಲಿಗೆ ಗಿಡ ನೆಡುವ ಮೂಲಕ ಚಾಲನೆ ನೀಡಲಾಗುವುದು. ನಂತರ ಬೆಂಗಳೂರಿನ ಕಿಮ್ಸ್ ಆಸ್ಪತ್ರೆ ವೈದ್ಯರು ಆರೋಗ್ಯ ಶಿಬಿರದಲ್ಲಿ ಸಾರ್ವಜನಿಕರಿಗೆ ತಪಾಸಣೆ ಮಾಡುವರು. ನಂತರ ಸಂಜೆ 4 ಗಂಟೆಯಿಂದ ರವೀಂದ್ರ ಸಂಗೀತೋತ್ಸವ ಕಾರ್ಯಕ್ರಮ ಇರಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಮತ್ತು ಸಾರ್ವಜನಿಕರು ಭಾಗವಹಿಸುವಂತೆ ಎಂದು ಶಿಕ್ಷಕ ಲೋಕೇಶ್ ಚಂದಗಾಲು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

## ಮೇಲ್ಸೇತುವೆಗಾಗಿ 350 ಮರ ಕಡಿತಕ್ಕೆ ವಿರೋಧ: ಪರ್ಯಾಯ ಮಾರ್ಗ ಅನುಸರಿಸಲು ಆಗ್ರಹ

• ಉದಯವಾಹಿನಿ, ಮೈಸೂರು

ನಗರದ ಮಣಿಪಾಲ್ ಆಸ್ಪತ್ರೆ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ನಿರ್ಮಾಣವಾಗುತ್ತಿರುವ ಮೇಲ್ವೇತುವೆಗಾಗಿ 350 ಮರ ಕಡಿತಕ್ಕೆ ಮುಂದಾಗಿರುವುದನ್ನು ವಿರೋಧಿಸಿ, 'ಪರಿಸರಕ್ಕಾಗಿ ನಾವು' ಸಂಘಟನೆ ನೇತೃತ್ವದಲ್ಲಿ ವಿವಿಧ ಪರಿಸರ ಹೋರಾಟಗಾರರು, ಸಂಸ್ಥೆಗಳು, ನಾಗರಿಕರು ಬನ್ನಿಮಂಟಪದ ಉದ್ಯಾನದಲ್ಲಿ ಭಾನುವಾರ ಸಭೆ ನಡೆಸಿದರು. ಇದಕ್ಕೂ ಮೊದಲು ಕಡಿಯಲಾಗುವ ಮರಗಳು ಯಾವುವು, ಯೋಜನೆಯು ವೈಜ್ಞಾನಿಕವಾಗಿದೆಯೇ, ರಸ್ತೆ ವಿಸ್ತರಣೆ ಎಲ್ಲಿವರೆಗೆ ಆಗುತ್ತದೆ ಎಂದೆಲ್ಲ ಪರಿಶೀಲನೆ ನಡೆಸಿದ ಹೋರಾಟಗಾರರು ನಂತರ ಚರ್ಚೆ ನಡೆಸಿದರು.

ನಿವೃತ್ತ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ ಮಾತನಾಡಿ, 'ಸಂವಿಧಾನದ 51 ಎ ವಿಧಿಯ ಪ್ರಕಾರ ಪರಿಸರ ಉಳಿಸುವುದು ಪ್ರತಿಯೊಬ್ಬ ನಾಗರಿಕನ ಸಾಂವಿಧಾನಿಕ ಕರ್ತವ್ಯವಾಗಿದೆ. ಯೋಜಿತ ರೀತಿಯಲ್ಲಿ ಬೆಳೆಸಿದ ಮರಗಳ ಸಾಮೂಹಿಕ ಹನನಕ್ಕೆ ಮೊದಲು ಅಭಿಪ್ರಾಯ ಸಂಗ್ರಹಿಸುವುದು ಮುಖ್ಯ' ಎಂದು ಹೇಳಿದರು.



ಉದಯವಾಹಿನಿ ಚಿತ್ರ

'ನಗರದ ಅಗಲವಾದ ರಸ್ತೆಗಳ ಇಕ್ಕೆಲಗಳಲ್ಲೂ ಹಸಿರು ತುಂಬಿದ ಮರಗಳು, ಉದ್ಯಾನಗಳಿರಲು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣ. ಮರಗಳನ್ನು ನೈಸರ್ಗಿಕ ಸಂಪತ್ತು ಎಂದು ತಿಳಿದಿದ್ದ ಅವರು 1903ರಲ್ಲಿ ರಚಿಸಿದ ಸಿಐಟಿಬಿ ಪ್ರಮುಖ ಕಾರ್ಯಗಳಲ್ಲಿ ಮರಗಳಿಂದ ಕೂಡಿದ ರಸ್ತೆಗಳ ನಿರ್ಮಾಣಕ್ಕೆ ಆದ್ಯತೆ ನೀಡಿದ್ದರು' ಎಂದು ಸ್ಮರಿಸಿದರು. 'ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರು 1976ರಲ್ಲಿ ಮರಗಳ ಸಂರಕ್ಷಣಾ ಕಾಯ್ದೆ ಜಾರಿಗೊಳಿಸಿದ್ದರು. ನಗರೀಕರಣದಿಂದ ಮರಗಳ ಹನನ ನಡೆಯುತ್ತಿದೆ. ತಾಪಮಾನ ತೀವ್ರತೆ ತಗ್ಗಿಸುವ, ಮಾಲಿನ್ಯ ನಿಯಂತ್ರಣ ಮಾಡುವುದು ತುರ್ತಾಗಿದೆ' ಎಂದರು. ಪಿಯುಸಿಎಲ್ ಸದಸ್ಯ ಮನ್ಸೂರ್ ಅಹ್ಮದ್, 'ಶಿವರಾತ್ರೀಶ್ವರ ನಗರ ಮತ್ತು ಸಿದ್ದಿಕಿ ನಗರಗಳಲ್ಲಿ ಹೆಚ್ಚಿನ ಮರಗಳನ್ನು ಬೆಳೆಸಬೇಕು.

ಇರುವ ಮರಗಳನ್ನು ಕಡಿಯುವುದು ಸರಿಯಲ್ಲ. ಮರಗಳ ಉಳಿವಿಗೆ ಪರ್ಯಾಯ ಮಾರ್ಗವನ್ನು ಸರ್ಕಾರ ಯೋಜಿಸಲಿ' ಎಂದರೆ, 'ಮೈಸೂರು ಇನ್ನೊಂದು ಬೆಂಗಳೂರು, ಚೆನ್ನೈ ಆಗುತ್ತಿದೆ' ಎಂದು ಪರಿಸರ ಕಾರ್ಯಕರ್ತ ಸಂಜಯ್ ದತ್ತಾತ್ರಿ ಆತಂಕ ವ್ಯಕ್ತಪಡಿಸಿದರು. 'ರೀಪ್ ಬೆನಿಫಿಟ್' ಸಂಸ್ಥೆಯ ಸಾರಾ ಮಿಶ್ರಾ, 'ಸುಸ್ಥಿರ ಅಭಿವೃದ್ಧಿ ಬೇಕು. 350 ಮರ ಕಡಿದರೆ ಆಗುವ ಹಾನಿಯನ್ನು ಗಿಡಗಳನ್ನು ನೆಡುವುದರಿಂದ ಮತ್ತು ಮರಗಳ ಸ್ಥಳಾಂತರ ಮಾಡುವುದರಿಂದ ಸರಿದೂಗಿಸಲು ಸಾಧ್ಯವೇ ಇಲ್ಲ' ಎಂದರೆ, ವಕೀಲ ಮನ್ನನ್ ಖಾನ್ ಅವರು 'ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಜೊತೆಯಲ್ಲಿ ಸಾಗಬೇಕು' ಎಂದರು.

# ಚಿರತೆ ದಾಳಿಗೆ ಮೃತಪಟ್ಟ ಬಾಲಕನ ಕುಟುಂಬಕ್ಕೆ 20 ಲಕ್ಷ ಪರಿಹಾರ

• ಉದಯವಾಹಿನಿ, ಚಾಮರಾಜನಗರ

ನಾಗಮಲೆಯಲ್ಲಿ ಚಿರತೆ ದಾಳಿಗೆ ಮೃತಪಟ್ಟ ಬಾಲಕನ ಕುಟುಂಬಕ್ಕೆ ಸರ್ಕಾರ 20 ಲಕ್ಷ ರೂ. ಪರಿಹಾರ ಘೋಷಿಸಿದೆ.(ಮೇ 10) ಮಲೆ ಮಹದೇಶ್ವರ ಬೆಟ್ಟದಿಂದ ನಾಗಮಲೆಗೆ ಹೋಗುವ ವೇಳೆ ಚಿರತೆ ದಾಳಿ ನಡೆಸಿತ್ತು. ಈ ವೇಳೆ ಬಾಲಕ ಸಾವನ್ನಪ್ಪಿದ್ದ. ಸದ್ಯ ಅರಣ್ಯ ಇಲಾಖೆ ಬಾಲಕನ ಕುಟುಂಬಸ್ಥರಿಗೆ 20 ಲಕ್ಷ ರೂ. ಪರಿಹಾರ ಘೋಷಿಸಿದ್ದು, ಈಗಾಗಲೇ 5 ಲಕ್ಷ ರೂ. ಚೆಕ್ ನೀಡಿದ್ದಾರೆ. ಇನ್ನುಳಿದ ಹಣವನ್ನು ಅಕೌಂಟ್ ಮಾಹಿತಿ ಪಡೆದು ಶೀಘ್ರದಲ್ಲೇ ಕಳುಹಿಸಲು ಅಧಿಕಾರಿಗಳ ತೀರ್ಮಾನಿಸಿದ್ದಾರೆ.

ಇನ್ನೂ ಬಾಲಕನ ಕೊಂದ ಚಿರತೆಯ ಚಲನವಲನ ಥರ್ಮಲ್ ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹೀಗಾಗಿ ಸದ್ಯ ಅರಣ್ಯ ಇಲಾಖೆ ಚಿರತೆ ಸೆರೆಗೆ ಮುಂದಾಗಿದ್ದು, ನಾಲ್ಕು ಬೋನ್ ಅಳವಡಿಕೆ ಮಾಡಿದ್ದಾರೆ. ಅಲ್ಲದೇ ಸ್ಥಳದಲ್ಲಿ 30ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಬೀಡುಬಿಟ್ಟಿದ್ದಾರೆ. ಥರ್ಮಲ್ ಡ್ರೋನ್ ಟೀಂ ಕೂಡ ರಾತ್ರಿಯಿಡಿ ಚಿರತೆಯ ಮೇಲೆ ನಿಗಾ ವಹಿಸಿದ್ದಾರೆ. ಸದ್ಯಕ್ಕೆ ತಾತ್ಕಾಲಿಕವಾಗಿ ನಾಗಮಲೆಗೆ ಹೋಗಲೂ ಭಕ್ತರಿಗೆ ನಿರ್ಬಂಧ ಹೇರಲಾಗಿದೆ.ಕಾಡಿನೊಳಗೆ ಹೋಗುವಾಗ 200 ರೂ. ಹೆಚ್ಚಿನ ಹಣ ತೆಗೆದುಕೊಂಡು ಒಳಗಡೆ ಬಿಟ್ಟಿದ್ದಾರೆ.

ಮಗು ಮೇಲೆ ದಾಳಿಯಾಗಿ ಅರ್ಧ ಗಂಟೆಯಾದರೂ ಯಾವ ಅರಣ್ಯಾಧಿಕಾರಿಯೂ ಬಂದಿರಲಿಲ್ಲ. ನಂತರ ಜನ ಜಗಳ ಮಾಡಿದಾಗ ಮೃತದೇಹ ಹುಡುಕಿದ್ದಾರೆ. ನಮ್ಮ ಮಗುವಿಗೆ ಆದ ಹಾಗೆ ಯಾರಿಗೂ ಆಗಬಾರದು. ಈ ಸಾವಿಗೆ ಅರಣ್ಯ ಇಲಾಖೆ ನಿರ್ಲಕ್ಷ್ಯವೇ ಕಾರಣ ಎಂದು ಬಾಲಕನ ಕುಟುಂಬಸ್ಥರುಮ ಆರೋಪಿಸಿದ್ದಾರೆ.



### ಡ್ರೋನ್ ಕ್ಯಾಮೆರಾದಲ್ಲಿ ಚಿರತೆ ಚಲನವಲನ ಸೆರೆ

ಬಾಲಕನ ಕೊಂದ ಚಿರತೆಯ ಚಲನವಲನ ಥರ್ಮಲ್ ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇನ್ನು ಚಿರತೆ ಸೆರೆಗೆ ಅರಣ್ಯ ಇಲಾಖೆ ಮುಂದಾಗಿದ್ದು, ನಾಲ್ಕು ಬೋನ್ ಅಳವಡಿಕೆ ಮಾಡಿದೆ.

### ಏನಿದು ಘಟನೆ?

ನಾಗಮಲೆಗೆ ಪಾದಯಾತ್ರೆ ಹೋಗುತ್ತಿದ್ದ ಬೆಂಗಳೂರು ಮೂಲದ ಕಾಮಾಕ್ಷಿಪಾಳ್ಯದ ವೃಷಭಾವತಿ ನಗರದ ಹರ್ಷಿತ್ ಗೌಡನನ್ನು ಚಿರತೆ ಪೋಷಕರ ಕಣ್ಣೆದುರಲ್ಲೇ ಎಳೆದೊಯ್ದು ಕೊಂದು ಹಾಕಿದ ಘೋರ ಘಟನೆ ಹನೂರು ತಾಲ್ಲೂಕಿನ ಇಂಡಿಗನತ್ತ ಗ್ರಾಮದ ಬಳಿ ನಡೆದಿತ್ತು.ಕುಟುಂಬದ 10 ಮಂದಿ ಸದಸ್ಯರೊಂದಿಗೆ ಹರ್ಷಿತ್ ನಾಗಮಲೆ ಹಾದಿಯಲ್ಲಿ ತೆರಳುತ್ತಿದ್ದಾಗ, ಇಂಡಿಗನತ್ತ ಸಮೀಪ ಚಿರತೆ ದಾಳಿ ಮಾಡಿದೆ. ಕುಟುಂಬಸ್ಥರ ಕಣ್ಣೆದುರೇ ಬಾಲಕನನ್ನು ಚಿರತೆ ಎಳೆದೊಯ್ದಿದೆ. ಸ್ಥಳಕ್ಕೆ ಆಗಮಿಸಿದ ಅರಣ್ಯಾಧಿಕಾರಿಗಳು ಕಾರ್ಯಾಚರಣೆ ನಡೆಸಿದಾಗ, ಅರಣ್ಯದೊಳಗೆ ಬಾಲಕನ ಶವ ಪತ್ತೆಯಾಗಿತ್ತು.

## ನಿಲ್ಲದ ಕೋತಿ, ನಾಯಿ ಕಾಟ



ಉದಯವಾಹಿನಿ ಚಿತ್ರ

• ಉದಯವಾಹಿನಿ, ತುಮಕೂರು

ನಗರದ ವಿವಿಧೆಡೆ ಬೀದಿ ನಾಯಿ, ಕೋತಿ ಹಾವಳಿ ಹೆಚ್ಚಾಗಿದ್ದು, ಜನ ಭಯದಲ್ಲಿ ಓಡಾಡುವಂತಾಗಿದೆ. ನಗರದ ಯಾವುದೇ ಬಡಾವಣೆ, ಪ್ರಮುಖ ರಸ್ತೆಗೆ ಹೋದರೂ ನಾಯಿಗಳು ದಾಳಿ ಮಾಡುತ್ತಿವೆ. ಇದರ ಮಧ್ಯೆ ಕೋತಿಗಳ ಕಾಟ ಜಾಸ್ತಿಯಾಗಿದ್ದು, ಮನೆಗೆ ನುಗ್ಗುತ್ತಿವೆ. ಸಿಕ್ಕ ಸಿಕ್ಕ ವಸ್ತುಗಳನ್ನು ಹೊತ್ತೊಯ್ಯುತ್ತಿವೆ. ಇದರಿಂದ ಜನರು ಬೇಸತ್ತು ಹೋಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ನಿಯಂತ್ರಣ ಹೇರಬೇಕು' ಎಂದು ಸಾಮಾಜಿಕ ಹೋರಾಟಗಾರ ಬೆಳಗುಂಬ ವೆಂಕಟೇಶ್ ಒತಾಯಿಸಿದಾರೆ.

ಬೈಕ್, ಕಾರು ಹಿಂಬಾಲಿಸಿಕೊಂಡು ಬರುವ ನಾಯಿಗಳಿಂದ ಸವಾರರು ಹೈರಾಣಾಗಿದ್ದಾರೆ. ಹಿಂಡು ಹಿಂಡಾಗಿ ಬರುವ ನಾಯಿಗಳಿಂದ ತಪ್ಪಿಸಿಕೊಳ್ಳಲು ಹೋಗಿ ವಾಹನದಿಂದ ಕೆಳಗಡೆ ಬಿದ್ದು, ಗಾಯ ಮಾಡಿಕೊಂಡಿದ್ದಾರೆ. ಮಕ್ಕಳ ಮೇಲೆ ಎರಗುತ್ತಿವೆ. ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡಿಸಬೇಕು.

## ಮೋದಿ ತೆರಳುವ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿ ಪತ್ತೆ ಕೇಸ್ ತನಿಖೆಗೆ 4 ತಂಡ ರಚನೆ

• ಉದಯವಾಹಿನಿ, ರಾಮನಗರ

ಬೆಂಗಳೂರಿನ ಹೊರವಲಯದ ಆರ್ಟ್ ಆಫ್ ಲಿವಿಂಗ್‌ನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ ಭದ್ರತೆಯಲ್ಲಿ ಲೋಪ ಉಂಟಾಗಿದ್ದು, ಮೋದಿ ತೆರಳುವ ರಸ್ತೆ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರೋದು ಹಲವು ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಕಗ್ಗಲೀಪುರ ಪೊಲೀಸರು, ತನಿಖೆಗೆ 4 ತಂಡ ರಚನೆ ಮಾಡಿ ವಿವಿಧ ಆಯಾಮಗಳಲ್ಲಿ ವಿಚಾರಣೆ ಆರಂಭಿಸಿದ್ದಾರೆ.

ಬೆಂಗಳೂರು ಹೊರವಲಯದ ಕಗ್ಗಲೀಪುರ ಸಮೀಪ ಇರುವ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ನೂತನವಾಗಿ ನಿರ್ಮಿಸಲಾದ ಧ್ಯಾನ ಮಂದಿರ ಉದ್ಘಾಟನೆ ಹಾಗೂ ಸಂಸ್ಥೆಯ 45ನೇ ವಾರ್ಷಿಕೋತ್ಸವ ಹಿನ್ನೆಲೆ ಪ್ರಧಾನಿ ಮೋದಿ ಆಗಮಿಸಿದ್ದರು. ಕಾರ್ಯಕ್ರಮ ಮುಗಿಸಿ ವಾಪಸ್ ತೆರಳಿದ ಬಳಿಕ ಆತಂಕಕಾರಿ ಅಂಶ ಬೆಳಕಿಗೆ ಬಂದಿದೆ. ಮೋದಿ ತೆರಳುವ ರಸ್ತೆ ಮಾರ್ಗದಲ್ಲಿ ಸ್ಫೋಟಕ ವಸ್ತುಗಳು ಪತ್ತೆಯಾಗಿರೋದು ಹಲವು ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ.

ಕಗ್ಗಲೀಪುರ ಸಮೀಪದ ತಾತಗುಣಿ ಬಳಿಯ ರಸ್ತೆ ಪಕ್ಕದಲ್ಲಿ ಬೆಳಗ್ಗೆ 10 ಗಂಟೆ ಸುಮಾರಿಗೆ ಪೊಲೀಸರ ಪರಿಶೀಲನೆ ವೇಳೆ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿವೆ. ತಕ್ಷಣ ಪೊಲೀಸರು ಜಿಲೆಟಿನ್ ಕಡ್ಡಿಗಳನ್ನ ವಶಕ್ಕೆ ಪಡೆದಿದ್ದಾರೆ. ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಉದಯವಾಹಿನಿ ಚಿತ್ರ

ಕಾರ್ಯಕ್ರಮದಿಂದ ಪ್ರಧಾನಿ ಮೋದಿ ತೆರಳಿದ ಬಳಿಕ ಸ್ಥಳಕ್ಕೆ ಸುಕೋ ಟೀಂ ಹಾಗೂ ಎಫ್‌ಎಸ್‌ಎಲ್ ಟೀಂ ಭೇಟಿ ನೀಡಿ ತಪಾಸಣೆ ನಡೆಸಿದ್ದಾರೆ. ಈ ಬಗ್ಗೆ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಇನ್ನೂ ಪ್ರಕರಣದ ತನಿಖೆಗೆ ರಾಮನಗರ ಡಿವೈಎಸ್ಪಿ ಶ್ರೀನಿವಾಸ್ ನೇತೃತ್ವದಲ್ಲಿ ನಾಲ್ಕು ತಂಡಗಳ ರಚನೆ ಮಾಡಲಾಗಿದ್ದು, 50ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ.

### ಬೆದರಿಕೆ ಹಾಕಿದ್ದ ಪ್ರಕರಣ

ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿಗಳ ಪರಿಶೀಲನೆ ಮಾಡಲಾಗುತ್ತಿದ್ದು, ಸ್ಥಳಕ್ಕೆ ಜಿಲೆಟಿನ್ ಕಡ್ಡಿ ಹೇಗೆ ಬಂತು, ಯಾರು ಅದನ್ನ ತಂದು ರಸ್ತೆ ಪಕ್ಕ ಹಾಕಿದ್ದಾರೆ ಎಂಬ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ. ಅಲ್ಲದೇ ಜಿಲೆಟಿನ್ ಕಡ್ಡಿ ಬಳಸುವ ಕಲ್ಲುಕ್ವಾರಿ ಮಾಲೀಕರು ಹಾಗೂ ಕಾರ್ಮಿಕರ ಬಗ್ಗೆಯೂ ಮಾಹಿತಿ ಕಲೆಹಾಕುತ್ತಿದ್ದಾರೆ. ಜೊತೆಗೆ ಅಕ್ಕಪಕ್ಕದ ಗೋಡೌನ್‌ಗಳನ್ನೂ ತಪಾಸಣೆ ನಡೆಸಿದ್ದಾರೆ.ಇನ್ನೂ ಬೆಂಗಳೂರಿನ ಕೋರಮಂಗಲ ಮೂಲದ ವ್ಯಕ್ತಿಯೋರ್ವ ಪೊಲೀಸರಿಗೆ ಬೆದರಿಕೆ ಹಾಕಿದ್ದ ಪ್ರಕರಣ ಹಾಗೂ ಜಿಲೆಟಿನ್ ಕಡ್ಡಿ ಪತ್ತೆಯಾದ ಪ್ರಕರಣಕ್ಕೂ ಏನಾದರೂ ಸಂಬಂಧ ಇದೆಯಾ ಅಥವಾ ಕೇವಲ ಜಿಲೆಟಿನ್ ಕಡ್ಡಿ ಇಟ್ಟು ಬೆದರಿಸುವ ಕೆಲಸ ಆಗಿದ್ಯಾ ಎಂಬುದು ತನಿಖೆ ಮೂಲಕ ಬೆಳಕಿಗೆ ಬರಬೇಕಿದೆ

## ಮಿನಿ ನ್ಯೂಸ್

### ನಾಯಿಗಳ ದಾಳಿಗೆ ಸಿಲುಕಿದ ಜಿಂಕೆ ರಕ್ಷಣೆ : ತೆರಕಣಾಂಬಿಯಲ್ಲಿ ಘಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಬೀದಿ ನಾಯಿಗಳ ದಾಳಿಯಿಂದ ತಪ್ಪಿಸಿಕೊಂಡ ಜಿಂಕೆಯೊಂದು ತೆರಕಣಾಂಬಿ ಸಾರಿಗೆ ಬಸ್ ನಿಲ್ದಾಣದೊಳಗೆ ನುಗ್ಗಿದ ಘಟನೆ ತಾಲ್ಲೂಕಿನ ತೆರಕಣಾಂಬಿ ಗ್ರಾಮದಲ್ಲಿ ಸೋಮವಾರ ನಡೆದಿದೆ.

ದಾರಿ ತಪ್ಪಿ ತೆರಕಣಾಂಬಿ ಗ್ರಾಮದೊಳಗೆ ಪ್ರವೇಶಿಸಿದ ಜಿಂಕೆಯ ಮೇಲೆ ಬೀದಿ ನಾಯಿಗಳು ದಾಳಿಗೆ ಮುಂದಾದಾಗ ಬೆದರಿ ತಪ್ಪಿಸಿಕೊಂಡ ಸಾರಿಗೆ ಬಸ್ ನಿಲ್ದಾಣದೊಳಗೆ ನುಗ್ಗಿದೆ.

ಇದನ್ನ ಗಮನಿಸಿದ ತೆರಕಣಾಂಬಿ ಸಾರಿಗೆ ಬಸ್ ನಿಲ್ದಾಣದ ಸಂಚಾರ ನಿಯಂತ್ರಕ ಎಸ್.ವಿಠಲ ನಾಯಿಗಳಿಂದ ಜಿಂಕೆಯನ್ನು ರಕ್ಷಿಸಿ, ನಂತರ ಅರಣ್ಯಾಧಿಕಾರಿಗಳು ಮತ್ತು ಪೊಲೀಸರಿಗೆ ಮಾಹಿತಿ ತಿಳಿಸಿದ್ದಾರೆ. ಕೂಡಲೇ ಆಗಮಿಸಿದ ಬಂಡೀಪುರ ಅರಣ್ಯಾಧಿಕಾರಿಗಳು ಜಿಂಕೆಯನ್ನು ವಶಕ್ಕೆ ಪಡೆದು ಕಾಲು ಹಾಗೂ ದೇಹದ ಭಾಗಕ್ಕೆ ಗಾಯಗಳಾಗಿದ್ದ ಹಿನ್ನೆಲೆ ಚಿಕಿತ್ಸೆಗೆ ಕೊಂಡೊಯ್ದಿದ್ದಾರೆ.

### ಬೆಳೆ ಹಾನಿಗೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿ ರೈತ ಸಂಘ ಪ್ರತಿಭಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಬೆಳೆ ಹಾನಿಗೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಮುಂದೆ ಸೋಮವಾರ ಪ್ರತಿಭಟನೆ ನಡೆಸಲಾಯಿತು. ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಅಭಯಾರಣ್ಯದ ಮೇಲುಕಾಮನಹಳ್ಳಿ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಮುಂದೆ ಜಮಾವಣೆಗೊಂಡ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಅರಣ್ಯಾಧಿಕಾರಿಗಳ ವಿರುದ್ಧ ಅಸಮಾಧಾನ ಹೊರ ಹಾಕಿದರು. ಈ ಸಂದರ್ಭದಲ್ಲಿ ಸಂಘಟನೆ ತಾಲ್ಲೂಕು ಅಧ್ಯಕ್ಷ ಪ್ರಭುಸ್ವಾಮಿ, ಬಂಡೀಪುರ ಕಾಡಂಚಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಹಾವಳಿಯಿಂದ ಉಂಟಾದ ನಷ್ಟ ಭರಿಸಲು ಅರಣ್ಯ ಇಲಾಖೆ ವಿಫಲರಾಗಿದೆ. ಪರಿಹಾರ ನೀಡಲು ತಿಂಗಳುಗಳ ಗಟ್ಟಲೆ ರೈತರನ್ನು ಅಲೆಸುವ ಕೆಲಸ ಮಾಡುತ್ತಿದ್ದಾರೆ. ಬಿಡಿಗಾಸು ರೂಪದಲ್ಲಿ ಪರಿಹಾರ ಹಣ ಬರುತ್ತಿದೆ. ಇದರಿಂದ ರೈತರಿಗೆ ಅಪಾರ ನಷ್ಟ ಉಂಟಾಗುತ್ತಿದ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯಾಧಿಕಾರಿಗಳು ಕಾರಣ ಹೇಳಿ ಕಾಲಾಹರಣ ಮಾಡದೆ ಕಾಡು ಪ್ರಾಣಿಗಳಿಂದ ಬೆಳೆ ಹಾನಿಗೆ ಸಂಭವಿಸಿದ ವಾರದೊಳಗೆ ಸಮರ್ಪಕ ಪರಿಹಾರ ನೀಡಬೇಕು. ನಿರ್ಲಕ್ಷ್ಯ ಮಾಡಿದರೆ ಅರಣ್ಯ ಕಚೇರಿಗಳಿಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ವೇಳೆ ಪ್ರತಿಭಟನಾ ನಿರತ ರೈತರು ಬಂಡೀಪುರ ಅರಣ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಆನಂದ ಮಹೇಶ್, ಶಿವು, ಶಿವರಾಜು, ಕುಮಾರ ಸೇರಿದಂತೆ ಹಲವು ಮಂದಿ ಹಾಜರಿದ್ದರು.

### ಕೆ.ಆರ್.ಪೇಟೆ: ಕುಡಿಯುವ ನೀರಿಗಾಗಿ ಮಹಿಳೆಯರ ಪ್ರತಿಭಟನೆ

• ಉದಯವಾಹಿನಿ, ಕೆ.ಆರ್.ಪೇಟೆ

ಶಾಸಕ ಎಚ್.ಟಿ.ಮಂಜು ಹುಟ್ಟೂರು ಹರಳಹಳ್ಳಿ ಗ್ರಾಮದಲ್ಲಿ ಗ್ರಾ.ಪಂ. ವ್ಯಾಪ್ತಿಯ ರಾಯಸಮುದ್ರ ಗ್ರಾಮದ ಮಹಿಳೆಯರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ತಾಲ್ಲೂಕಿನಲ್ಲಿ ಬಿರುಬಿಸಿಲು ಹೆಚ್ಚಿದ್ದು ಅಂತರ್ಜಲ ಮಟ್ಟ ಕುಸಿದಿರುವುದರಿಂದ ಹರಳಹಳ್ಳಿ ಸೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಯಸಮುದ್ರ ಗ್ರಾಮಗಳಲ್ಲಿ ತೀವ್ರತರ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಸಮಸ್ಯೆ ಬಗೆಹರಿಸಿ ಶುದ್ಧ ಕುಡಿಯುವ ನೀರನ್ನು ಪೂರೈಸಲು ಗ್ರಾಮ ಪಂಚಾಯಿತಿ ವಿಫಲವಾಗಿದೆ. ಶಾಸಕರು ಸಮಸ್ಯೆ ಬಗೆಹರಿಸುತ್ತಿಲ್ಲವೆಂದು ರಾಯಸಮುದ್ರ ಸೇರಿ ಸುತ್ತಮುತ್ತಲ ಗ್ರಾಮದ ಮಹಿಳೆಯರು ಖಾಲಿ ಕೊಡ ಹಿಡಿದು ಶುದ್ಧ ನೀರಿನ ಪೂರೈಕೆಗೆ ಒತ್ತಾಯಿಸಿ ಗ್ರಾಮ ಪಂಚಾಯಿತಿ ಮುಂದೆ ಪ್ರತಿಭಟನೆ ನಡೆಸಿದರು.ಗ್ರಾಮ ಪಂಚಾಯಿತಿ ಕಚೇರಿಗೆ ಬೀಗ ಜಡಿದು, ಕೊಡ ಹಿಡಿದು ಪ್ರತಿಭಟನೆ ನಡೆಸಿದ ಮಹಿಳೆಯರು ಒಂದೆರಡು ದಿನಗಳಲ್ಲಿ ನಮ್ಮ ಬೇಡಿಕೆ ಹೀಡೇರಿಸದಿದ್ದರೆ ಚಳವಳಿ ನಡೆಸುವುದಾಗಿ ಎಚ್ಚರಿಕೆ ನೀಡಿದರು.

### ಮಳೆ ಕೊರತೆ- ಒಣಗಿದ ಕಲ್ಪವೃಕ್ಷ

• ಉದಯವಾಹಿನಿ, ಶ್ರೀರಂಗಪಟ್ಟಣ

ಮಳೆ ಕೊರತೆಯಿಂದಾಗಿ ತಾಲ್ಲೂಕಿನ ಚನ್ನನಕೆರೆ ಗ್ರಾಮದಲ್ಲಿ ಹಲವು ರೈತರಿಗೆ ಸೇರಿದ 50ಕ್ಕೂ ಹೆಚ್ಚು ತೆಂಗಿನ ಮರಗಳು ಒಣಗಿ ಹೋಗಿವೆ. ಗ್ರಾಮದ ನರೇಂದ್ರ ಅವರಿಗೆ ಸೇರಿದ 20, ಪುಟ್ಟಲಿಂಗಮ್ಮ ಮಾದೇಗೌಡ ಅವರ 10, ಸಿ.ಜೆ. ಕೃಷ್ಣಗೌಡ ಅವರ 15, ದಿಲೀಪ್ ಕುಮಾರ್ ಅವರ 18, ಮರವೇಗೌಡ ಅವರಿಗೆ ಸೇರಿದ 8 ಹಾಗೂ ಇತರ ರೈತರಿಗೆ ಸೇರಿದ ಮರಗಳು ನೀರಿನ ಕೊರತೆಯಿಂದ ಸಂಪೂರ್ಣ ಒಣಗಿವೆ. ಸಮೃದ್ಧವಾಗಿ ಫಲ ಕೊಡುತ್ತಿದ್ದ ತೆಂಗಿನ ಮರಗಳು ನೀರಿನ ಕೊರತೆಯಿಂದ ಕೆಲವೇ ತಿಂಗಳಲ್ಲಿ ಸುಳಿಗೂಡಿವೆ. ಹತ್ತಾರು ವರ್ಷಗಳ ಹಿಂದೆ ನೆಟ್ಟು ಬೆಳೆಸಿದ್ದ ಕಲ್ಪವೃಕ್ಷಗಳು ಒಣಗಿ ನಿಂತಿರುವ ದೃಶ್ಯ ನೋಡುಗರ ಮನ ಕಲಕುತ್ತವೆ.

ಚನ್ನನಕೆರೆ ಗ್ರಾಮದ ಕೆರೆ ಭತ್ತಿ ಹೋಗಿದ್ದು ಹಕ್ಕಿಗಳು ಕುಡಿಯಲೂ ನೀರಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮದ ಆಸುಪಾಸಿನಲ್ಲಿರುವ ಬಹುತೇಕ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕೊರೆಸಿದ್ದ ಕೊಳವೆ ಬಾವಿಗಳು ಬತ್ತಿರುವ ಪರಿಣಾಮ ತೆಂಗಿನ ಮರಗಳು ಒಣಗಿವೆ. ಹತ್ತಾರು ವರ್ಷಗಳ ಹಿಂದೆ ನೆಟ್ಟು ಮೈಲು ದೂರದಿಂದ ನೀರು ಹೊತ್ತು ತಂದು ಹಾಕಿ ಕಷ್ಟಪಟ್ಟು ಬೆಳೆಸಿದ ಮರಗಳು ಒಣಗಿರುವುದರಿಂದ ರೈತರು ಕಂಗಾಲಾಗಿದ್ದಾರೆ.

ಅಂತರಾಳದಿಂದ..
EDITORIAL

# ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಾಷ್ಟ್ರರಾಜಕಾರಣದಲ್ಲೂ ಪರಿಣಾಮ



ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿಯಾಗಿ ಸುವೇಂದು ಅಧಿಕಾರಿ ಅವರು ಪ್ರಮಾಣವಚನ ಸ್ವೀಕರಿಸಿರುವುದು ಆ ರಾಜ್ಯದ ರಾಜಕೀಯದಲ್ಲಿನ ಒಂದು ನಿರ್ಣಾಯಕ ಪರಿವರ್ತನೆಯಂತೆ ಕಾಣಿಸುತ್ತಿದೆ. ಪಶ್ಚಿಮ ಬಂಗಾಳದಲ್ಲಿನ ಬದಲಾವಣೆಯು ಆ ರಾಜ್ಯದ ಮೇಲಷ್ಟೇ ಅಲ್ಲದೆ, ರಾಷ್ಟ್ರ ರಾಜಕಾರಣದ ಮೇಲೆಯೂ ಪರಿಣಾಮ ಬೀರಲಿದೆ. ಬಿಜೆಪಿಯ ಸಿದ್ಧಾಂತ, ಅದರ ರಾಜಕಾರಣ ಹಾಗೂ ಆಡಳಿತ ವಿಧಾನಕ್ಕೆ ಹಲವು ವರ್ಷಗಳಿಂದ ಪ್ರತಿರೋಧ ಒಡ್ಡುತ್ತಾ ಬಂದಿದ್ದ ದೊಡ್ಡ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳವೂ ಒಂದು. ಈಗ ಅದು ಬಿಜೆಪಿಗೆ ತನ್ನ ಒಲವನ್ನು ಬಹುದೊಡ್ಡ ಮಟ್ಟದಲ್ಲಿ ತೋರಿಸಿದೆ.

2016ರ ವಿಧಾನಸಭಾ ಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿಯು ಈಗ ಅಲ್ಲಿ 200ಕ್ಕೂ ಹೆಚ್ಚು ಸಂಖ್ಯಾಬಲ ಪಡೆದುಕೊಂಡಿದೆ. ಈ ಸ್ಥಿರ ಬೆಳವಣಿಗೆಯ ಹಿಂದೆ ಸೈದ್ಧಾಂತಿಕ, ಸಂಘಟನಾತ್ಮಕ ಹಾಗೂ ನಾಯಕತ್ವದ ಮಟ್ಟದಲ್ಲಿನ ಪರಿಶ್ರಮ ಕೆಲಸ ಮಾಡಿದೆ. ಬದಲಾವಣೆಯ ಸೂಚನೆಗಳು ಕೆಲವು ವರ್ಷಗಳಿಂದ ಕಾಣಿಸಿಕೊಳ್ಳುತ್ತಿದ್ದುದು ಹೌದಾದರೂ, ಈ ಬಾರಿ ಅಲ್ಲಿ ಆಗಿರುವುದು ದಿಢೀರ್ ಬದಲಾವಣೆಯೇ, ಚುನಾವಣಾ ಆಯೋಗವು ಜಾರಿಗೆ ತಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ, ಲಕ್ಷಾಂತರ ಮಂದಿಗೆ ಮತದಾನದ ಹಕ್ಕನ್ನು ನಿರಾಕರಿಸಿತು ಹಾಗೂ ಆಯೋಗವು ಚುನಾವಣಾ ಪ್ರಚಾರದ ಅವಧಿಯಲ್ಲಿ ಕೈಗೊಂಡ ಭದ್ರತಾ ಮತ್ತು ಆಡಳಿತಾತ್ಮಕ ತೀರ್ಮಾನಗಳು ಫಲಿತಾಂಶದ ಮೇಲೆ ಪರಿಣಾಮ ಬೀರಿದವು.

ಆದರೂ, ಮತದಾರರು ಬದಲಾವಣೆಯನ್ನು ಬಯಸುತ್ತಿದ್ದರು ಎನ್ನುವುದನ್ನು ನಿರಾಕರಿಸಲು ಆಗುವುದಿಲ್ಲ. ಪ್ರಾದೇಶಿಕ ಅಸ್ಮಿತೆಯ ರಾಜಕಾರಣವನ್ನು ಮುಂದಿಟ್ಟುಕೊಂಡು ಮಮತಾಬ್ಯಾನರ್ಜಿ ಅವರು ಬಲ ಹೆಚ್ಚಿಸಿಕೊಂಡಿದ್ದರು. ದಬ್ಬಾಳಿಕೆಯ ಧೋರಣೆ ಹೊಂದಿರುವ ಕೇಂದ್ರ ಸರ್ಕಾರ ಹಾಗೂ ಬಹು ಸಂಖ್ಯಾತವಾದಿ ಸಿದ್ಧಾಂತದ ವಿರುದ್ಧವಾಗಿ ನಿಂತು, ರಾಜ್ಯವನ್ನು ಕಾಪಾಡುವ ವ್ಯಕ್ತಿ ತಾವು ಎಂದು ಮಮತಾ ಅವರು ತಮ್ಮನ್ನು ಬಿಂಬಿಸಿಕೊಂಡಿದ್ದರು. ಇತ್ತ ಬಿಜೆಪಿಯು ರಾಷ್ಟ್ರದ ಸಮಗ್ರತೆ, ಗಡಿಯ ಭದ್ರತೆ, ಪೌರತ್ವ ಹಾಗೂ ಜನಸಂಖ್ಯೆಯಲ್ಲಿ ಆಗುತ್ತಿರುವ ಬದಲಾವಣೆಗಳ ಸುತ್ತಲಿನ ಆತಂಕಗಳನ್ನು ಆಧರಿಸಿ ಹೊಸ ಅಸ್ಮಿತೆಯ ಚೌಕದ್ದೊಂದನ್ನು ಜನರ ಮುಂದೆ ಇರಿಸಿತು. ಅಕ್ರಮ ವಲಸೆ, ಅಲ್ಪಸಂಖ್ಯಾತರ ಓಲೈಕೆಯಂತಹ ವಿಷಯ ಗಳನ್ನು ಜನರ ಮುಂದಿರಿಸಿ, ತನ್ನ ಪರವಾಗಿ ಜನಾಭಿಪ್ರಾಯ ರೂಪುಗೊಳ್ಳುವಂತೆ ಮಾಡುವ ಧಾರ್ಮಿಕ ಧ್ರುವೀಕರಣ ಸಾಧ್ಯವಾಗಿಸುವಲ್ಲಿ ಬಿಜೆಪಿ ಯಶಸ್ಸು ಪಡೆಯಿತು.

> **ಸುವೇಂದು ಅಧಿಕಾರಿ ಅವರ ಆಪ್ತರೊಬ್ಬರ ಹತ್ಯೆಯಾಗಿರುವುದು ಆಡಳಿತದಲ್ಲಿನ ಸಮಸ್ಯೆಗಳನ್ನು ಕೂಡ ಹೇಳುತ್ತಿದೆ. ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಪಕ್ಷಗಳು ಆಡಳಿತಕ್ಕೆ ಬಂದಾಗ, ತಮ್ಮ ಪ್ರಾಬಲ್ಯ ತೋರಿಸಲು ಹಾಗೂ ವಿರೋಧಿಗಳನ್ನು ಹತ್ತಿಕ್ಕಲು ಹಿಂಸೆಯನ್ನು ಬಳಸಿಕೊಂಡ ನಿದರ್ಶನಗಳಿವೆ. ಅವೇ ಪಕ್ಷಗಳು ಕಾಲಕ್ರಮೇಣ ಆ ಹಿಂಸೆಯ ಸಂಸ್ಕೃತಿಯಲ್ಲಿ ಸಿಲುಕಿಕೊಂಡಿವೆ ಕೂಡ.**

ನಿರುದ್ಯೋಗ, ಭ್ರಷ್ಟಾಚಾರ, ಆಡಳಿತದಲ್ಲಿನ ಲೋಪಗಳು, ಕಾನೂನು ಮತ್ತು ಸುವ್ಯವಸ್ಥೆಯ ವಿಚಾರವಾಗಿ ತೃಣಮೂಲ ಕಾಂಗ್ರೆಸ್ ಪಕ್ಷದ ವಿರುದ್ಧ ಅಲೆಯೊಂದು ಇತ್ತು. ಜನಕಲ್ಯಾಣ ಯೋಜನೆಗಳನ್ನು ಆಧರಿಸಿದ ರಾಜಕೀಯದ ಮೂಲಕ ಮಮತಾ ಅವರು ಸಂಪಾದಿಸಿದ ರಾಜಕೀಯ ಬಂಡವಾಳ, ಮಹಿಳಾ ಮತದಾರರ ನಡುವೆ ಅವರು ಹೊಂದಿದ್ದ ವರ್ಚಸ್ಸು ಕುಗ್ಗುತ್ತಾ ಬಂದಿದ್ದವು.

ಅಲ್ಪಸಂಖ್ಯಾತರ ಮತಗಳನ್ನು ಮಮತಾ ನೆಚ್ಚಿಕೊಂಡಿದ್ದರೂ, ಆ ಮತಗಳು ಅವರ ಗೆಲುವು ಖಾತರಿಪಡಿಸಲು ಸಾಕಾಗಲಿಲ್ಲ. ಈ ಪರಿಸ್ಥಿತಿಯಲ್ಲಿ ಬಿಜೆಪಿಯು ಬದಲಾವಣೆಗೆ ಜನಾದೇಶ ಪಡೆದಿದೆ.

ರಾಜ್ಯದ ಅರ್ಥ ವ್ಯವಸ್ಥೆ ಮತ್ತು ಸಮಾಜಕ್ಕೆ ಹೊಸ ಚೈತನ್ಯ ತುಂಬುವುದಾಗಿ ಬಿಜೆಪಿ ಸರ್ಕಾರವು ಭರವಸೆ ನೀಡಿದೆ. ಅದರ ಮುಂದೆ ಗಂಭೀರ ಸವಾಲುಗಳಿವೆ. ಸುವೇಂದು ಅಧಿಕಾರಿ ಅವರ ಆಪ್ತರೊಬ್ಬರ ಹತ್ಯೆಯಾಗಿರುವುದು ಆಡಳಿತದಲ್ಲಿನ ಸಮಸ್ಯೆಗಳನ್ನು ಕೂಡ ಹೇಳುತ್ತಿದೆ. ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಪಕ್ಷಗಳು ಆಡಳಿತಕ್ಕೆ ಬಂದಾಗ, ತಮ್ಮ ಪ್ರಾಬಲ್ಯ ತೋರಿಸಲು ಹಾಗೂ ವಿರೋಧಿಗಳನ್ನು ಹತ್ತಿಕ್ಕಲು ಹಿಂಸೆಯನ್ನು ಬಳಸಿಕೊಂಡ ನಿದರ್ಶನಗಳಿವೆ. ಅವೇ ಪಕ್ಷಗಳು ಕಾಲಕ್ರಮೇಣ ಆ ಹಿಂಸೆಯ ಸಂಸ್ಕೃತಿಯಲ್ಲಿ ಸಿಲುಕಿಕೊಂಡಿವೆ ಕೂಡ. ಈ ವರ್ತುಲದಿಂದ ಹೊಸ ಸರ್ಕಾರ ತನ್ನನ್ನು ಬಿಡಿಸಿಕೊಳ್ಳಬೇಕಾಗಿದೆ. ಉದ್ಯೋಗ ಸೃಷ್ಟಿ, ಕೈಗಾರಿಕೀಕರಣ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಅರ್ಥ ವ್ಯವಸ್ಥೆಯ ಸುಧಾರಣೆಯು ಸರ್ಕಾರದ ಮುಂದೆ ಇರುವ ಗಂಭೀರ ಸವಾಲುಗಳು. ಸುವೇಂದು ಅವರ ಸರ್ಕಾರಕ್ಕೆ ಕೇಂದ್ರದ ನೆರವು ಸಿಗುವುದು ಖಚಿತ.

ಆದರೆ, ಹೊಸ ಸರ್ಕಾರವು ಬಹಳ ಬೇಗ ಕೆಲಸ ಮಾಡಿ ತೋರಿಸಬೇಕಿದೆ. ಆ ರಾಜ್ಯದ ಜನಸಂಖ್ಯೆಯಲ್ಲಿ ಮುಸ್ಲಿಮರ ಪಾಲು ಸುಮಾರು ಶೇ 30ರಷ್ಟಿದ್ದು, ಒಳಗೊಳ್ಳುವ ಸಂಸ್ಕೃತಿಯ ಸ್ವರೂಪವನ್ನು ಸರ್ಕಾರ ಕಾಪಾಡಿಕೊಳ್ಳಬೇಕಿದೆ. ನೆರೆಯ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಶರ್ಮಾ ಅವರಂತೆಯೇ ಉಗ್ರ ಹಿಂದುತ್ವದ ನಿಲುವು, ಧ್ರುವೀಕರಣಕ್ಕೆ ದಾರಿ ಮಾಡಿಕೊಡುವ ಮಾತುಗಳ ಮೂಲಕವೇ ಸುವೇಂದು ತಮ್ಮನ್ನು ಗುರ್ತಿಸಿಕೊಂಡಿದ್ದಾರೆ. ವಿಭಜನಕಾರಿ ರಾಜಕೀಯ ಹಾಗೂ ಸಾಮಾಜಿಕ ಪರಿಸರದಲ್ಲಿ ಯಾವುದೇ ಪ್ರಜಾಪ್ರಭುತ್ವವಾದಿ ಸರ್ಕಾರ ಕೆಲಸ ಮಾಡಲು ಆಗುವುದಿಲ್ಲ, ಜನರ ಕಲ್ಯಾಣವನ್ನು ಖಾತರಿಪಡಿಸಲು ಕೂಡ ಆಗುವುದಿಲ್ಲ.

ಒಲೆಟ್ರಾ, ಗ್ರೀನ್ ಟೆಕ್ ನಿಂದ ತನ್ನ ಗ್ರಾಹಕರಿಗೆ 3ಡಿ ಅನುಭವ ನೀಡಲು ಡಸಾಲ್ಟ್ ಸಿಸ್ಟಮ್ಸ್‌ನೊಂದಿಗೆ ಒಡಂಬಡಿಕೆ

# ವಿದ್ಯುತ್ ವಾಹನ ಕ್ಷೇತ್ರದಲ್ಲಿ ಡಿಜಿಟಲ್ ಉತ್ಪನ್ನ ಅಭಿವೃದ್ಧಿಯ ಹೊಸ ಆಯಾಮ

• ಉದಯವಾಹಿನಿ, ಬೆಂಗಳೂರು

ದೆಹಲಿ/ ಹೈದರಾಬಾದ್/ ಬೆಂಗಳೂರು, 11 ಮೇ, 2026 : ಭಾರತದ ಪ್ರಮುಖ ವಿದ್ಯುತ್ ಬಸ್ ತಯಾರಿಕಾ ಸಂಸ್ಥೆಯಾದ ಓಲೆಟ್ರಾ, ಗ್ರೀನ್ ಟೆಕ್ ಲಿಮಿಟೆಡ್ ಹಾಗೂ ಡಸಾಲ್ಟ್ ಸಿಸ್ಟಮ್ಸ್ ಸಂಸ್ಥೆ ಮಹತ್ವದ ಸಹಭಾಗಿತ್ವ ಘೋಷಿಸಿವೆ. ಓಲೆಕ್ಟ್ರಾ ಸಂಸ್ಥೆ ಡಸಾಲ್ಟ್ ಸಿಸ್ಟಮ್ಸ್ ಸಂಸ್ಥೆಯ 3-ಡಿ ಅನುಭವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಿದ್ದು, ಇದು ವಿದ್ಯುತ್ ವಾಹನ ಕ್ಷೇತ್ರದಲ್ಲಿ ಜಾಗತಿಕ ಮಟ್ಟದ ಡಿಜಿಟಲ್ ಸಮಗ್ರ ಉತ್ಪನ್ನ ಅಭಿವೃದ್ಧಿ ವ್ಯವಸ್ಥೆ ನಿರ್ಮಾಣದತ್ತ ಮಹತ್ವದ ಹೆಜ್ಜೆಯಾಗಿದೆ.

ಈ ನಿರ್ಧಾರವು ಸುಧಾರಿತ ಡಿಜಿಟಲ್ ತಂತ್ರಜ್ಞಾನಗಳ ನೆರವಿನಿಂದ ವಿದ್ಯುತ್ ವಾಹನ ಕ್ಷೇತ್ರದಲ್ಲಿ ನವೀನತೆಯನ್ನು ವೇಗಗೊಳಿಸುವ ಉಭಯ ಸಂಸ್ಥೆಗಳ ಸಾಮೂಹಿಕ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ವಿದ್ಯುತ್ ಸಂಚಾರ ಕ್ಷೇತ್ರದಲ್ಲಿ ಓಲೆಕ್ಟ್ರಾ ಹೊಂದಿರುವ ನಾಯಕತ್ವ ಹಾಗೂ ವರ್ಚುವಲ್ ಜೋಡಿ ತಂತ್ರಜ್ಞಾನ ಮತ್ತು ವೇದಿಕೆ ಆಧಾರಿತ ವಿನ್ಯಾಸ ಅಭಿಯಾಂತ್ರಿಕೆಯಲ್ಲಿ ಸಸಾಲ್ಟ್ ಸಿಸ್ಟಮ್ಸ್ ಹೊಂದಿರುವ ಪರಿಣತಿಯನ್ನು ಒಟ್ಟುಗೂಡಿಸುವ ಮೂಲಕ, ವಿದ್ಯುತ್ ವಾಹನಗಳ ವಿನ್ಯಾಸ, ಅಭಿವೃದ್ಧಿ ಮತ್ತು ವ್ಯಾಪಕ ಉತ್ಪಾದನೆಯ ವಿಧಾನವನ್ನು ಮರುಪರಿಭಾಷಿಸುವ ಗುರಿ ಹೊಂದಲಾಗಿದೆ.

3-ಡಿ ಅನುಭವ ವೇದಿಕೆ ಮಾನವ ಸಂಪನ್ಮೂಲ, ದತ್ತಾಂಶ, ವಿನ್ಯಾಸ, ಅನುಕರಣೆ ಹಾಗೂ ಉತ್ಪಾದನಾ ವ್ಯವಸ್ಥೆಗಳನ್ನು ಏಕೀಕೃತ ಸಹಯೋಗಿ ವಾತಾವರಣದಲ್ಲಿ ಜೋಡಿಸುತ್ತದೆ. ಇದರಿಂದ ಸಂಪೂರ್ಣ ಉತ್ಪನ್ನದ ನೈಜ ಸಮಯದ ಸಮಗ್ರ ನೋಟ ಲಭ್ಯವಾಗುತ್ತದೆ.

ಈ ವೇದಿಕೆಯನ್ನು ಅಳವಡಿಸಿಕೊಳ್ಳುವ ಮೂಲಕ ಓಲೆಕ್ಟ್ರಾ ಸಂಸ್ಥೆ ಜಾಗತಿಕ ತಯಾರಿಕಾ ಸಂಸ್ಥೆಗಳ ಮಾನದಂಡಗಳಿಗೆ ಹೊಂದುವ ಮಾದರಿ ಆಧಾರಿತ ಉತ್ಪನ್ನ ಅಭಿವೃದ್ಧಿ ವಿಧಾನಕ್ಕೆ ಉನ್ನತೀಕರಣಗೊಳ್ಳಲಿದೆ.

''ಭವಿಷ್ಯದ ಸಾರಿಗೆ ಕ್ಷೇತ್ರ ವಿದ್ಯುಧೀಕರಣ ಮತ್ತು ಡಿಜಿಟಲ್ ಉತ್ಪನ್ನಗಳ ಅಳವಡಿಕೆಯಿಂದ ಮುನ್ನಡೆಯಲಿದೆ ಎಂಬ ನಂಬಿಕೆ ನಮ್ಮದು. ಎಲ್ಲರಿಗೂ ಲಭ್ಯವಾಗುವ ನವೀನತೆ ಮತ್ತು ಪ್ರಾಯೋಗಿಕ ಭವಿಷ್ಯದ ದೃಷ್ಟಿಕೋನದೊಂದಿಗೆ ಸಂಚಾರ ವ್ಯವಸ್ಥೆಯನ್ನು ಪರಿವರ್ತಿಸಲು ನಾವು ಬದ್ಧರಾಗಿದ್ದೇವೆ. ಇದರ ಭಾಗವಾಗಿ ಹೊಸ ಬಸ್ ಮತ್ತು ಸರಕು ಸಾಗಾಣೆ ವಾಹನಗಳ ಅಭಿವೃದ್ಧಿಗೆ ಮಹತ್ವದ ಹೂಡಿಕೆ ಮಾಡುತ್ತಿದ್ದೇವೆ. ದಸಾಲ್ಟ್ ಸಂಸ್ಥೆ ಜೊತೆಗಿನ ನಮ್ಮ ಸಹಭಾಗಿತ್ವ ಮತ್ತು 3-ಡಿ ಅನುಭವದ ವ್ಯವಸ್ಥೆ ಅಳವಡಿಕೆ ಜಾಗತಿಕ ಮಟ್ಟಕ್ಕೆ ತಕ್ಕಂತೆ ಸಾರಿಗೆ ವಾಹನವನ್ನು ರೂಪಿಸಲು ಮಹತ್ವದ ಪಾತ್ರ ವಹಿಸಲಿದೆ. ಇದು ನಮಗೆ ವೇಗವಾಗಿ ಕಾರ್ಯನಿರ್ವಹಿಸಲು, ಹೆಚ್ಚು ಸಮರ್ಥವಾಗಿ ವಿನ್ಯಾಸ ರೂಪಿಸಲು ಹಾಗೂ ವಿಶ್ವಮಟ್ಟದ ನಿಖರತೆಯೊಂದಿಗೆ ಉತ್ಪನ್ನಗಳನ್ನು ಒದಗಿಸಲು ನೆರವಾಗಲಿದೆ. ಭಾರತ ವಿದ್ಯುತ್ ವಾಹನ ಪರಿವರ್ತನೆಯನ್ನು ವೇಗಗೊಳಿಸುತ್ತಿರುವ ಈ ಸಂದರ್ಭದಲ್ಲಿ, ಅನುಷ್ಠಾನ ಮತ್ತು ಅಭಿಯಾಂತ್ರಿಕ ಶ್ರೇಷ್ಠತೆಯಲ್ಲಿ ಮುಂಚೂಣಿಯಲ್ಲಿರುವತ್ತ ನಾವು ಕೇಂದ್ರೀಕರಿಸಿದ್ದೇವೆ.'' ಎಂದು ಓಲೆಕ್ಟ್ರಾ ಗ್ರೀನ್ ಟೆಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಬಾಬು ಒಪ್ಪಂದದ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ.

''ಸಂಚಾರದ ಮುಂದಿನ ಯುಗ ಮೊದಲು ವರ್ಚುವಲ್ ಜಗತ್ತಿನಲ್ಲಿ ರೂಪುಗೊಂಡು ಬಳಿಕ ರಸ್ತೆಗಿಳಿಯಲಿದೆ ಎಂಬ ನಂಬಿಕೆ ನಮ್ಮದು. ಓಲೆಕ್ಟ್ರಾ ಜೊತೆಗಿನ ನಮ್ಮ ಸಹಭಾಗಿತ್ವವು ಏಕೀಕೃತ, ವೇದಿಕೆ ಆಧಾರಿತ ನವೀನತೆಯತ್ತ ಸಾಗುತ್ತಿರುವ ದೂರದೃಷ್ಟಿಯ ಹೆಜ್ಜೆಯಾಗಿದೆ. ಇದು ವೇಗವಾದ, ಬುದ್ಧಿವಂತ ಹಾಗೂ ಹೆಚ್ಚು ಸ್ಥಿರವಾದ ವಿದ್ಯುತ್ ವಾಹನ ಅಭಿವೃದ್ಧಿಗೆ ನೆರವಾಗಲಿದೆ. ವರ್ಚುವಲ್ ಜೋಡಿ ಅನುಭವಗಳು ಮತ್ತು ಮುಂದಿನ ತಲೆಮಾರಿನ ಅಭಿಯಾಂತ್ರಿಕ ಕ್ರಮಗಳ ಮೂಲಕ ಭಾರತದ ಸಂಚಾರ ಪರಿಸರ ವ್ಯವಸ್ಥೆಯ ಪರಿವರ್ತನೆಯನ್ನು ಬಲಪಡಿಸುವ ಗುರಿ ನಮ್ಮದು.'' ಎಂದು ಡಸಾಲ್ಟ್ ಸಂಸ್ಥೆಯ ಭಾರತ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ದೀಪಕ್ ಎನ್.ಜಿ. ಹೇಳಿದರು.

ಜಾಗತಿಕವಾಗಿ ಪ್ರಮುಖ ವಾಹನ ಮತ್ತು ಸಂಚಾರ ಸಂಸ್ಥೆಗಳು ವೇದಿಕೆ ಆಧಾರಿತ ಅಭಿಯಾಂತ್ರಿಕ ವಾತಾವರಣಗಳನ್ನು ಅಳವಡಿಸಿಕೊಂಡು ಅಭಿವೃದ್ಧಿ ಪ್ರಕ್ರಿಯೆಯನ್ನು ಪ್ರಮಾಣೀಕರಿಸುತ್ತಿವೆ, ಸಂಕೀರ್ಣತೆಯನ್ನು ಕಡಿಮೆ ಮಾಡುತ್ತಿವೆ ಹಾಗೂ ಮುಂದಿನ ತಲೆಮಾರಿನ ವಾಹನ ವಿನ್ಯಾಸಗಳಿಗೆ ಅವಕಾಶ ಕಲ್ಪಿಸುತ್ತಿವೆ. ಈ ಸಹಭಾಗಿತ್ವವು ಭಾರತದಲ್ಲಿ ವಿದ್ಯುತ್ ಸಾರಿಗೆ ಕ್ಷೇತ್ರದ ಪರಿವರ್ತನೆಯಲ್ಲಿ ಓಲೆಕ್ಟ್ರಾ ಮತ್ತು ಡಸಾಲ್ಟ್ ಸಿಸ್ಸಮ್ಸ್ ಸಂಸ್ಥೆಗಳನ್ನು ಮುಂಚೂಣಿಯಲ್ಲಿರಿಸಿ, ನವೀನತೆ, ವಿಸ್ತರಣೆ ಮತ್ತು ಸ್ಥಿರ ಬೆಳವಣಿಗೆಗೆ ಉತ್ತೇಜನ ನೀಡಲಿದೆ.




### 3-ಡಿ ಡಿಜಿಟಲ್ ವ್ಯವಸ್ಥೆ ಅಳವಡಿಕೆಯ ಲಾಭಗಳು

- ಸಂಪೂರ್ಣ ಡಿಜಿಟಲ್ ಹಾಗೂ ಮಾದರಿ ಆಧಾರಿತ ಉತ್ಪನ್ನ ಅಭಿವೃದ್ಧಿ ವಿಧಾನ
- ವಿನ್ಯಾಸ, ಉತ್ಪಾದನೆ ಮತ್ತು ಸಹಭಾಗಿ ಸಂಸ್ಥೆಗಳ ನಡುವೆ ನಿರ್ವಿಘ್ನ ಸಹಯೋಗ
- ಭೌತಿಕ ಮಾದರಿ ತಯಾರಿಕೆಗೆ ಮುನ್ನವೇ ವರ್ಚುವಲ್ ಅನುಕರಣೆ ಮತ್ತು ಪರಿಶೀಲನೆ
- ವೇಗವಾದ ನವೀನತಾ ಸಮಯ ಹಾಗೂ ಕಡಿತಗೊಂಡ ಮಾರುಕಟ್ಟೆ ಪ್ರವೇಶ ಅವಧಿ
- ಭವಿಷ್ಯದ ಸಂಚಾರ ವೇದಿಕೆಗಳಿಗೆ ಹೆಚ್ಚಿದ ವಿಸ್ತರಣಾ ಸಾಮರ್ಥ್ಯ.

# ಮನೆಯೊಳಗೆ ಇಲಿಗಳ ಕಾಟ

ಪ್ರಸ್ತುತ ಇಂದಿನ ಲೇಖನದಲ್ಲಿ ಮನೆಯಲ್ಲಿ ಇಲಿಗಳ ಹಾವಳಿ ಹೆಚ್ಚಾಗಲು ಕಾರಣಗಳು ಹಾಗೂ ದೈನಂದಿನ ಜೀವನದಲ್ಲಿ ನಾವೇ ಅರಿವಿಲ್ಲದೆ ಮಾಡುವ ಕೆಲವೊಂದು ತಪ್ಪುಗಳ ಮಾಹಿತಿಯನ್ನು ನೋಡುತ್ತಾ ಹೋಗೋಣ

**ಊಟದ ನಂತರ ಪಾತ್ರೆಗಳನ್ನು ಸಿಂಕ್‌ನಲ್ಲಿ ಬಿಡುವುದು**



ಊಟದ ನಂತರ ತಟ್ಟೆ ಅಡುಗೆ ಮಾಡಿದ ಪಾತ್ರೆಗಳನ್ನು ರಾತ್ರಿಯಿಡೀ ಸಿಂಕ್‌ನಲ್ಲಿ ಬಿಡುವುದು ಇಲಿಗಳು ಮತ್ತು ಜಿರಳೆಗಳನ್ನು ಮನೆಗೆ ಆಕರ್ಷಿಸಲು ಪ್ರಮುಖ ಕಾರಣವಾಗಿದೆ. ಪ್ರಮುಖವಾಗಿ ಆಹಾರದ ಉಳಿಕೆಗಳು ಮತ್ತು ಪಾತ್ರೆಗಳಲ್ಲಿ ಇರುವ ಎಂಜಲು ಆಹಾರದ ವಾಸನೆ ಇಲಿಗಳನ್ನು ಆಕರ್ಷಿಸುತ್ತದೆ.

ಅದರಲ್ಲೂ ಇಲಿಗಳ ಎಂಜಲು ಪಾತ್ರೆಗಳಿಗೆ ಅಂಟಿಬಿಟ್ಟರೆ ಇಂತಹ ವೈರಸ್ ಹಾಗೂ ಇತರ ರೋಗಾಣುಗಳು ಹರಡಿ ಆರೋಗ್ಯ ಸಮಸ್ಯೆಗಳು ಉಂಟಾಗಬಹುದು. ಅದಕ್ಕಾಗಿಯೇ ಹಿರಿಯರು ಮಲಗುವ ಮುನ್ನ ಪಾತ್ರೆಗಳನ್ನು ತೊಳೆಯಬೇಕು ಎಂದು ಹೇಳುವುದು.



**ಕಸದ ಬುಟ್ಟಿಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಿ**

ನಮ್ಮಲ್ಲಿ ಬಹುತೇಕ ಜನರು ಸಾಮಾನ್ಯವಾಗಿ ತಮ್ಮ ಕಸದ ಬುಟ್ಟಿಗಳನ್ನು ದಿನ ಗಟ್ಟಲೆ ತೆರೆದಿಟ್ಟು ಸ್ವಚ್ಛಗೊಳಿಸದೆ ಇಡುತ್ತಾರೆ. ಇದು ಇಲಿಗಳು ಮನೆಗಳಿಗೆ ಪ್ರವೇಶಿಸಲು ಪ್ರೋತ್ಸಾಹಿಸುತ್ತದೆ. ಒದ್ದೆಯಾದ ಕಸ ಮತ್ತು ಆಹಾರದ ತುಣುಕುಗಳು ಅವು ಒಳಗೆ ಇರಲು ಒಂದು ಕಾರಣವನ್ನು ಒದಗಿಸುತ್ತವೆ.

ಆದ್ದರಿಂದ ಯಾವಾಗಲೂ ಮುಚ್ಚಳವಿರುವ ಕಸದ ಬುಟ್ಟಿಯನ್ನು ಬಳಸಿ ಮತ್ತು ಪ್ರತಿದಿನ ಕಸವನ್ನು ಹೊರಗೆ ಎಸೆಯಿರಿ.

**ಸಣ್ಣ ರಂಧ್ರಗಳು ಇದ್ದರೂ ನುಸುಳಿ ಬಿಡುತ್ತವೆ!**

ನಿಮಗೆ ಗೊತ್ತಿರಲಿ ಹಲ್ಲಿಗಳಂತೆ ಇಲಿಗಳು ಕೂಡ ಬಹಳ ಮನೆಯ ಗೋಡೆಗಳಲ್ಲಿ ಸಣ್ಣ ರಂಧ್ರಗಳು ಇದ್ದರೆ ಅಥವಾ ಗೋಡೆಗಳಲ್ಲಿನ ಬಿರುಕುಗಳು, ಬಾಗಿಲುಗಳ ಕೆಳಗಿನ ಜಾಗ ಹಾಗೂ ಬೇಸಿನ್ ಹತ್ತಿರದ ಪೈಪ್‌ಗಳ ಮೂಲಕ ಮನೆಗೆ ಸುಲಭವಾಗಿ ಪ್ರವೇಶಿಸಬಲ್ಲವು! ಹೀಗಾಗಿ ಗೋಡೆಗಳು ಮತ್ತು ಬಾಗಿಲುಗಳಲ್ಲಿನ ಬಿರುಕುಗಳು ಅವುಗಳಿಗೆ ಪ್ರವೇಶ ದ್ವಾರಗಳಾಗಿ ಕಾರ್ಯನಿರ್ವಹಿಸುತ್ತವೆ ಎಂದೂ ತಪ್ಪಾಗಲಾರದು. ಆದ್ದರಿಂದ, ಈ ತೆರೆಯುವಿಕೆಗಳನ್ನು ನಿಯಮಿತವಾಗಿ ಮುಚ್ಚುವುದು ಮುಖ್ಯ.

**ಹಳೆಯ ವಸ್ತುಗಳ ರಾಶಿ:** ನಮ್ಮಲ್ಲಿ ಹೆಚ್ಚಿನವರಿಗೆ ಅಭ್ಯಾಸ ಇರುತ್ತದೆ, ಕೆಲವೊಂದು ಉಪಯೋಗಕ್ಕೆ ಬರದೇ ಇರುವ ಹೆಚ್ಚುವರಿ ವಸ್ತುಗಳನ್ನು ಮನೆಯಲ್ಲಿಯೇ ರಾಶಿ ಹಾಕುವುದು. ಉದಾಹ ರಣೆಗೆ, ಹಳೆಯ ಪತ್ರಿಕೆಗಳು, ಬಟ್ಟೆಗಳು, ಕಾರ್ಡ್‌ಬೋರ್ಡ್ ಮತ್ತು ಇತರ ಅನುಪ ಯುಕ್ತ ವಸ್ತುಗಳನ್ನು ಸ್ಟೋರ್ ರೂಂನಲ್ಲಿ ಸಂಗ್ರಹಿಸುವುದು ಇಲಿಗಳಿಗೆ ಸುರಕ್ಷಿತ ಅಡಗುತಾಣವನ್ನು ಒದಗಿಸುತ್ತದೆ. ದೀರ್ಘಕಾಲದವರೆಗೆ ಬಳಸದೆ ಬಿಟ್ಟ ವಸ್ತುಗಳು ಇಲಿಗಳ ಸಂತಾನೋತ್ಪತ್ತಿಯ ಸ್ಥಳವಾಗಬಹುದು. ಹೀಗಾಗಿ ಮನೆಯಲ್ಲಿ ಹಳೆಯ ಪತ್ರಿಕೆಗಳು, ಕಾರ್ಡ್ ಬಾಕ್ಸ್ ಮತ್ತು ಬಟ್ಟೆಗಳ ರಾಶಿಯನ್ನು ದೀರ್ಘಕಾಲದವರೆಗೆ ಸಂಗ್ರಹಿಸಿಡಬೇಡಿ. ಆದಷ್ಟು ಮನೆಯಲ್ಲಿ ಕಸದ ರಾಶಿಯಾಗದಂತೆ ಎಚ್ಚರಿಕೆ ವಹಿಸಿ.



ನಾ ಕಂಡಂತೆ

ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ವಿಭೂತಿ ಧರಿಸಿದವರ ಮಹತ್ವ!

> **ವಿಭೂತಿ ಧರಿಸುವುದರಿಂದ ಭವ ರೋಗ ನಿವಾರಣೆಯಾಗುವುದಲ್ಲದೆ ಕಾಯ ಶಿವಮಯವಾಗುವುದು . ವಿಭೂತಿ ಧರಿಸಿದವರ ಮೊಗವು ಸಾವಿರಾರು ಜನರ ಮಧ್ಯೆ ನಿಂತರು ಎದ್ದು ಕಾಣುತ್ತದೆ . ವಿಭೂತಿ ಹಚ್ಚಿಕೊಂಡವರ ಮುಖದಲ್ಲಿ ತೇಜಸ್ಸು ಮತ್ತು ರಾಜ ಕಳೆ ತುಂಬಿರುತ್ತದೆ . ಲಿಂಗ ವಿಭೂತಿ ರುದ್ರಾಕ್ಷಿ ನಮ್ಮ ನಮ್ಮ ಬದುಕಿನ ಸಂಪತ್ತು . ಇದಕ್ಕೆ ಸರಿಸಮಾನವಾದ ಯಾವ ಐಶ್ವರ್ಯ ಇಲ್ಲ . ಹುಟ್ಟಿನಿಂದ ಬಂದು ಸಾವಿನ ಮನೆ ಅಂದ್ರೆ,ಮಣ್ಣಲ್ಲಿ ಮಣ್ಣಾಗುವ ತನಕ ನಮ್ಮ ಜೊತೆಗೆ ಬರುವ. ಸಿರಿಸಂಪತ್ತು . ನಮ್ಮ ಹಿಂದೂ ಧರ್ಮದ ಸಂಪ್ರದಾಯಗಳು ಮನೆಗೆ ಅಡಿಪಾಯವಾಗಿರಬೇಕು . ಏಕೆಂದರೆ ನಮ್ಮ ಬದುಕು ಕಟ್ಟಿಕೊಡುವುದು .ನಮ್ಮ ಆಚಾರ ವಿಚಾರ ಸಂಸ್ಕಾರ ಸಂಸ್ಕೃತಿಯಿಂದ .ನಮ್ಮ ಪೂರ್ವಜರು ಎಲ್ಲಾ ಸಂಪ್ರದಾಯಗಳು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು.**

ನಾವು ಚಿಕ್ಕವರಿದ್ದಾಗ ಬೆಳಿಗ್ಗೆ ಎದ್ದ ತಕ್ಷಣ ಹೊರಗೆ ಬಂದು ನೋಡಿದರೆ ಪ್ರತಿಯೊಬ್ಬರ ಹಣೆಯ ಮೇಲೆ ವಿಭೂತಿ ಎದ್ದು ಕಾಣುತ್ತಿತ್ತು . ಮನೆಯ ಆಚಾರ ಹೇಗಿರುತ್ತಿತ್ತು.ಅಂದ್ರೆ ಬೆಳಗೆ ಬೇಗ ಏಳಬೇಕು ಸ್ನಾನ ಮಾಡಿ ವಿಭೂತಿ ಹಚ್ಚಿಕೊಳ್ಳಬೇಕು.

ಪ್ರತಿಯೊಂದು ಮನೆ ಮನೆಗಳಲ್ಲಿ ಎಲ್ಲರ ಹಣೆ ಮೇಲೆ ವಿಭೂತಿ ನೋಡಿದಾಗ ಎಂತಹವರಿಗೂ ಭಕ್ತಿ ಮೂಡುತ್ತಿತ್ತು. ಒಬ್ಬರ ಮುಖ ಮತ್ತೊಬ್ಬರು ನೋಡುವುದರಿಂದ ಮುಂದೆ ಬರುವ ಕಂಟಕಗಳು ದೂರ ಆಗುತ್ತಿದ್ದವು . ಯಾವ ದುಷ್ಟ ಶಕ್ತಿಯೂ ಸನಿಯ ಸುಳಿಯುತ್ತಿರಲಿಲ್ಲ . ಮನೆಯಿಂದ ಹೊರಗೆ ಯಾವ ಕೆಲಸಕ್ಕೆ ಹೋಗಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಕೊಂಡು ಹಿಂದುರುಗಿ ಬರುತ್ತಿದ್ದರು.

ಲಿಂಗ ಪೂಜೆ ಮಾಡಿಕೊಳ್ಳುವಾಗ ಮೈತುಂಬಾ ವಿಭೂತಿ ಹಚ್ಚಿ ಕೊಳ್ಳುವುದರಿಂದ ಯಾವ ರೋಗಗಳು ಬರುತ್ತಿರಲಿಲ್ಲ .ಕಾಯ ಸದೃಢವಾಗಿ ಇರುತ್ತಿತ್ತು . ರೋಗ ನಿರೋಧಕ ಶಕ್ತಿ ವರ್ಧಕ ಚಿಕಿತ್ಸೆ ಅದಾಗಿತ್ತು. ಯಾವ ವೈರಸ್ ಮೈಯಿಗೆ ಸೊಂಕುತ್ತಿರಲಿಲ್ಲ . ಅಷ್ಟೇಕೆ ಇಡೀ ದಿನ ಚೈತನ್ಯ ತುಂಬಿ ಮನಸ್ಸು ಉಲ್ಲಾಸದಿಂದ ಕೂಡಿ ಅನ್ಯ ವಿಚಾರಗಳಿಗೆ ಆಸ್ಪದ ಇರುತ್ತಿರಲಿಲ್ಲ.

**ಹೀಗಾಗಿ ನಮ್ಮ ಸಂಪ್ರದಾಯದಲ್ಲಿ ವಿಶಿಷ್ಟ ಶಕ್ತಿ ಇದೆ**

ಉದಾಹರಣೆಗೆ ಒಂದು ಮಾತು. ಒಬ್ಬ ಹುಡುಗ ಎಷ್ಟೇ ಪ್ರಯತ್ನ ಪಟ್ಟರೂ ಜೀವನದಲ್ಲಿ ಮುಂದೆ ಬರಲು ಸಾಧ್ಯವಾಗಲಿಲ್ಲ. ಓದಿ ವಿದ್ಯಾವಂತನಾಗಿ ಬಂದರು ನೌಕರಿ ಇಲ್ಲ. ಕಷ್ಟಪಟ್ಟು ಏನಾದರೂ ಮಾಡಿದರು ಎಲ್ಲವೂ ಎದುರಾಗುತ್ತಿತ್ತು . ಹೀಗಾಗಿ ಒಂದು ದಿನ ತನ್ನ ಗೆಳೆಯನ ಹತ್ತಿರ ತನ್ನ ದುಃಖ ತೊಡಗಿಕೊಂಡ . ಇಬ್ಬರೂ ಸೇರಿ ಯಾರಿಗಾದರೂ ಕೇಳಿ ನೋಡೋಣ ಎಂದು ಬರುತ್ತಿರುವಾಗ ಒಬ್ಬಳು ಅಜ್ಜಿ ಎದುರಿಗೆ ಬಂದಳು. ಇವರ ಒಣಗಿದ ಮುಖ ನೋಡಿ ಯಾಕ್ರಪ್ಪ ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಕೇಳಿದಳು

ಅಜ್ಜಿ ನಮ್ಮ ಕಥೆ ಏನು ಕೇಳುತ್ತಿ ಓದಿ ಬಂದರು ನೌಕರಿ ಇಲ್ಲ ವ್ಯವಸಾಯ ನಮಗೆ ತಿಳಿಯದು ವ್ಯಾಪಾರ ಮಾಡಿದರೆ ಎಲ್ಲವೂ ಎದುರು ಆಗುವುದು ಅದಕ್ಕೆ ಏನು ಮಾಡಬೇಕು ಎಂಬುದನ್ನು ತಿಳಿಯದಾಗಿದೆ. ಅಜ್ಜಿ ಹೇಳಿದಳು ಮಕ್ಕಳೆ ಮುಂಜಾನೆ ಎದ್ದು ವಿಭೂತಿ ಹಚ್ಚಿಕೊಂಡವರ ಮುಖ ನೋಡ್ರಿ ಎಲ್ಲವೂ ಒಳ್ಳೆಯದಾಗುತ್ತದೆ ಎಂದು ಹೇಳಿದಳು .



ಆಯ್ತು ಅಜ್ಜಿ ಇಷ್ಟೇನಾ ಪರಿಹಾರ ನೋಡೋಣ ಎಂದು ಇಬ್ಬರೂ ತಾವು ವಿಭೂತಿ ಹಚ್ಚಿಕೊಂಡು ವಿಭೂತಿ ಹಚ್ಚಿಕೊಂಡವರ ಮುಖ ನೋಡಿ ಹೋಗುತ್ತಿದ್ದರು . ಎರಡು ದಿನಗಳಲ್ಲಿ ನೌಕರಿಗೆ ಕರೆ ಬಂತು. ಒಂದರ ಮೇಲೊಂದು ಜೀವನದ ಮೌಲ್ಯ ಹೆಚ್ಚುತ್ತಾ ಹೋಯಿತು .

ಅವರು ದಿನ ನಿತ್ಯವೂ ತಾವು ಮತ್ತು ಮನೆಯವರೆಲ್ಲರೂ ವಿಭೂತಿಯನ್ನು ಭಕ್ತಿಯಿಂದ ಹಚ್ಚಿಕೊಳ್ಳುವುದರ ಜೊತೆಗೆ ಪ್ರತಿಯೊಬ್ಬರಿಗೂ ವಿಭೂತಿ ಮಹಿಮೆ ತಿಳಿಸುತ್ತಾ ನೆಮ್ಮದಿಯ ಜೀವನ ನಡೆಸುತ್ತಿದ್ದರು . ಅದಕ್ಕಾಗಿ ನಮ್ಮ ಸನಾತನ ಧರ್ಮದ ಪ್ರತಿಯೊಂದು ಆಚಾರ ವಿಚಾರಗಳು ನಡೆ ನುಡಿ ಪಾಲಿಸಿದರೆ ಜೀವನ ಸಾರ್ಥಕವಾಗುತ್ತದೆ . ವಿಭೂತಿ ರುದ್ರಾಕ್ಷಿ ಮಂತ್ರ ಪಾದೋದಕ ಪ್ರಸಾದ್ ಎಲ್ಲದರಲ್ಲೂ ಅದ್ಭುತವಾದ ಶಕ್ತಿ ಅಡಗಿದೆ.



# ರಾಮಾಯಣ

ಕೊಳಕುಬಟ್ಟೆಯ ನಡುವೆ ಹೊಳೆಯುವ ಮಣಿಯ ಹಾಗಿದ್ದ ಸೀತೆಯನ್ನು ಅಶೋಕವನದಲ್ಲಿ ಕಂಡುದು

## ಸುಂದರಕಾಂಡ

• ಹಿಂದಿನ ಸಂಚಿಕೆಯಿಂದ

ನೀರಿನಿಂದ ತುಂಬಿದ ನಾನಾ ಬಗೆಯ ಕೊಳ ಸರೋವರಗಳು, ಅವುಗಳಲ್ಲಿನ ಚಿನ್ನದ ಲಲಿತ ಪಾವಟಿಗೆಗಳು, ನೀರಿನಲ್ಲಿ ಅರಳಿದ ತಾವರೆ ನೈದಿಲೆಗಳಿಂದ ಕೂಡಿ ಶೋಭಿಸಿದರೆ, ಸುತ್ತಲಿನ ಹವಳದಂತಹ ಮರರಾಶಿಯ ನಡುವಣ ಮರಗಳು ಕಲ್ಪವೃಕ್ಷಗಳಂತೆ ಬೇಡಿದುದನ್ನು ನೀಡುವ ಸಿದ್ಧರಸರೋ ಎಂಬಂತೆ ತೋರುತ್ತಿದ್ದುವು. ಹಂಸಸಾರಸಚಕ್ರವಾಕಗಳ ಉಲ್ಲಾಸ, ಹಂಸಗಣದ ನಾಟ್ಯ, ದುಂಬಿಗಳ ಗಾಯನದಿಂದ ಕೂಡಿದ ಹೂದೋಟಗಳು ಮನೋಹರ ಸಂಸಾರದಂತಿದ್ದು, ಉದ್ಯಾನವು ಚಕ್ರವಾಕ ಜೋಡಿಗಳು ಸಂತಸದಿಂದ ಕೂಡುವ ತಾಣದಂತೆ ರಂಜಿಸಿತು.

ಹಾಗೆ ಮುಂದೆ ಸಾಗಿ ಮರಗಿಡಗಳ ಸೊಬಗನ್ನು ಕಣ್ತುಂಬಿಕೊಳ್ಳುತ್ತ ಬರುತ್ತಿರಲು ಪೊದೆಗಳಂತಹ ಬಳ್ಳಿಮಾಡಗಳ ನಡುವೆ ಆಟದ ದಿಬ್ಬಗಳು ಕಂಗೊಳಿಸಿದವು. ಅವುಗಳ ಕೃತಕ ಜಲಪಾತಗಳು ಮುತ್ತಿನ ಮಣಿಗಳಂತೆ ತುಂತುರ್ವನಿಗಳನ್ನು ಎರಚುತ್ತ ಸಳಸಳ ನಾದದಿಂದ ಕೂಡಿ ಕೈಲಾಸದ ಬೆಳ್ಳಿತನವನ್ನು ಹೊಂದಿ ರಾಜಿಸುತ್ತಿದ್ದವು. ಅಲ್ಲೆಲ್ಲ ಜನಕಜೆಗಾಗಿ ಹುಡುಕಾಡುತ್ತ ಮರುತ್ಸಂಭೂತನು ಮುಂದುವರಿದ. ಅಸಂಖ್ಯವಾದ ಕೊಳಗಳು, ಕ್ರೀಡಾಶೈಲಗಳು, ಸೌಧಗಳು, ಮನ್ಮಥರತಿಯರ ಆವಾಸದಂತಹ ಹೂಮಂದಿರಗಳು, ಗಿಳಿಕೋಗಿಲೆ ನವಿಲುಗಳ ಆಮೋದಕರ ಆಟಗಳು – ಇವುಗಳನ್ನು ನೋಡಿದರೆ ಇಂದಲೋಕದಂತಹ ಇದನ್ನೆಲ್ಲ ಸಂಪಾದಿಸಲು ದಶಕಂಠನು ಎಂತಹ ತಪಸ್ಸನೆಗಿದರೋ ಅನ್ನಿಸುವಂತಿತ್ತು. ಹಾಗೆ ಅಚ್ಚರಿಯಿಂದ ಮುಂದೆ ಬರಲು ಸಹಸ್ರಸೂರ್ಯಪ್ರಭೆಯ ತೌರೆನಿಸಿದ ಒಂದು ತಾಣವು ಕಾಣಿಸಿತು. ಕುತೂಹಲದಿಂದ ಅದರ ಬಳಿ ಬರಲು ಅದು ಒಂದು ಸ್ವರ್ಣಮಯ ವನವಾಗಿತ್ತು ಆಗಸದಲ್ಲಿ ಹೊಳೆಯುವ ಮಿಂಚುಗಳು ವಿಶ್ವರೂಪವನ್ನು ಧರಿಸಿ ಈ ನೆಲದಲ್ಲಿ ಹೊಳೆಯುವುವೋ ಎನ್ನಿಸಿ ಮರುತಸುತ ಬೆರಗುಗೊಂಡ. ಸೂರ್ಯತೇಜಸ್ಸಿನಿಂದ ಮೇರುಗಿರಿಯು ಹೊಳೆಯುವಂತೆ, ಮಾರುತಿಯು ಅಲ್ಲಿನ ಕಾಂತಿಯಲ್ಲಿ ಸೇರಿ ಕಾಂಚನರೂಪನ್ನೇ ಪಡೆದ! ಕಿಂಕೀಕಿಯ ನಾದ, ಮಂದಮಾರುತದ ಸುಳಿವು, ಕಾಕಲೀರವದ ಮಾಧುರ್ಯಗಳಿಂದ ಕೂಡಿದ ಆ ಜಾಗವನ್ನು ಕಂಡು ಅವನು ಅರೆನಿಮಿಷ ಸಂಭೀಭೂತನಾದ.

ವಿವಿಧ ಬಣ್ಣಗಳ ಹರಿಚಂದನ ಲತೆಗಳ ಗಾಢ ಪರಿಮಳದಿಂದಲೂ, ನವರಸಭರಿತವೆನಿಸುವ ಕೊಳಗಳಿಂದಲೂ, ಹೊಸತಾದ ಗಾಯನ ನರ್ತನವಿಲಾಸದಿಂದಲೂ, ಮೃಗಪಕ್ಷಿಗಳಿಗೆ ಸಂತಸ ನೀಡುವ ಅಲಂಕಾರದಿಂದಲೂ ಕೂಡಿದ ಕಾಂಚನವೇದಿಕೆಗಳು ಅಲ್ಲಿ ಕಂಗೊಳಿಸಿದವು. ಅತ್ಯಂತ ಆಕರ್ಷಕವಾದ ಆ ಜಾಗವನ್ನು ನೋಡಿ ಮಾರುತಿಯು ಮುಂದೆ ಹೆಜ್ಜೆಯಿಡಲು, ಅಸಂಖ್ಯವಾದ ನೀಲವರ್ಣದ ಅಶೋಕಮರಗಳ ದೊಡ್ಡದೊಂದು ತೋಪು – ಮನ್ಮಥನ ಬಾಣಗಳ ಅಂಗಡಿಯೋ, ಪ್ರದ್ಯುಮ್ನನ ಆಟದ ಮನೆಯೋ ಎಂಬಂತೆ – ಆನಂದಕರವಾಗಿ ಕಾಣಿಸಿತು.

ಇದು ಚೈತ್ರರಥವೋ, ನಂದನವೋ, ಹೂಗಳಿಂದ ತುಂಬಿದ ಐದನೆಯ ಸಾಗರವೋ, ಗಂಧಮಾದನವೋ, ಶೃಂಗಾರ ಕರ್ಮಸ್ಥಾನವೋ ಎಂದು ವಿಸ್ಮಿತನಾಗುತ್ತ ದೇವತೆಗಳನ್ನು ಗೆದ್ದು ಅದ್ಭುತ ಉತ್ಸಾಹ, ಸಂತೋಷಗಳಿಂದ ಕ್ರೀಡಿಸುವ ಈ ವನವನ್ನು ರಾವಣನಿಗೆ ಪದ್ಮಭವನ ಕೃಪೆಯಿಂದ ದೊರಕಿತೇ ವಿನಾ ಅನ್ಯತಃ ಅಲ್ಲ.

ಮುಂದುವರಿಯುವುದು...



ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

# ಮಲ್ಲರ ಕಲ್ಲಿನ ಗಾಣದ ಕಸರತ್ತು

> **ಹಳ್ಳಿಯ ಗರಡಿ ಮನೆಯ ಮಣ್ಣಂಗಳದಲ್ಲಿ ಅನಾಥವಾಗಿ ಬಿದ್ದಿರುವಂತೆ ಕಾಣುವ ಆ ಬೃಹತ್ ಕಲ್ಲಿನ ಗಾಣವು ಕೇವಲ ಒಂದು ನಿರ್ಜೀವ ಶಿಲೆಯಲ್ಲ, ಅದು ಕುಸ್ತಿ ಪೈಲ್ವಾನರ ಅಪ್ರತಿಮ ಶೌರ್ಯ ಮತ್ತು ಸಂಯಮದ ಸಾಕ್ಷಿ. ಇಂದಿನ ಯಾಂತ್ರಿಕ ಜಗತ್ತಿನ ಕೃತಕ ವ್ಯಾಯಾಮ ಶಾಲೆಗಳಿಗೆ ಸವಾಲು ಹಾಕುವ ಈ ಭಾರವಾದ ಶಿಲೆಗಳು, ಮಣ್ಣಿನ ಮಕ್ಕಳ ದೇಹವನ್ನು ಉಕ್ಕಿನ ಕೋಟೆಯನ್ನಾಗಿ ರೂಪಿಸುವ ಅಪ್ಪಟ ದೇಸೀ ಸಾಧನಗಳು.**

**ಕುಸ್ತಿ ಎಂಬ ನಿಗೂಢ ಶರೀರ ಶಾಸ್ತ್ರಕ್ಕೆ ಮಕುಟಪ್ರಾಯವಾಗಿ ನಿಲ್ಲುವ ಕಲ್ಲಿನ ಗಾಣದ ತಾಲೀಮಿನ ವಿಶಿಷ್ಟತೆಗಳು ಇಲ್ಲಿವೆ:**

1.ಅಖಾಡದಲ್ಲಿ ಪೈಲ್ವಾನನಿಗೆ ಕಾಲುಗಳ ದೃಢತೆ ಅತ್ಯಂತ ಮುಖ್ಯ. ಭಾರವಾದ ಗಾಣವನ್ನು ಹೆಗಲ ಮೇಲೆ ಹೊತ್ತು ನೂರಾರು ಬಾರಿ ಬೈಠಕ್ ಮಾಡುವುದರಿಂದ ತೊಡೆಯ ಸ್ನಾಯುಗಳು ಕಲ್ಲಿನಂತೆ ಗಟ್ಟಿಯಾಗುತ್ತವೆ. ಇದು ಪೈಲ್ವಾನನ ಪಾದಗಳನ್ನು ಭೂಮಿಗೆ ಅಂಟಿಕೊಂಡಂತೆ ಮಾಡುತ್ತದೆ. ಎದುರಾಳಿ ಎಷ್ಟೇ ಬಲವಾಗಿ ನೂಕಿದರೂ ಪರ್ವತದಂತೆ ಸ್ಥಿರವಾಗಿ ನಿಲ್ಲುವ ಅಚಲ ಶಕ್ತಿ ಇದರಿಂದ ಲಭಿಸುತ್ತದೆ.

2.ನೆಲದ ಮೇಲೆ ಬಿದ್ದಿರುವ ಬೃಹತ್ ಗಾಣವನ್ನು ಹಸ್ತದ ಬಿಗಿಯಿಂದ ಎದೆಯವರೆಗೆ ಎತ್ತುವಾಗ ಬೆನ್ನುಮೂಳೆ ಮತ್ತು ಸೊಂಟದ ಸ್ನಾಯುಗಳು ಬಲಿಷ್ಠಗೊಳ್ಳುತ್ತವೆ. ಅಖಾಡದಲ್ಲಿ ಎದುರಾಳಿಯ ಸವಾಲನ್ನು ಎದುರಿಸಲು ಬೇಕಾದ ಉಕ್ಕಿನಂತಹ ಸೊಂಟ ಮತ್ತು ಬೆನ್ನೆಲುಬು ಈ ಕಸರತ್ತಿನ ಶ್ರೇಷ್ಠ ಫಲ

3. ಗಾಣಕ್ಕೆ ಯಾವುದೇ ಹಿಡಿಗಳಿರುವುದಿಲ್ಲ. ನಯವಾದ ಆ ಕಲ್ಲನ್ನು ಬೆರಳುಗಳ ಸಂಧಿಯಲ್ಲೇ ಬಿಗಿಯಾಗಿ ಹಿಡಿಯಬೇಕಾಗುತ್ತದೆ. ಈ ವಿಶಿಷ್ಟ ಹಿಡಿತವು ಪೈಲ್ವಾನನಿಗೆ ಅಖಾಡದಲ್ಲಿ ವರವಾಗಿ ಪರಿಣಮಿಸುತ್ತದೆ. ಇಂತಹ ಮಲ್ಲನ ಮುಷ್ಠಿ ಎದುರಾಳಿಯನ್ನು ಕಬ್ಬಿಣದ ಇಕ್ಕಳದಂತೆ ಬಿಗಿಯುವ ಶಕ್ತಿ ಹೊಂದಿರುತ್ತದೆ.

4.ಗಾಣವನ್ನು ಹೊತ್ತು ಮಾಡುವ ಸತತ ವ್ಯಾಯಾಮವು ಉಸಿರಾಟದ ಲಯವನ್ನು ಹದಗೊಳಿಸುತ್ತದೆ. ಇದನ್ನು ಪೈಲ್ವಾನರ ಭಾಷೆಯಲ್ಲಿ ದಮ್ಮು ಕಟ್ಟುವಿಕೆ ಎನ್ನಲಾಗುತ್ತದೆ. ಇದರಿಂದ ದೀರ್ಘಕಾಲದ ಕುಸ್ತಿ ಪಂದ್ಯಗಳಲ್ಲಿ ಶ್ವಾಸಕೋಶವು ಸುಸ್ತಾಗದೆ, ಶಕ್ತಿಯನ್ನು ಸಮವಾಗಿ ಬಳಸಿ ಹೋರಾಡಲು ಬೇಕಾದ ಸಹಿಷ್ಣುತೆ ಲಭಿಸುತ್ತದೆ.

5.ಭಾರವಾದ ಗಾಣವನ್ನು ಹೊತ್ತು ಸಮತೋಲನ ಕಾಯ್ದುಕೊಳ್ಳುವುದರಿಂದ ದೇಹದಲ್ಲಿ ಚಕಿತಗೊಳಿಸುವ ಸ್ಥಿರತೆ ಮೂಡುತ್ತದೆ. ಇದು ಅಖಾಡದಲ್ಲಿ ಕೆಮ್ಮಣ್ಣಿನ ಮೇಲೆ ಉರುಳಾಡುವಾಗ ಅಥವಾ ಎದುರಾಳಿಯ ಪಟ್ಟುಗಳಿಂದ ಜಾರಿಕೊಳ್ಳುವಾಗ ಬೇಕಾದ ಮಿಂಚಿನಂತಹ ಚುರುಕುತನವನ್ನು ನೀಡುತ್ತದೆ.



ಕಲ್ಲಿನ ಗಾಣ ಎಂಬುದು ಪೈಲ್ವಾನನ ಸಂಯಮ ಮತ್ತು ಅವಿರತ ಶ್ರಮದ ಒರೆಗಲ್ಲು. ಆಧುನಿಕ ಯಂತ್ರಗಳ ನಡುವೆ ಇಂತಹ ದೇಸೀ ಕಸರತ್ತುಗಳು ಮರೆಯಾಗುತ್ತಿರುವ ಕಾಲದಲ್ಲಿ, ನೈಜ ಶಕ್ತಿ ಗಳಿಸುವ ಕಲೆಗಳು ಮತ್ತೆ ಜೀವ ಪಡೆಯಬೇಕಿದೆ. ಗಾಣದ ಭಾರ ಹೊತ್ತು ಏಳುವ ಪೈಲ್ವಾನನ ಗತ್ತು ನಮ್ಮ ನಾಡಿನ ಹೆಮ್ಮೆಯ ಕ್ರೀಡಾ ಸಂಸ್ಕೃತಿಯ ಉಸಿರಾಗಿ ಉಳಿಯಲಿ.

# ಏತ ನೀರಾವರಿ: ವಾರದಲ್ಲಿ ಸಭೆ ಕರೆಯಲು ಅಧಿಕಾರಿಗಳಿಗೆ ಸಚಿವ ಮಧು ಬಂಗಾರಪ್ಪ ತಾಕೀತು

• **ಉದಯವಾಹಿನಿ, ಶಿವಮೊಗ್ಗ**

ಏತ ನೀರಾವರಿ ಯೋಜನೆ ಅನುಸಾರ ಕೆಲವು ಕೆರೆಗಳಿಗೆ ಸಂಪರ್ಕ ಕಲ್ಪಿಸಿಲ್ಲ. ಮಳೆಗಾಲದಲ್ಲಿ ಪೈಪ್‌ಲೈನ್‌ಗಳು ಒಡೆದು ಹೋಗಿ, ಕೆರೆಗಳಿಗೆ ನೀರು ತಲುಪುತ್ತಿಲ್ಲ ಎಂಬ ಗ್ರಾಮಸ್ಥರ ದೂರು ಆಲಿಸಿದ ಸಚಿವ ಮಧು ಬಂಗಾರಪ್ಪ ಅವರು ವಾರದಲ್ಲೇ ಸಭೆ ಕರೆಯುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಹಂಚಿ, ಕುಣೆತೆಪ್ಪ, ಭಾರಂಗಿ, ಗುಡ್ಡದಬೆಣ್ಣೆಗೆರೆ ಗ್ರಾಮಗಳ ತಲಾ 50 ಲಕ್ಷ ವೆಚ್ಚದ ಕಾಂಕ್ರೀಟ್ ರಸ್ತೆ ಸೇರಿ 4 ಕೋಟಿಯ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

'ಏತ ನೀರಾವರಿಗಾಗಿ ನಾನು ನಿಮ್ಮೊಂದಿಗೆ ಪಾದಯಾತ್ರೆ ಮಾಡಿದ ಫಲವಾಗಿ, ಜಿಲ್ಲೆಗೆ 1,850 ಕೋಟಿ ತರಲು ಸಾಧ್ಯವಾಯಿತು. ಜನರ ಹೋರಾಟದ ಫಲವಾಗಿ ನಿರ್ಮಾಣಗೊಂಡ ಯೋಜನೆಯ ಲಾಭ, ಜನರಿಗೆ ಸಿಗಬೇಕು. ಏತ ನೀರಾವರಿಯಲ್ಲಿ ಆಗಬೇಕಾದ ದುರಸ್ತಿ ಕೆಲಸಗಳನ್ನು ಸಕಾಲಕ್ಕೆ ಮಾಡಿ' ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ತಳಹಂತದಿಂದ ಜನರ ಜೀವನ ಸುಧಾರಿಸಲು ಮತ್ತು




ದುಡಿಯುವ ಕೈಗಳಿಗೆ ಕೆಲಸ ಒದಗಿಸುವ ದೃಷ್ಟಿಯಿಂದ ನಮ್ಮ ತಂದೆ ಎಸ್.ಬಂಗಾರಪ್ಪ ಅವರು ತಮ್ಮ ಆಡಳಿತ ಅವಧಿಯಲ್ಲಿ ರೈತರಿಗೆ ಉಚಿತ ವಿದ್ಯುತ್ ನೀಡಿದರು. ಇದರಿಂದ ರೈತರು ಅಡಿಕೆ ಸೇರಿದಂತೆ ಹಲವು ಬೆಳೆಗಳನ್ನು ಬೆಳೆದು ನೆಮ್ಮದಿಯ ಬದುಕು ನಡೆಸುವಂತಾಗಿದೆ. ಹಿರೇಮಾಗಡಿಯಿಂದ ಹಂಚಿ ತಾಂಡದವರೆಗಿನ ರಸ್ತೆ ಹಾಗೂ ಕುಣೆತೆಪ್ಪ ಮುಖ್ಯ ರಸ್ತೆಗಳಿಗೆ ಶೀಘ್ರವೇ ಅನುದಾನ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಪಿ. ರುದ್ರಗೌಡ ಗಿಣಿವಾಲ ಮಾತನಾಡಿ, ತಾಲ್ಲೂಕಿನ ಗಡಿಭಾಗದ ಹಂಚಿ ಗ್ರಾಮ ಪಂಚಾಯಿತಿ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ಸಚಿವ ಮಧು ಬಂಗಾರಪ್ಪ ಅವರ ಕಾಳಜಿಯಂತೆ ಕೊಳವೆಬಾವಿ ಕೊರೆಯಿಸಲಾಗಿದೆ. ಆದರೆ ನೀರು ಬಿದ್ದಿಲ್ಲ. ಹಾಗಾಗಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿದೆ. ಕುಡಿಯುವ ನೀರಿಗಾಗಿ ಜನರು ಸಂಕಷ್ಟ ಪಡಬೇಕಾಗಿದೆ. ಬೆಳೆಗಳನ್ನು ಬೆಳೆದು ನೆಮ್ಮದಿಯ ಬದುಕು ಮೇ-ಜೂನ್ ತಿಂಗಳಲ್ಲಿ ಕುಡಿಯುವ ನೀರಿಗಾಗಿ ವಿಶೇಷ ಅನುದಾನ ಒದಗಿಸಬೇಕು ಎಂದು ಸಚಿವ ಮಧು ಬಂಗಾರಪ್ಪ ಅವರಲ್ಲಿ ಮನವಿ ಮಾಡಿದರು.

### ಜನರ ಸೇವೆ ಮಾಡಲು ಶಕ್ತಿ ಸಿಗುತ್ತದೆ

**ಬಡವರು, ಮಧ್ಯಮ ವರ್ಗ ಸೇರಿದಂತೆ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳು ನೆಮ್ಮದಿಯ ಬದುಕು ನಡೆಸಲು ಸಿದ್ದರಾಮಯ್ಯ ಸರ್ಕಾರ ಐದು ಗ್ಯಾರಂಟಿಗಳನ್ನು ನೀಡಿದೆ. ಜೀವನಮಟ್ಟ ಸುಧಾರಿಸಲು ಕಾಂಗ್ರೆಸ್ ಪಕ್ಷ ಯೋಜನೆಗಳನ್ನು ಮಾಡಿದ್ದು, ಜನರು ಸದಾ ಸ್ಮರಿಸುವ ಜೊತೆಗೆ ನಮಗೆ ಸದಾ ಆಶೀರ್ವಾದ ಮಾಡುತ್ತಿರಬೇಕು. ಆಗ ನಾವು ಇನ್ನೂ ಜನರ ಸೇವೆ ಮಾಡಲು ಶಕ್ತಿ ಸಿಗುತ್ತದೆ' ಎಂದರು.**

## ರಾಸಾಯನಿಕ ಮುಕ್ತ ಆಹಾರ ಹುಡುಕಾಟವೇ ಸವಾಲು: ಶಾಸಕ ಆರಗ ಜ್ಞಾನೇಂದ್ರ ಕಳವಳ

• **ಉದಯವಾಹಿನಿ, ತೀರ್ಥಹಳ್ಳಿ**

ಆರೋಗ್ಯದ ದೃಷ್ಟಿಯಿಂದ ರಾಸಾಯನಿಕ ಮುಕ್ತ ಆಹಾರ ಹುಡುಕಾಟ ದೊಡ್ಡ ಸವಾಲಾಗಿ ಪರಿಣಮಿಸಿದೆ. ರುಚಿಗಾಗಿ ಪೌಡರ್ ಬಳಕೆ ಮಾಡುವುದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ' ಎಂದು ಶಾಸಕ ಆರಗ ಜ್ಞಾನೇಂದ್ರ ಕಳವಳ ವ್ಯಕ್ತಪಡಿಸಿದರು.

ಈಚೆಗೆ ಕ್ಯಾನ್ಸರ್‌ನಿಂದ ಮೃತಪಟ್ಟ ರಾಷ್ಟ್ರಮಟ್ಟದ ಕೊಕ್ಕೊ ಆಟಗಾರ್ತಿ ಅಚಲ ಹೆಗ್ಡೆ ಅವರ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ತೀರ್ಥಹಳ್ಳಿ ಭಾಗದ ಪ್ರತಿ 10 ಮನೆಯಲ್ಲಿ ಒಬ್ಬರಿಗೆ ಕ್ಯಾನ್ಸರ್ ಕಾಡುತ್ತಿದೆ. ಅಡಿಕೆ ಬಗ್ಗೆ ಪರಿಶೀಲಿಸಿದಾಗ ಅಂತಹ ಯಾವುದೇ ಅಡ್ಡಪರಿಣಾಮದ ಸುಳಿವು ಸಿಗಲಿಲ್ಲ. ಬದಲಾಗಿ ಅಡುಗೆ, ಆಹಾರ, ಜಂಕ್‌ಫುಡ್ ಮೇಲೆ ಅನುಮಾನ ಮೂಡುವಂತಹ ಸನ್ನಿವೇಶ ಸೃಷ್ಟಿಯಾಗಿದೆ' ಎಂದು ಹೇಳಿದರು.

ಮಲೆನಾಡು ವಾತಾವರಣ ಆರೋಗ್ಯಕ್ಕೆ ಪೂರಕ ಎಂಬ ನಂಬಿಕೆ ದೂರವಾಗುತ್ತಿದೆ. ನಮ್ಮ ತರಕಾರಿ, ಎಣ್ಣೆ ವಿಷವಾಗಿವೆ. ತಜ್ಞ ವೈದ್ಯರಿಂದಲೂ ಚಿಕಿತ್ಸೆ ಕೊಡಲು ಸಾಧ್ಯವಾಗುತ್ತಿಲ್ಲ' ಎಂದು ಎಂಎಡಿಬಿ ಅಧ್ಯಕ್ಷ ಆರ್.ಎಂ.ಮಂಜುನಾಥ ಗೌಡ ತಿಳಿಸಿದರು.150 ವರ್ಷದ ಮಹಿಳೆಯರಲ್ಲಿ ಪಿತ್ತಕೋಶದ ಕ್ಯಾನ್ಸರ್ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಲಕ್ಷಣವಿಲ್ಲದ ಕಾಯಿಲೆಯಾದ್ದರಿಂದ ಆರಂಭದಲ್ಲಿ ಪತ್ತೆಯಾಗುವುದಿಲ್ಲ' ಎಂದು ಅಚಲ ಹೆಗ್ಡೆ ಪುತ್ರ, ಡಾ.ಸಾರ್ಥಕ್ ಕೆ.ಎಸ್. ಹೆಗ್ಡೆ ಹೇಳಿದರು.

## ಬೆಳಗಾವಿ ಪ್ಲಾಸ್ಟಿಕ್ ಕಾರ್ಖಾನೆಯಲ್ಲಿ ಅಗ್ನಿ ಅವಘಡ ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಭಸ್ಮ




• **ಉದಯವಾಹಿನಿ, ಬೆಳಗಾವಿ**

ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಹೊನಗಾ ಗ್ರಾಮದ ಕೈಗಾರಿಕಾ ಪ್ರದೇಶದಲ್ಲಿ ತಡರಾತ್ರಿ ಭೀಕರ ಅಗ್ನಿ ಅವಘಡ ಸಂಭವಿಸಿದೆ. ಇಲ್ಲಿನ ಡಾಂಗೆ ಪ್ಲಾಸ್ಟಿಕ್ ಕಾರ್ಖಾನೆಯಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದ್ದು, ಘಟನೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಪ್ಲಾಸ್ಟಿಕ್ ವಸ್ತುಗಳು ಹಾಗೂ ಯಂತ್ರೋಪಕರಣಗಳು ಸುಟ್ಟು ಕರಕಲಾಗಿವೆ.

ತಡರಾತ್ರಿ ಕಂಪನಿಯಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿದೆ. ಪ್ಲಾಸ್ಟಿಕ್ ವಸ್ತುಗಳು ಹೆಚ್ಚಾಗಿದ್ದರಿಂದ ಬೆಂಕಿ ಕ್ಷಣಾರ್ಧದಲ್ಲಿ ಕಾರ್ಖಾನೆಯಾದ್ಯಂತ ವ್ಯಾಪಿಸಿದೆ. ಘಟನೆಯ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಸತತ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಮಯಪ್ರಜ್ಞೆಯಿಂದಾಗಿ ಬೆಂಕಿ ಪಕ್ಕದ ಕಾರ್ಖಾನೆಗಳಿಗೆ ಹರಡುವುದು ತಪ್ಪಿದ್ದು, ದೊಡ್ಡ ಮಟ್ಟದ ಅನಾಹುತವನ್ನು ತಡೆದಂತಾಗಿದೆ.

ಪ್ರಾಥಮಿಕ ವರದಿಯ ಪ್ರಕಾರ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಕಾರ್ಖಾನೆಯಲ್ಲಿದ್ದ ಲಕ್ಷಾಂತರ ಮೌಲ್ಯದ ಪ್ಲಾಸ್ಟಿಕ್ ಕಚ್ಚಾ ವಸ್ತುಗಳು ಹಾಗೂ ಸಿದ್ಧಪಡಿಸಿದ ಉತ್ಪನ್ನಗಳು ಬೆಂಕಿಗೆ ಆಹುತಿಯಾಗಿವೆ. ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ರೀತಿಯ ಪ್ರಾಣಾಪಾಯ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.

ಪ್ರಸ್ತುತ ಈ ಘಟನೆಯು ಕಾಕತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಬೆಂಕಿ ಅವಘಡದಿಂದಾದ ನಿಖರವಾದ ಹಾನಿಯ ಮೊತ್ತದ ಬಗ್ಗೆ ತನಿಖೆಯ ನಂತರವಷ್ಟೇ ತಿಳಿದುಬರಬೇಕಿದೆ.

# ಸಾರ್ವಜನಿಕರು, ರೈತರಿಗೆ ತಪ್ಪದ ಅಲೆದಾಟ

• **ಉದಯವಾಹಿನಿ,ಗಜೇಂದ್ರಗಡ**

ಜನರಿಗೆ ಅಲೆದಾಟ ತಪ್ಪಿಸುವುದರ ಜೊತೆಗೆ ಸುಲಭವಾಗಿ ಸರ್ಕಾರದ ಸೌಲಭ್ಯಗಳು ತಲುಪಲಿ ಎಂಬ ಉದ್ದೇಶದಿಂದ ಗಜೇಂದ್ರಗಡ ಪಟ್ಟಣವನ್ನು ನೂತನ ತಾಲ್ಲೂಕು ಕೇಂದ್ರವಾಗಿ ಘೋಷಿಸಿ 8 ವರ್ಷಗಳು ಗತಿಸಿದರೂ ಪೂರ್ಣ ಪ್ರಮಾಣದ ಕಚೇರಿಗಳು ಆರಂಭವಾಗದ ಕಾರಣ ಸಾರ್ವಜನಿಕರು, ರೈತರು ರೋಣ ಪಟ್ಟಣಕ್ಕೆ ಅಲೆಯುವುದು ತಪ್ಪದಂತಾಗಿದೆ. 2018ರಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರ ಅಧಿಕಾರದ ಕೊನೆಯಲ್ಲಿ ಜಿಲ್ಲೆಯ ಗಜೇಂದ್ರಗಡ ಹಾಗೂ ಲಕ್ಷ್ಮೇಶ್ವರ ಸೇರಿದಂತೆ ರಾಜ್ಯದಲ್ಲಿ 47 ಹೊಸ ತಾಲ್ಲೂಕು ಕೇಂದ್ರಗಳನ್ನು ರಚನೆ ಮಾಡಿತ್ತು. ಬಳಿಕ ಬದಲಾದ ಸರ್ಕಾರ, ಕೋವಿಡ್-19 ಹಾಗೂ ರಾಜಕೀಯ ಮೇಲಾಟದಲ್ಲಿ ನೂತನ ತಾಲ್ಲೂಕು ಕೇಂದ್ರಗಳಲ್ಲಿ ಪೂರ್ಣ ಪ್ರಮಾಣದ ಕಚೇರಿಗಳು ಆರಂಭವಾಗಲಿಲ್ಲ.


ಪ್ರಸ್ತುತ ರಾಜ್ಯದಲ್ಲಿ ಮತ್ತೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷಗಳು ಗತಿಸಿದ್ದು, ಪಟ್ಟಣದಲ್ಲಿ ನಡೆಯುತ್ತಿರುವ ತಾಲ್ಲೂಕು ಕಚೇರಿಗಳ ನಿರ್ಮಾಣ ಕಾಮಗಾರಿಗಳು ಆಮೆಗತಿಯಲ್ಲಿ ಸಾಗುತ್ತಿವೆ. ಪ್ರಸ್ತುತ ಪಟ್ಟಣದಲ್ಲಿ ಲೋಕೋಪಯೋಗಿ ಇಲಾಖೆ ಕಟ್ಟಡದಲ್ಲಿ ತಹಶೀಲ್ದಾರ್ ಕಚೇರಿ, ಪುರಸಭೆ ಕಟ್ಟಡದಲ್ಲಿ ಉಪ ನೋಂದಣಾಧಿಕಾರಿ ಕಚೇರಿ, ಬಾಡಿಗೆ ಕಟ್ಟಡದಲ್ಲಿ ತಾಲ್ಲೂಕು ಪಂಚಾಯಿತಿ ಹಾಗೂ ಖಜಾನೆ ಕಾರ್ಯನಿರ್ವಹಿಸುತ್ತಿವೆ. 9.60 ಕೋಟಿ ವೆಚ್ಚದಲ್ಲಿ ನ್ಯಾಯಾಲಯ, 8.60 ಕೋಟಿ ವೆಚ್ಚದಲ್ಲಿ ಪ್ರಜಾಸೌಧ ಕಟ್ಟಡ ಕಾಮಗಾರಿಗಳು ನಡೆಯುತ್ತಿವೆ. ನ್ಯಾಯಾಲಯದ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. ಆದರೆ ಪ್ರಜಾಸೌಧದ ಕಾಮಗಾರಿ ಇನ್ನೂ ಅಡಿಪಾಯದ ಹಂತದಲ್ಲಿದೆ.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರ ತಾಲ್ಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೇರಬೇಕಿದೆ. ಗಜೇಂದ್ರಗಡ ಸುತ್ತಲಿನ ಗ್ರಾಮಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಪ್ರದೇಶವಿದ್ದು, ನೂರಾರು ರೈತರು ರೇಷ್ಮೆ, ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಆದರೆ ಪಟ್ಟಣದಲ್ಲಿ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ರೈತ ಸಂಪರ್ಕ ಕೇಂದ್ರವೂ ಇಲ್ಲ. ಬದಲಾಗಿ ಬಾಡಿಗೆ ಕಟ್ಟಡದಲ್ಲಿ ಕೃಷಿ ಮಾರಾಟ ಮಳಿಗೆಯಿದ್ದು, ಇದರಿಂದ ರೈತರು ಕೃಷಿ ಉಪಕರಣ, ರಸಗೊಬ್ಬರ ಖರೀದಿಸಲು ನರೇಗಲ್, ರೋಣ ಅವಲಂಬಿಸುವಂತಾಗಿದೆ. ಅಲ್ಲದೆ ಕಚೇರಿಗಳಲ್ಲಿ ಹಲವು ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ಕಾಯಂ ಸಿಬ್ಬಂದಿ ಕೊರತೆಯಿದೆ.

### ಉದ್ಘಾಟನೆಯಾಗದೆ ಅಗ್ನಿಶಾಮಕ ಠಾಣೆ

**ಪಟ್ಟಣದ ಗದಗ ರಸ್ತೆಯಲ್ಲಿ ಕೊಡಗಾನೂರ ಗ್ರಾಮದ ಹತ್ತಿರ ನಿರ್ಮಾಣವಾಗಿರುವ ಅಗ್ನಿಶಾಮಕ ಠಾಣೆಗೆ ಉದ್ಘಾಟನೆಯ ಭಾಗ್ಯ ಕೂಡಿ ಬರುತ್ತಿಲ್ಲ. ಸುಸಜ್ಜಿತ ಕಟ್ಟಡ ನಿರ್ಮಾಣವಾಗಿದೆ. ಆದರೆ ಠಾಣೆಗೆ ವಾಹನ ಹಾಗೂ ಸಿಬ್ಬಂದಿ ಪೂರೈಕೆಯಾಗಿಲ್ಲ.**

**ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಬೇಸಿಗೆಯಲ್ಲಿ ಬೆಂಕಿ ಅವಘಡಗಳು ನಡೆಯುತ್ತವೆ. ಗಜೇಂದ್ರಗಡದಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭವಾದರೆ ಬೆಂಕಿ ಅವಘಡಗಳಿಂದಾಗುವ ಹಾನಿ ತಡೆಯಬಹುದಾಗಿದೆ ಎಂಬುದು ಸಾರ್ವಜನಿಕರ ಅಭಿಪ್ರಾಯ.**




### ಕಾಳಜಿ ತೋರಿಸಿ

**ಗಜೇಂದ್ರಗಡ ನೂತನ ತಾಲ್ಲೂಕು ಕೇಂದ್ರವಾಗಿ 8 ವರ್ಷ ಕಳೆದರೂ ಪೂರ್ಣ ಪ್ರಮಾಣದದಲ್ಲಿ ಕಚೇರಿಗಳು ಆರಂಭಗೊಂಡಿಲ್ಲ. ಇದರಿಂದಾಗಿ ಸಾರ್ವಜನಿಕರು, ರೈತರು ಹಳೆ ತಾಲ್ಲೂಕು ಕೇಂದ್ರವನ್ನು ಆಶ್ರಯಿಸುವುದು ತಪ್ಪಿಲ್ಲ. ಹೊಸ ತಾಲ್ಲೂಕುಗಳ ರಚನೆಗೆ ಆಸಕ್ತಿ ತೋರುವ ಸರ್ಕಾರಗಳು ಅವುಗಳ ಅಭಿವೃದ್ಧಿಗೂ ಅಷ್ಟೇ ಕಾಳಜಿ ತೋರಿಸಿ, ಜನರ ಕಷ್ಟ ಬಗೆಹರಿಸಲು ಕ್ರಮವಹಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.**

### ಪ್ರಾರಂಭವಾಗದ ಕಚೇರಿಗಳು

ಬಿಇಒ ಕಚೇರಿ, ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ಬಿಸಿಎಂ, ಕೃಷಿ ಇಲಾಖೆ, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಇಲಾಖೆ, ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗ, ಅಬಕಾರಿ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಅಕ್ಷರ ದಾಸೋಹ, ಕ್ಷೇತ್ರ ಸಮನ್ವಯಾಧಿಕಾರಿ ಕಚೇರಿಗಳು ಹೀಗೆ ಹಲವು ಕಚೇರಿಗಳು ಆರಂಭವಾಗಿಲ್ಲ.

## ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿದ ಸಚಿವ ಡಿ.ಸುಧಾಕರ್ ಅಂತ್ಯಕ್ರಿಯೆ

• **ಉದಯವಾಹಿನಿ, ಚಿತ್ರದುರ್ಗ**

ಸಕಲ ಸರ್ಕಾರಿ ಗೌರವಗಳೊಂದಿಗೆ ಚಳ್ಳಕೆರೆಯ ಚಿತಾಗಾರದಲ್ಲಿ ಹಿರಿಯೂರು ಶಾಸಕ, ಸಚಿವ ಡಿ.ಸುಧಾಕರ್ ಅವರ ಅಂತ್ಯಕ್ರಿಯೆ ನೆರವೇರಿದೆ.

65 ವರ್ಷದ ಸಚಿವ ಸುಧಾಕರ್ ಅವರು ಮೊದಲು ಮೊಣಕಾಲು ಶಸ್ತ್ರಚಿಕಿತ್ಸೆಗಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಈ ಸರ್ಜರಿ ಬಳಿಕ ಶ್ವಾಸಕೋಶ ಸೋಂಕು ಕಾಣಿಸಿಕೊಂಡಿತ್ತು. ಬಳಿಕ ಮಣಿಪಾಲ್ ಆಸ್ಪತ್ರೆಯಿಂದ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಿಮ್ಸ್ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿತ್ತು. ಐಸಿಯುನಲ್ಲಿಯೇ ಇದ್ದ ಸುಧಾಕರ್ (ಮೇ 10) ಬೆಳಗ್ಗೆ ಕೊನೆಯುಸಿರೆಳೆದಿದ್ದಾರೆ. ಅಂತ್ಯಕ್ರಿಯೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್, ಉಸ್ತುವಾರಿ ಸಚಿವ ಸುರ್ಜೇವಾಲಾ, ಸಚಿವರು, ಶಾಸಕರು, ಸೇರಿದಂತೆ ಹಲವು ಗಣ್ಯರು ಭಾಗಿಯಾಗಿದ್ದರು. ಸುಧಾಕರ್ ಪಾರ್ಥಿವ



ಶರೀರ ನೋಡಿ ಡಿಕೆಶಿ ಕಣ್ಣೀರು ಹಾಕಿದರು. ಬೆಳಗ್ಗೆಯಿಂದ ಸುಧಾಕರ್ ಅವರ ನಿವಾಸದಲ್ಲಿ ಹಲವರು ಅಂತಿಮ ದರ್ಶನ ಪಡೆದರು. ಬಳಿಕ ಸುಧಾಕರ್ ಸ್ಟೇಡಿಯಂನಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಸಾವಿರಾರು ಜನರು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು. ಆ ಬಳಿಕ ಸುಧಾಕರ್ ಸ್ಟೇಡಿಯಂನಿಂದ ಜೈನ ಮುಕ್ತಿಧಾಮದವರೆಗೆ ತೆರೆದ ವಾಹನದಲ್ಲಿ ಪಾರ್ಥಿವ ಶರೀರದ ಮೆರವಣಿಗೆ ನಡೆಸಲಾಯಿತು.

ನಂತರ ಮುಕ್ತಿಧಾಮದಲ್ಲಿ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಬಂದೂಕು ಪಡೆ ಗೌರವ ಸಲ್ಲಿಸಿತು. ಬಳಿಕ ಪಾರ್ಥಿವ ಶರೀರದ ಮೇಲಿನ ರಾಷ್ಟ್ರಧ್ವಜವನ್ನು ತೆರವುಗೊಳಿಸಿ, ಸುಧಾಕರ್ ಪತ್ನಿ ಹರ್ಷಿಣಿ ಅವರಿಗೆ ಸಿಎಂ ಸಿದ್ದರಾಮಯ್ಯ ರಾಷ್ಟ್ರಧ್ವಜ ಹಸ್ತಾಂತರಿಸಿದರು. ಸುಧಾಕರ್ ಪುತ್ರ ಸುಹಾಸ್ ಅಂತಿಮ ವಿಧಿ ವಿಧಾನ ಕಾರ್ಯ ನೆರವೇರಿಸಿ, ಪಾರ್ಥಿವ ಶರೀರಕ್ಕೆ ಸುಗಂಧ ದ್ರವ್ಯಗಳಿಂದ ಅಗ್ನಿಸ್ಪರ್ಶ ಮಾಡಲಾಯಿತು. ಸಕಲ ಸರ್ಕಾರಿ ಗೌರವ, ಜೈನ ಸಂಪ್ರದಾಯದಂತೆ ಸಚಿವ ಡಿ.ಸುಧಾಕರ್ ಪಂಚಭೂತಗಳಲ್ಲಿ ಲೀನರಾದರು.

# ದುಶ್ಚಟಕ್ಕೆ ದಾಸರಾಗದೆ ದೇಶ ಸೇವೆ ಮಾಡಿ: ಮಾಜಿ ಸಚಿವ ಬಿ.ಸಿ. ಪಾಟೀಲ

• **ಉದಯವಾಹಿನಿ, ಹಿರೇಕೆರೂರು**

ಜೈ ಜವಾನ್ ಜೈ ಕಿಸಾನ್ ಎಂಬ ಉಕ್ತಿಯಂತೆ ದೇಶ ಕಾಯುವ ಯೋಧ, ದೇಶಕ್ಕೆ ಅನ್ನ ನೀಡುವ ರೈತ ಈ ಮಣ್ಣಿನ ಉಸಿರು ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

42 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ಸೇವಾ ನಿವೃತ್ತಿ ಪಡೆದು ಸ್ವ-ಗ್ರಾಮವಾದ ತಾಲ್ಲೂಕಿನ ಆಲದಗೇರಿ ಗ್ರಾಮದಲ್ಲಿ ಈಚೆಗೆ ಗ್ರಾಮಕ್ಕೆ ಆಗಮಿಸಿದ ರೇವಣಪ್ಪ ದ್ಯಾಮಕ್ಕನವರ ಅವರ ಸ್ವಾಗತ ಹಾಗೂ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಭಾರತವು ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ರೂಪುಗೊಳ್ಳಲು ಯೋಧರ ಪರಿಶ್ರಮವಿದೆ.

ಯುವಜನರು ದುಃಶ್ಚಟಗಳಿಗೆ ದಾಸರಾಗದೆ ದೇಶ, ಸಮಾಜ




ಸೇವೆಯಲ್ಲಿ ನಿರತರಾಗಬೇಕು ಎಂದು ಹೇಳಿದರು .

ಈ ನಿಟ್ಟಿನಲ್ಲಿ ಆಲದಗೇರಿ ಗ್ರಾಮದ ನಮ್ಮ ಮನೆ ಮಗ ರೇವಣಪ್ಪ ದ್ಯಾಮಕ್ಕನವರ ಸುದೀರ್ಘ 42 ವರ್ಷಗಳ ಕಾಲ ದೇಶದ ಗಡಿಭಾಗಗಳನ್ನು ಕಾಯ್ದು ನಿವೃತ್ತರಾಗಿ ಹುಟ್ಟೂರಿನಲ್ಲಿ ಅದ್ದೂರಿಯಾಗಿ ಸನ್ಮಾನಿತರಾಗಿರುವುದು ಎಲ್ಲಾ ಪದವಿಗಿಂತ ದೊಡ್ಡದು. ಅವರ ಈ ಸೇವೆ ಇಂದಿನ ಯುವಕರಿಗೆ ಪ್ರೇರಣೆಯಾಗಬೇಕು' ಎಂದರು.

ಇಂದಿನ ಮಕ್ಕಳಿಗೆ ವಾಘಾ ಗಡಿ ಪ್ರದೇಶದಲ್ಲಿ ನಡೆಯುವ ಖವಾಯಿತ ಪ್ರದರ್ಶನ ತೋರಿಸುವ ಮೂಲಕ ದೇಶಭಕ್ತಿ ಪ್ರೇಮವನ್ನು ಹೆಚ್ಚಿಸಬೇಕು.

ಈ ದೇಶ ಸೇವೆಗೆ ತನ್ನ ಪತಿ ಮಕ್ಕಳನ್ನು ಕಳಿಸಿ ಒಂಟಿ ಜೀವನ ನಡೆಸಿದ ರೇಣುಕವ್ವ ರೇವಣಪ್ಪ ದ್ಯಾಮಕ್ಕನವರ ಧೈರ್ಯವನ್ನು ನಾವೆಲ್ಲರೂ ಮೆಚ್ಚಿಕೊಳ್ಳಬೇಕು. ಈ ನಿಟ್ಟಿನಲ್ಲಿ ಎಲ್ಲಾ ತಾಯಂದಿರು ತಮ್ಮ ಮಕ್ಕಳನ್ನು ದೇಶ ಸೇವೆಗೆ ಕಳಿಸಲು ಯಾವತ್ತು ಹಿಂದೇಟು ಹಾಕದೆ ದೇಶ ಪ್ರೇಮವನ್ನು ತುಂಬಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಉಪನ್ಯಾಸಕ ಮಂಜುನಾಥ ಚಲವಾದಿ, ಭಾರತ ದೇಶ ನೌಕಾಪಡೆ, ವಾಯುಸೇನೆ, ಭೂಸೇನೆ ಮೂರು ಪ್ರಮುಖ ಅಂಗಗಳು ದೇಶವನ್ನು ರಕ್ಷಿಸುವಲ್ಲಿ ಸಮರ್ಥವಾಗಿವೆ. ಈ ನಿಟ್ಟಿನಲ್ಲಿ ಈ ಗ್ರಾಮದ ಮಣ್ಣಿನ ಮಗ 42 ವರ್ಷ ದೇಶ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಕಾರಣ ಹಬ್ಬದ ರೀತಿಯಲ್ಲಿ ಗ್ರಾಮಸ್ಥರು ಸೇರಿ ಸನ್ಮಾನಿಸಿದ ಹಿರಿಮೆ ದೊಡ್ಡದು ಅವರ ದೇಶಭಕ್ತಿಯನ್ನು ನಾವೆಲ್ಲರೂ ಮೆಚ್ಚಿಕೊಳ್ಳಬೇಕು ಎಂದರು.

## ಲಕ್ಕುಂಡಿ: ಪ್ರಾಚ್ಯ ಅವಶೇಷ ಪತ್ತೆ




• **ಉದಯವಾಹಿನಿ, ಗದಗ**

ತಾಲ್ಲೂಕಿನ ಲಕ್ಕುಂಡಿ ಗ್ರಾಮದಲ್ಲಿ ನಡೆದಿರುವ ಪ್ರಾಚ್ಯ ಅವಶೇಷ ಅನ್ವೇಷಣೆ ಸಪ್ತಾಹದಲ್ಲಿ 200ಕ್ಕೂ ಹೆಚ್ಚು ಪ್ರಾಚ್ಯ ಅವಶೇಷಗಳು ಸಿಕ್ಕಿವೆ. ಲಕ್ಕುಂಡಿ ಗ್ರಾಮದ ಬಸವರಾಜ ಮುಸುಕಿನಬಾವಿ ಅವರ ಹೊಲದ ಬದುವಿನಲ್ಲಿ ವಿವಿಧ ಬಗೆಯ 200ಕ್ಕೂ ಅಧಿಕ ಪ್ರಾಚ್ಯ ಅವಶೇಷಗಳು ದೊರೆತಿದ್ದು, ಬಯಲು ವಸ್ತು ಸಂಗ್ರಹಾಲಯಕ್ಕೆ ಸ್ಥಳಾಂತರಿಸಲಾಗಿದೆ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಮಿತಿ ಅಧ್ಯಕ್ಷ ಸಿದ್ದು ಪಾಟೀಲ ತಿಳಿಸಿದ್ದಾರೆ.

## ಬಿದರಕುಂದಿ ಗುಡ್ಡದಲ್ಲಿ ಮೈದಳೆಯುತ್ತಿದೆ ಹಸಿರು ಸಾಮ್ರಾಜ್ಯ: ಸಾಲುಮರದ ತಿಮ್ಮಕ್ಕ ಉದ್ಯಾನವನ' ಕಾಮಗಾರಿ ವೀಕ್ಷಣೆ

• **ಉದಯವಾಹಿನಿ, ಮುದ್ದೇಬಿಹಾಳ**

ತಾಲ್ಲೂಕಿನ ಸಮೀಪದ ಬಿದರಕುಂದಿ ಗುಡ್ಡದಲ್ಲಿ ಅರಣ್ಯ ಇಲಾಖೆ ಹಾಗೂ ಕೆ.ಆರ್.ಐ.ಡಿ.ಎಲ್ ಸಹಯೋಗದೊಂದಿಗೆ ನಿರ್ಮಾಣವಾಗುತ್ತಿರುವ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಉದ್ಯಾನವನ'ಕ್ಕೆ ಹಸಿರು ತೋರಣ ಗೆಳೆಯರ ಬಳಗದ ಸದಸ್ಯರು ಭೇಟಿ ನೀಡಿ ಪ್ರಗತಿ ಪರಿಶೀಲಿಸಿದರು.

ಸುಮಾರು 33 ಎಕರೆ ವಿಸ್ತೀರ್ಣದಲ್ಲಿ ತಲೆ ಎತ್ತುತ್ತಿರುವ ಈ ಬೃಹತ್ ಉದ್ಯಾನವನದಲ್ಲಿ ಕಾಮಗಾರಿಗಳು ಯುದ್ಧೋಪಾದಿಯಲ್ಲಿ ನಡೆಯುತ್ತಿವೆ. ಈಗಾಗಲೇ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿಗಳಾದ ಬಸನಗೌಡ ಬಿರಾದಾರ ಹಾಗೂ ಗಿರೀಶ್ ಆಲಕುಡೆ ಅವರ ಮಾರ್ಗದರ್ಶನದಲ್ಲಿ 3,500 ದೊಡ್ಡ ಮರಗಳು ಹಾಗೂ 25 ಸಾವಿರಕ್ಕೂ ಹೆಚ್ಚು ವೈವಿಧ್ಯಮಯ ಔಷಧೀಯ ಮತ್ತು ಅಲಂಕಾರಿಕ ಗಿಡಗಳನ್ನು ನೆಡಲಾಗಿದೆ. ಈ ಗಿಡಗಳ ಪೋಷಣೆಗಾಗಿ ನುರಿತ ತಂಡ ನಿರಂತರವಾಗಿ ಶ್ರಮಿಸುತ್ತಿದೆ. **ಉದ್ಯಾನವನದ ಪ್ರಮುಖ ಆಕರ್ಷಣೆಗಳು:** ಪ್ರಕೃತಿಯ ನಡುವೆ ಆಧುನಿಕ ಸೌಲಭ್ಯಗಳನ್ನು ಅಳವಡಿಸುತ್ತಿರುವುದು




ಇಲ್ಲಿನ ವಿಶೇಷ. **ಜಲ ಸಂರಕ್ಷಣೆ:** ಮಳೆನೀರು ಕೊಯ್ಲು ಪದ್ಧತಿಯ ಮೂಲಕ ಬೀಳುವ ಪ್ರತಿಯೊಂದು ಹನಿ ನೀರನ್ನು ಸಂಗ್ರಹಿಸಲು ಬೃಹತ್ ಜಲ ಸಂಗ್ರಹಾಗಾರ ನಿರ್ಮಿಸಲಾಗಿದೆ.

**ನೈಸರ್ಗಿಕ ಸೌಂದರ್ಯ:** ಸ್ಥಳೀಯ ಕಲ್ಲುಗಳನ್ನು ಬಳಸಿ ನಿರ್ಮಿಸಲಾದ ನೈಸರ್ಗಿಕ ಜಲಪಾತಗಳು (ಝರಿ) ಮತ್ತು ಆಕರ್ಷಕ ಪ್ಯಾರಾಗೋಲಗಳು ಪ್ರವಾಸಿಗರನ್ನು **ಸೆಳೆಯಲಿವೆ. ಸೌಲಭ್ಯಗಳು:** ವೀಕ್ಷಣಾ ಗೋಪುರ, ಶುದ್ಧ ಕುಡಿಯುವ ನೀರಿನ ಘಟಕ, ವಿಶಾಲವಾದ ವಾಯು ವಿಹಾರ ಪಥ (ಘಚಿಟಇಟಿರ ಕಚಿಣು), ವಿಶ್ರಾಂತಿ ಕಟ್ಟೆಗಳು, ಕ್ಯಾಂಟೀನ್ ಹಾಗೂ ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣ ಭರದಿಂದ ಸಾಗಿದೆ. ಮನರಂಜನೆ: ಮಕ್ಕಳಿಗಾಗಿ ವಿಶೇಷ ಪಾರ್ಕ್ ಹಾಗೂ ಫಿಟ್ನೆಸ್ ಆಸಕ್ತರಿಗಾಗಿ ಹೊರಾಂಗಣ ವ್ಯಾಯಾಮ ಶಾಲೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಭೇಟಿಯ ಸಂದರ್ಭದಲ್ಲಿ ಹಸಿರು ತೋರಣ ಬಳಗದ ಸದಸ್ಯರು ಹಣ್ಣಿನ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ನೀಡಿದರು. ಇದೇ ವೇಳೆ ಕಾಯಕಯೋಗಿ ಪ್ರಶಸ್ತಿ ಪುರಸ್ಕೃತ ಮಹಾಬಲೇಶ್ವರ ಗಡೇದ ಹಾಗೂ ಬಳಗದ ಪದಾಧಿಕಾರಿಗಳನ್ನು ಗೌರವಿಸಲಾಯಿತು.

### ಸುಂದರವಾಗಿ ನಿರ್ಮಾಣವಾಗುತ್ತಿರುವ ಸಾಲುಮರದ ತಿಮ್ಮಕ್ಕನ ಉದ್ಯಾನವನ

ಬಿದರಕುಂದಿ ಗುಡ್ಡದಲ್ಲಿ ಸುಂದರವಾಗಿ ನಿರ್ಮಾಣವಾಗುತ್ತಿರುವ ಸಾಲುಮರದ ತಿಮ್ಮಕ್ಕನ ಉದ್ಯಾನವನ ಕಂಡು ಸಂತೋಷವಾಗುತ್ತದೆ. ನಿಜವಾಗಿಯೂ ಅದ್ಭುತವಾದ ಅರಣ್ಯ ಸಾಮ್ರಾಜ್ಯವೇ ಇಲ್ಲಿ ನಿರ್ಮಾಣವಾಗುತ್ತಿದೆ. ಸೋಮಶೇಖರ ಚೀರಲದಿನ್ನಿ, ಗೌರವಾಧ್ಯಕ್ಷರು, ಹಸಿರು ತೋರಣ ಬಳಗ. ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಅಮರೇಶ ಗೂಳಿ, ಕಾರ್ಯದರ್ಶಿ ಬಸವರಾಜ ಬಿಜ್ಜೂರ, ಮಾಜಿ ಅಧ್ಯಕ್ಷರಾದ ಬಿ.ಎಸ್.ಮೇಟಿ, ಅಶೋಕ ರೇವಡಿ ಸೇರಿದಂತೆ ಹಲವು ಗಣ್ಯರು ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು. ಬಸನಗೌಡ ಬಿರಾದಾರ ಸ್ವಾಗತಿಸಿದರೆ, ಯಲಗೂರಪ್ಪ ಗುಬ್ಬಿ ಕಾರ್ಯಕ್ರಮ ನಿರೂಪಿಸಿ, ವಿಠ್ಠಲ ಬೋರಟಗಿ ವಂದಿಸಿದರು.

## ಮಿನಿ ನ್ಯೂಸ್

### ಹಣ ಬಿಡುಗಡೆಗೆ ಆಗ್ರಹ:ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಗೆ ಮುತ್ತಿಗೆ

• **ಉದಯವಾಹಿನಿ, ಬೀದರ್**

ಆರ್.ಟಿ.ಇ ಹಣ ಬಿಡುಗಡೆಗೆ ಆಗ್ರಹಿಸಿ ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಸಂಘದಿಂದ ನಗರದ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿಗೆ ಮೇ. 12ರಂದು ಮುತ್ತಿಗೆ ಹಾಕಲು ನಿರ್ಧರಿಸಲಾಗಿದೆ. ಬೆಳಿಗ್ಗೆ 9ಕ್ಕೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು. ಅಖಿಲ ಕರ್ನಾಟಕ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ರಾಜ್ಯ ಅಧ್ಯಕ್ಷರೂ ಆದ ಸಂಘದ ಜಿಲ್ಲಾ ಘಟಕದ ಗೌರವಾಧ್ಯಕ್ಷ ರೇವಣಸಿದ್ದಪ್ಪ ಜಲಾದೆ ಹಾಗೂ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಾಜೇಂದ್ರ ಮಣಗೇರೆ ಹಾಗೂ ಪ್ರಧಾನ ಕಾರ್ಯದರ್ಶಿ ಕೆ. ಗುರುನಾಥ ರೆಡ್ಡಿ ತಿಳಿಸಿದ್ದಾರೆ.

ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಚೇರಿಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಲಂಚ ಕೊಟ್ಟ ಸಂಸ್ಥೆಗೆ ಆರ್.ಟಿ.ಇ ಹಣ ಬಿಡುಗಡೆ ಮಾಡಲಾಗುತ್ತಿದೆ. ಸಂಸದರು ಹೇಳಿದರೂ ಉಪ ನಿರ್ದೇಶಕರು ಎಲ್ಲಾ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಿಲ್ಲ ಎಂದು ಆರೋಪಿಸಿದ್ದಾರೆ.ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಎರಡು-ಮೂರು ವರ್ಷಗಳ ಆರ್.ಟಿ.ಇ ಹಣ ಬಂದಿಲ್ಲ. ಸಂಸ್ಥೆಗಳು ಸಂಕಷ್ಟದಲ್ಲಿ ಇವೆ.

### ನಾಡಿನ ಪ್ರಗತಿಗೆ ನಿಸ್ವಾರ್ಥ ಸೇವೆ ಅಗತ್ಯ

• **ಉದಯವಾಹಿನಿ, ಹಾಸನ**

ನಮ್ಮ ನಾಡಿನ ಪ್ರಗತಿಗೆ ಪ್ರತಿಯೊಬ್ಬರ ನಿಸ್ವಾರ್ಥವಾದ ಸೇವೆ ಅಗತ್ಯ' ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತ ಡಾ.ವೈ.ಎಸ್. ವೀರಭದ್ರಪ್ಪ ಅಭಿಪ್ರಾಯಪಟ್ಟರು. ನಗರದ ಭಾರತ್‌ಸ್ಕೌಟ್ ಮತ್ತು ಗೈಡ್ಸ್ ಭವನದಲ್ಲಿ ಏಕಲವ್ಯ ಜೀವ ಜಲ ಫೌಂಡೇಶನ್ ಹಾಗೂ ಏಕಲವ್ಯ ರೋವರ್ ಮುಕ್ತ ದಳದ ದಶಮಾನೋತ್ಸವದ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ಏಕಲವ್ಯ ಸೇವಾ ರತ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.ಸೇವೆ ಮಾಡುವ ಸೌಭಾಗ್ಯ ಎಲ್ಲರಿಗೂ ಸಿಗುವುದಿಲ್ಲ, ದೇವರು ಈ ಕಾರ್ಯಕ್ಕಾಗಿ ಕೆಲವರನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ನಮ್ಮ ಬದುಕಿನಲ್ಲಿ ಪ್ರತಿಫಲ ಬಯಸದೆ ಸಲ್ಲಿಸುವ ಸೇವೆ ಭಗವಂತನಿಗೆ ಸಮರ್ಪಿತವಾಗುತ್ತದೆ ಎಂದರು. ಸರಸ್ವತಿ ಮಹಿಳಾ ಕಲಾ ಸಮಾಜದ ವತಿಯಿಂದ ಹಲವು ವರ್ಷಗಳಿಂದ ವಿವಿಧ ರೀತಿಯಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿದ ಸುಧಾ ರವಿಕುಮಾರ್ ಅವರ ಸೇವೆಯನ್ನು ಶ್ಲಾಘಿಸಿದರು.

ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವೈ.ಎಂ. ರಾಜೇಂದ್ರ, ವೀರ ಯೋಧ ವೈ.ಎನ್. ಮೋಹನ್ ಹಾಗೂ ರೋವರ್ ಮನು ವರ್ಷಿತ್ ಅವರಿಗೆ 'ಏಕಲವ್ಯ ಸೇವಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

### ಹೊನ್ನಾಳಿ | ಮಾಜಿ ಸೈನಿಕರಿಗೆ ನಿವೇಶನ ನೀಡಲು ಯತ್ನ: ಶಾಸಕ ಡಿ.ಜಿ. ಶಾಂತನಗೌಡ




• **ಉದಯವಾಹಿನಿ, ಹೊನ್ನಾಳ**

ದೇಶ ಸೇವೆ ಸಲ್ಲಿಸಿ ನಿವೃತ್ತ ಜೀವನ ಸಾಗಿಸುತ್ತಿರುವ ಮಾಜಿ ಸೈನಿಕರಿಗೆ ನಿವೇಶನ ಕೊಡುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು. ಇಲ್ಲಿನ ದೇವನಾಯಕನಹಳ್ಳಿಯ ಸರ್ಕಾರಿ ನೌಕರರ ಭವನದಲ್ಲಿ ಅವಳಿ ತಾಲ್ಲೂಕಿನ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಮಾತನಾಡಿದರು.

ಸೈನಿಕರು 20-30 ವರ್ಷಗಳವರೆಗೆ ತಮ್ಮ ಕುಟುಂಬದಿಂದ ದೂರ ಇದ್ದು ಗಡಿ ಕಾಯುತ್ತಾರೆ. ಅವರ ಬಗ್ಗೆ ಒಂದಿಷ್ಟು ಪ್ರೀತಿ, ಗೌರವ ಇಟ್ಟುಕೊಳ್ಳಬೇಕು' ಎಂದರು. ಮಾಜಿ ಸಚಿವ ಎಂ.ಪಿ.ರೇಣುಕಾ ಚಾರ್ಯ ಮಾತನಾಡಿ, 'ಸೈನಿಕರು ಹಾಗೂ ರೈತರು ನಮ್ಮ ಎರಡು ಕಣ್ಣುಗಳಿದ್ದಂತೆ. ಇವರಿಬ್ಬರ ಬದುಕು ಕಠಿಣವಾಗಿದ್ದು, ಕಷ್ಟಕಾಲದಲ್ಲಿ ನಮ್ಮ ಸರ್ಕಾರಗಳು ಅವರ ನೆರವಿಗೆ ಬರಬೇಕು ಎಂದರು.

ಈಶ್ವರೀಯ ವಿಶ್ವವಿದ್ಯಾಲಯದ ಜ್ಯೋತಿ ಅಕ್ಕ, ಸಂಘದ ರಾಜ್ಯ ಮಹಿಳಾ ಘಟಕದ ಅಧ್ಯಕ್ಷರಾದ ಸ್ವರೂಪರಾಣಿ ಮಾತನಾಡಿದರು. ಸಂಘದ ಸಂಸ್ಥಾಪಕ ಎಂ. ವಾಸಪ್ಪ ಅವರು ಸಂಘದ ಬೆಳವಣಿಗೆಯ ಹಾದಿಯನ್ನು ವಿವರಿಸಿದರು. ಖಜಾಂಚಿ ವೀರೇಶ್ ಸಂಘದ ಲೆಕ್ಕಪತ್ರ ಮಂಡಿಸಿದರು. ಕಾರ್ಯದರ್ಶಿ ಗಂಗಾಧರ್ ಸ್ವಾಗತಿಸಿದರು, ನಿರ್ದೇಶಕ ಸಿದ್ದೇಶಪ್ಪ ವಂದಿಸಿದರು.

### ಕಪ್ಪುಹಣ ಬಿಳಿ ಹಣವನ್ನಾಗಿ ಬದಲಿಸಿಕೊಳ್ಳಲು ಗುರುಪೀಠ ಬಳಕೆ: ದೂರು

• **ಉದಯವಾಹಿನಿ, ದಾವಣಗೆರೆ**

ಪಂಚಮಸಾಲಿ ಗುರುಪೀಠದ ಟ್ರಸ್ಟಿಗಳು ಹಾಗೂ ಅವರ ಹಿಂಬಾಲಕರು ಖಾಲಿ ಕುರ್ಚಿಗಳಿಗೆ ಲೆಕ್ಕ ಒಪ್ಪಿಸಿದ್ದಾರೆ. ಟ್ರಸ್ಟಿಗಳು ಸಮುದಾಯದವರನ್ನು ಕುಡುಕರು ಎಂಬಂತೆ ಬಿಂಬಿಸಿ ಪೊಲೀಸರಿಗೆ ಪತ್ರ ಬರೆದಿದ್ದಾರೆ. ಈ ಬಗ್ಗೆ ಕ್ಷಮೆ ಕೋರದಿದ್ದರೆ ಅವರು ಹೋಗುವ ಸಭೆ, ಸಮಾರಂಭಗಳಲ್ಲಿ ಅವರನ್ನು ಪ್ರಶ್ನಿಸುವಂತೆ ಸಮುದಾಯದವರಿಗೆ ಕರೆ ನೀಡುತ್ತೇವೆ' ಎಂದು ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಹೇಳಿದರು.

ಟ್ರಸ್ಟಿಗಳು ಕಪ್ಪುಹಣವನ್ನು ಬಿಳಿ ಹಣವನ್ನಾಗಿ ಬದಲಿಸಿಕೊಳ್ಳಲು ಗುರುಪೀಠವನ್ನು ಬಳಸಿಕೊಂಡಿರುವ ಅನುಮಾನ ಇದೆ. ಸಹಿ ಫೋರ್ಜರಿ ಮಾಡಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಿಕೊಂಡಿದ್ದಾರೆ. ಈ ಬಗ್ಗೆ ದಾಖಲೆ ಸಮೇತ ಆದಾಯ ತೆರಿಗೆ (ಐಟಿ), ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ದೂರು ನೀಡುತ್ತೇವೆ. ಮೇ 20ರ ವರೆಗೆ ಗಡುವು ನೀಡುತ್ತೇವೆ. ಕ್ಷಮೆ ಕೋರಿ ಸಮುದಾಯದವರ ಮುಂದೆ ತಲೆ ಬಾಗದಿದ್ದರೆ ಚಳವಳಿ ಪ್ರಾರಂಭಿಸುತ್ತೇವೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮೊದಲ ಹಂತದಲ್ಲಿ ಕೊಟ್ಟೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳಲ್ಲಿ ಸಮಿತಿ ರಚಿಸಿ ಭಕ್ತರು ನೀಡಿದ ದೇಣಿಗೆ ಮೊತ್ತದ ವಿವರ ಸಂಗ್ರಹಿಸುತ್ತೇವೆ ಎಂದು ತಿಳಿಸಿದರು.

ಮಠದಲ್ಲಿ ಪ್ರತಿಭಾ ಪುರಸ್ಕಾರ ಸೇರಿ ಹಲವು ಕಾರ್ಯಕ್ರಮಗಳು ನಡೆಯಬೇಕಿದೆ. ಈ ಕಾರಣಕ್ಕೆ ಜಿಲ್ಲಾಡಳಿತ ನಿಷೇಧಾಜ್ಞೆಯನ್ನು ವಾಪಸ್ ಪಡೆಯಬೇಕು. ಸ್ವಾಮೀಜಿ ಸಮುದಾಯದಿಂದ ದೇಣಿಗೆ ಸಂಗ್ರಹಿಸಿದ್ದರೆ ಅವರೂ ಲೆಕ್ಕ ಒಪ್ಪಿಸಬೇಕು ಎಂದು ಹೇಳಿದರು.ಮುಖಂಡರಾದ ಆನಂದ ಜರ್ಲಿ, ವೀರಾಪುರ ಬಸವರಾಜ, ಶಂಕರಗೌಡ ಬ್ಯಾಡಗಿ, ಸೋಮಣ್ಣ ಬೇವಿನಮರದ, ಸಿದ್ದಣ್ಣ ಚಿಕ್ಕಬಿದರಿ, ಬಾಬಣ್ಣ ಹಾಗೂ ಇನ್ನಿತರರಿದ್ದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಬೆಳಿಗ್ಗೆ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ಹಣಕಾಸಿನಲ್ಲಿ ಸುಧಾರಣೆ ನೀವು ಪ್ರಮುಖ ಖರೀದಿಗಳನ್ನು ಮಾಡುವುದನ್ನು ಅನುಕೂಲಕರವಾಗಿಸುತ್ತದೆ. ಪೋಷಕರ ಆರೋಗ್ಯ ಸುಧಾರಿಸುತ್ತದೆ ಮತ್ತು ಅವರು ನಿಮ್ಮ ಮೇಲೆ ಪ್ರೀತಿಯ ಮಳೆಗೈಯುತ್ತಾರೆ.

**ವೃಷಭ** ಸ್ವತಃ ಔಷಧಿ ತೆಗೆದುಕೊಳ್ಳುವುದು ಔಷಧ ಅವಲಂಬನೆಯನ್ನು ಉಂಟುಮಾಡಬಹುದು. ಯಾವುದೇ ಔಷಧ ತೆಗೆದುಕೊಳ್ಳುವ ಮೊದಲು ವೈದ್ಯರ ಸಲಹೆ ಪಡೆಯಿರಿ. ಇಲ್ಲದಿದ್ದಲ್ಲಿ ಔಷಧ ಅವಲಂಬನೆಯ ಸಾಧ್ಯತೆ ಅಧಿಕವಾಗಿದೆ. ವ್ಯಾಪಾರವನ್ನು ಬಲಪಡಿಸಲು ಇಂದು ನೀವು ಯಾವುದೇ ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬಹುದು.

**ಮಿಥುನ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು ಮತ್ತು ನೀವು ಹಣದ ಲಾಭವನ್ನು ಪಡೆಯಬಹುದು.

**ಕರ್ಕಾಟಕ** ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು ಮತ್ತು ನಿಮ್ಮ ಸಾಕಷ್ಟು ಹಣವು ಖರ್ಚಾಗಬಹುದು ಕುಟುಂಬದ ಬಾಧ್ಯತೆಗಳನ್ನು ಮರೆಯಬೇಡಿ.

**ಸಿಂಹ** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ . ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ಹಣಕಾಸಿನಲ್ಲಿ ಸುಧಾರಣೆ ನೀವು ಪ್ರಮುಖ ಖರೀದಿಗಳನ್ನು ಮಾಡುವುದನ್ನು ಅನುಕೂಲಕರವಾಗಿಸುತ್ತದೆ. ಪೋಷಕರ ಆರೋಗ್ಯ ಸುಧಾರಿಸುತ್ತದೆ

**ಕನ್ಯಾ** ನಿಮ್ಮ ಕುಟುಂಬದ ನೀವು ಕಿರಿಕಿರಿ ಸಾಧ್ಯವಾಯಿತು ಇದು ನಿಮ್ಮಿಂದ ಸಾಕಷ್ಟು ನಿರೀಕ್ಷಿಸುತ್ತದೆ. ತಮ್ಮ ಹಣವನ್ನು ಇನ್ನೊಬ್ಬರಿಗೆ ನೀಡಲು ಇಷ್ಟಪಡುವುದಿಲ್ಲ ಆದರೆ ಇಂದು ನೀವು ಅಗತ್ಯವಿರುವವರಿಗೆ ಹಣವನ್ನು ಕೊಟ್ಟು ವಿಶ್ರಾಂತಿಯನ್ನು ಅನುಭವಿಸುವಿರಿ. ಯುವಕರು ಶಾಲಾ ಯೋಜನೆಗಳಲ್ಲಿ ಕೆಲವು ಸಲಹೆ ಪಡೆಯಬಹುದು.

**ತುಲಾ** ಇದು ಹೃದಯ ರೋಗಿಗಳಿಗೆ ಕಾಫಿ ಬಿಡಲು ಸರಿಯಾದ ಸಮಯ. ಯಾವುದೇ ಮುಂದುವರಿದ ಬಳಕೆ ನಿಮ್ಮ ಹೃದಯದ ಮೇಲೆ ಅನವಶ್ಯಕ ಒತ್ತಡ ತರುತ್ತದೆ. ಆಲ್ಕೋಹಾಲ್ ಸಿಗರೇಟ್ ಮುಂತಾದವುಗಳಿಗೆ ಹಣವನ್ನು ಖರ್ಚು ಮಾಡಬಾರದು, ಎಂದು ನಿಮಗೆ ನನ್ನ ಸಲಹೆ ನೀಡಲಾಗಿದೆ.

**ವೃಶ್ಚಿಕ** ತೊಂದರೆಗಳ ಬಗ್ಗೆ ಚಿಂತಿಸುವ ಮತ್ತು ಅವುಗಳನ್ನು ದೊಡ್ಡದಾಗಿಸುವ ನಿಮ್ಮ ಸ್ವಭಾವ ನಿಮ್ಮ ನೈತಿಕತೆಯನ್ನು ದುರ್ಬಲಗೊಳಿಸಬಹುದು. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಏಕೆಂದರೆ ನೀವು ಅದನ್ನು ಮಾಡದಿದ್ದರೆ ಅವರ ಆರೋಗ್ಯವು ಹದಗೆಡಬಹುದು ಮತ್ತು ಅವರ ಆರೋಗ್ಯದ ಮೇಲೆ ಬಹಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ಧನಸ್ಸು** ನೀವು ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳುತ್ತಿರದಿದ್ದಲ್ಲಿ ನಿಮಗೆ ತುಂಬಾ ದಣಿವಾದಂತೆನಿಸುತ್ತದೆ ಮತ್ತು ನಿಮಗೆ ಅಧಿಕ ವಿಶ್ರಾಂತಿ ಬೇಕಾಗುತ್ತದೆ. ಕೆಲಸದ ಸ್ಥಳದಲ್ಲಿ ಅಥವಾ ವ್ಯಾಪಾರದಲ್ಲಿ ನಿಮ್ಮ ಯಾವುದೇ ಅಜಾಗರೂಕತೆ ಇಂದು ನಿಮಗೆ ಆರ್ಥಿಕ ನಷ್ಟವನ್ನು ಉಂಟುಮಾಡಬಹುದು ಇತರರ ವ್ಯವಹಾರಗಳಲ್ಲಿ ನಿಮ್ಮ ಮೂಗುತೂರಿಸುವಿಕೆಯನ್ನು ತಡೆಯಬೇಕು. ನಿಮ್ಮ ಸಂಗಾತಿಯ ಪ್ರೀತಿ

**ಮಕರ** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ.

**ಕುಂಭ** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಸಂಬಂಧಿಕರಿಂದ ಹಣದ ಸಾಲವನ್ನು ತೆಗೆದುಕೊಂಡಿರುವ ಜನರು, ಯಾವುದೇ ಪರಿಸ್ಥಿತಿಯಲ್ಲಿಯೂ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ . ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ.

**ಮೀನ** ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಈ ರಾಶಿಚಕ್ರದ ವಿವಾಹಿತ ಜನರಿಗೆ ಇಂದು ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ. ನಿಮಗೆ ಗೊತ್ತಿದ್ದ ಯಾರಾದರೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಅತಿಯಾಗಿ ಪ್ರತಿಕ್ರಿಯಿಸಬಹುದು.

# ಒಂದೂವರೆ ವರ್ಷದಿಂದ ಬೈಕ್ ಕದಿಯುತ್ತಿದ್ದ ಖದೀಮ ಅಂದರ್: 4.5 ಲಕ್ಷ ಮೌಲ್ಯದ 10 ಬೈಕ್ ಪೊಲೀಸರ ವಶ

• ಉದಯವಾಹಿನಿ ಕಾರಟಗಿ


ಉದಯವಾಹಿನಿ ಚಿತ್ರ

ಗಂಗಾವತಿ ನಗರದಲ್ಲಿ ಕಳೆದ ಒಂದೂವರೆ ವರ್ಷದಿಂದ ಮೋಟಾರ್ ಸೈಕಲ್ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ ಅಂದಾಜು 4.5 ಲಕ್ಷ ಮೌಲ್ಯದ 10 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ದಿನಾಂಕ 28-04-2026 ರಂದು ಬಸಾಪಟ್ಟಣದ ನಿವಾಸಿ ಮಲ್ಲಪ್ಪ ತಂದೆ ಬಸಪ್ಪ ಅವರು ತಮ್ಮ ಮನೆಯಲ್ಲಿ ಕಳ್ಳತನ ನಡೆದ ಬಗ್ಗೆ ಗಂಗಾವತಿ ನಗರ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ಠಾಣಾ ಗುನ್ನೆ ನಂ. 105/2026 ಕಲಂ 303(2) KT ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.ಇತ್ತೀಚೆಗೆ ನಗರದಲ್ಲಿ ಹೆಚ್ಚುತ್ತಿದ್ದ ಬೈಕ್ ಕಳ್ಳತನ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ರಾಮ್ ಎಲ್. ಅರಸಿದ್ದಿ ಅವರ ಸೂಚನೆಯಂತೆ, ಹೆಚ್ಚುವರಿ ಎಸ್ಪಿ ಹೇಮಂತ ಕುಮಾರ MPT ಹಾಗೂ ಜೆ. ನ್ಯಾಮಗೌಡರ ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಪೊಲೀಸ್ ಇನ್ಸ್‌ಪೆಕ್ಟರ್ ಪ್ರಕಾಶ ಮಾಳಿ ನೇತೃತ್ವದ ಈ ತಂಡದಲ್ಲಿ ಮರಿಶಾಂತಗೌಡ, ಫಕ್ಕಿರಪ್ಪ, ಬೀಮಪ್ಪ, ಮೈಲಾರಪ್ಪ, ಗುಂಡಪ್ಪ, ರಾಘವೇಂದ್ರ, ಸುಭಾಷ, ವಿಶ್ವನಾಥ ಸೇರಿದಂತೆ 8 ಸಿಬ್ಬಂದಿ ಇದ್ದರು.ತನಿಖೆ ವೇಳೆ ಸಾಯಿ ನಗರದ ನಿವಾಸಿ, ವೃತ್ತಿಯಲ್ಲಿ ಡ್ರೈವರ್ ಆಗಿರುವ ಪ್ರಕಾಶ ತಂದೆ ಈರಣ್ಣ ತಳವಾರ (41) ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಕೂಲಂಕುಷ ವಿಚಾರಣೆಯಲ್ಲಿ ಆರೋಪಿ ಕಳೆದ ಒಂದೂವರೆ ವರ್ಷದಿಂದ ಒಟ್ಟು 10 ಮೋಟಾರ್ ಸೈಕಲ್‌ಗಳನ್ನು ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಆರೋಪಿಯ ಹೇಳಿಕೆ ಆಧಾರದ ಮೇಲೆ ಕಾರ್ಯಾಚರಣೆ ನಡೆಸಿದ ಪೊಲೀಸರು ಒಟ್ಟು 4,50,000 ಮೌಲ್ಯದ 10 ಬೈಕ್‌ಗಳನ್ನು ಜಪ್ತಿ ಮಾಡಿದ್ದಾರೆ. ಸದ್ಯ ಆರೋಪಿಯನ್ನು ದಸ್ತಗಿರಿ ಮಾಡಲಾಗಿದ್ದು, ಪ್ರಕರಣದ ತನಿಖೆ ಮುಂದುವರೆದಿದೆ.ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿ 10 ಬೈಕ್‌ಗಳನ್ನು ಪತ್ತೆ ಮಾಡಿದ ಪೊಲೀಸ್ ತಂಡದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿರುವ ಕೊಪ್ಪಳ ಜಿಲ್ಲಾ ಎಸ್ಪಿ ಅವರು ತಂಡಕ್ಕೆ ವಿಶೇಷ ಬಹುಮಾನ ಘೋಷಿಸಿದ್ದಾರೆ.

# ಹಳ್ಳಿಗಿಲ್ಲ ಧಣಿ, ಅಧಿಕಾರಿಗಳದ್ದೇ ದರ್ಬಾರು !

• ಉದಯವಾಹಿನಿ, ಬೀದರ್


ಉದಯವಾಹಿನಿ ಚಿತ್ರ

ಪ್ರಜಾಪ್ರಭುತ್ವದ ಅಡಿಪಾಯ ಎಂದೇ ಕರೆಯಲ್ಪಡುವ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಸರ್ಕಾರ ಹಿಂದೇಟು ಹಾಕುತ್ತಿರುವುದು ಈಗ ಹಳ್ಳಿಗಳ ಅಭಿವೃದ್ಧಿಗೆ ಶಾಪವಾಗಿ ಪರಿಣಮಿಸಿದೆ.ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದು ತಿಂಗಳುಗಳೇ ಕಳೆದರೂ ಹೊಸದಾಗಿ ಚುನಾವಣೆ ನಡೆಸದ ಕಾರಣ, ಹಳ್ಳಿಗಳಲ್ಲಿ ಈಗ ಅಧಿಕಾರಿಗಳದ್ದೇ ದರ್ಬಾರು ನಡೆಯುತ್ತಿದೆ. ಕೇಳುವವರಿಲ್ಲದ ಕಾರಣ ಗ್ರಾಮಗಳ ಸಮಸ್ಯೆಗಳು ಕಸದ ಬುಟ್ಟಿ ಸೇರುತ್ತಿವೆ.ಜನರ ಸಮಸ್ಯೆಗೆ ಸ್ಪಂದನೆ ಇಲ್ಲ: ಹಿಂದೆ ಗ್ರಾಮ ಪಂಚಾಯಿತಿ ಸದಸ್ಯರು, ಅಧ್ಯಕ್ಷರು ಇದ್ದಾಗ ಜನರು ತಮ್ಮ ಸಮಸ್ಯೆಗಳನ್ನು ನೇರವಾಗಿ ಅವರ ಮುಂದೆ ಇಟ್ಟು ಪರಿಹಾರ ಕಂಡುಕೊಳ್ಳುತ್ತಿದ್ದರು. ಬೀದಿ ದೀಪಗಳ ದುರಸ್ಥಿ, ಕುಡಿಯುವ ನೀರಿನ ಪೂರೈಕೆ, ಚರಂಡಿ ಸ್ವಚ್ಛತೆ, ರಸ್ತೆ ದುರಸ್ತಿ ಮುಂತಾದ ದೈನಂದಿನ ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳ ಮೇಲೆ ಒತ್ತಡ ಹೇರಬಹುದಾಗಿತ್ತು. ಆದರೆ, ಈಗ ಆಡಳಿತಾಧಿಕಾರಿಗಳ ಕೈಯಲ್ಲಿ ಅಧಿಕಾರ ಕೇಂದ್ರೀಕೃತವಾಗಿರುವುದರಿಂದ, ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆ, ಕುಡಿಯುವ ನೀರ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸಬೇಕಾದ ಗ್ರಾಮ ಪಂಚಾಯಿತಿಗಳು, ಜನಪ್ರತಿನಿಧಿಗಳ ಕೊರತೆಯಿಂದ ಬಿಕೋ ಎನ್ನುವಂತಾಗಿವೆ.ನೇಮಕಗೊಂಡ ಅಧಿಕಾರಿಗಳು ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸುತ್ತಿಲ್ಲ ಎಂಬ ದೂರು ಎಲ್ಲೆಡೆ ಕೇಳಿಬರುತ್ತಿವೆ. ಗ್ರಾಮದ ಸಮಗ್ರ ಅಭಿವೃದ್ಧಿ ನೋಡಬೇಕಾದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡುವುದು ಅಪರೂಪವಾಗಿದ್ದು, ಕೇವಲ ಜಯಂತಿ ಆಚರಣೆಗೆ ಮಾತ್ರ ಸಿಮೀತವಾಗಿದೆ. ಅಧಿಕಾರಿಗಳು ಅಹವಾಲುಗಳಿಗೆ ಸ್ಪಂದನೆ ನೀಡಿದೆ. ಕಡತಗಳನ್ನು ಮುಂದೂಡುವುದು, ತಾಂತ್ರಿಕ ಕಾರಣಗಳನ್ನು ಹೇಳಿ ಕೆಲಸಗಳನ್ನು ವಿಳಂಬ ಮಾಡುವುದು ಸಾಮಾನ್ಯವಾಗಿದೆ. ಇದರಿಂದ ಜನರ ಅಸಮಾಧಾನ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅನುದಾನಕ್ಕೆ ಕತ್ತರಿ: ಕೇಂದ್ರ ಹಣಕಾಸು ಆಯೋಗದ ಮಾರ್ಗಸೂಚಿಗಳ ಪ್ರಕಾರ, ಸ್ಥಳೀಯ ಸಂಸ್ಥೆಗಳಿಗೆ(ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ) ಅನುದಾನ ಬಿಡುಗಡೆ ಮಾಡಲು ಚುನಾಯಿತ ಪ್ರತಿನಿಧಿಗಳ ಮಂಡಳಿ ಅಸ್ತಿತ್ವದಲ್ಲಿರುವುದು ಕಡ್ಡಾಯ. ಕರ್ನಾಟಕದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಅವಧಿ 2021ರಲ್ಲೇ ಮುಗಿದಿದ್ದು, ಕೆಲವು ತಿಂಗಳಿನಿಂದ ಗ್ರಾಮ ಪಂಚಾಯಿತಿಗಳ ಅವಧಿ ಮುಗಿದಿದ್ದು ಚುನಾವಣೆ ನಡೆದಿಲ್ಲ. ಸದ್ಯ ಇವುಗಳ ಆಡಳಿತವು ಅಧಿಕಾರಿಗಳ ವಶದಲ್ಲಿದೆ. ಚುನಾಯಿತ ಮಂಡಳಿ ಇಲ್ಲದ ಕಾರಣ, ಈ ಸಂಸ್ಥೆಗಳನ್ನು ಅನರ್ಹ ಎಂದು ಪರಿಗಣಿಸಿ ಕೇಂದ್ರ ಸರ್ಕಾರವು 2025-26ನೇ ಸಾಲಿನ ಅನುದಾನವನ್ನು ಬಿಡುಗಡೆ ಮಾಡಿಲ್ಲ. ಇತ್ತೀಚಿನ ವರದಿಗಳ ಪ್ರಕಾರ (ಏಪ್ರಿಲ್ 2026), ಚುನಾವಣೆ ನಡೆಯದ ಕಾರಣ ಕರ್ನಾಟಕಕ್ಕೆ ಸುಮಾರು ರೂ.2.133 ಕೋಟಿ ಹಣಕಾಸು ಆಯೋಗದ ಅನುದಾನ ಕೈತಪ್ಪಿದೆ.ಇದರಿಂದ ಗ್ರಾಮೀಣಾಭಿವೃದ್ಧಿ ಕುಂಠಿತವಾದು ರಸ್ತೆ, ಕುಡಿಯುವ ನೀರು ಮತ್ತು ನೈರ್ಮಲ್ಯ ಕಾಮಗಾರಿಗಳಿಗೆ ಹಣದ ಕೊರತೆ ಸೇರಿದಂತೆ ಅನುಮೋದನೆಗೊಂಡಿರುವ ಅನೇಕ ಯೋಜನೆಗಳಿಗೆ ಹಣ ಬಿಡುಗಡೆಯಾಗದ ಕಾರಣ ಕೆಲಸಗಳು ಅರ್ಧಕ್ಕೆ ನಿಂತಿವೆ. ಈ ಎಲ್ಲಾ ಸಮಸ್ಯೆಗಳು ಹಳ್ಳಿಗಳ ಅಭಿವೃದ್ಧಿಯನ್ನು ತಳ್ಳುವ ಭೀತಿಯನ್ನುಂಟುಮಾಡಿವೆ.

### ಚೆಕ್‌ಗಳಿಗೆ ಸಹಿ ಮಾಡುವ ಮಟ್ಟಕ್ಕೆ ಸೀಮಿತ

ಆಡಳಿತ ಅಧಿಕಾರಿಗಳ ಬಗ್ಗೆ ಅಪಸ್ವರ ಸರ್ಕಾರವು ಹಲವಾರು ಗ್ರಾಮ ಪಂಚಾಯಿತಿಗಳಿಗೆ ಆಡಳಿತ ಅಧಿಕಾರಿಗಳನ್ನು ನೇಮಕ ಮಾಡಿದ್ದರೂ, ಶೇ.80 ಕ್ಕೂ ಹೆಚ್ಚು ಪಂಚಾಯಿತಿಗಳಿಗೆ ಅವರು ಒಮ್ಮೆಯೂ ಭೇಟಿ ನೀಡಿಲ್ಲ ಎಂಬ ಆರೋಪ ಕೇಳಿ ಬರುತ್ತಿದೆ. ಕೆಲವರು ಕೇವಲ ಚೆಕ್‌ಗಳಿಗೆ ಸಹಿ ಮಾಡುವ ಮಟ್ಟಕ್ಕೆ ಮಾತ್ರ ಸೀಮಿತವಾಗಿದ್ದಾರೆ. ಅದೂ ಸಹ ತಾಲ್ಲೂಕು ಕೇಂದ್ರದಲ್ಲಿರುವ ತಮ್ಮ ಕಚೇರಿಗಳಿಗೆ ಕರೆಸಿ ಸಹಿ ಮಾಡುವ ಆರೋಪಗಳು ಕೇಳಿಬಂದಿವೆ. ಇನ್ನೂ ಗಂಭೀರ ಸಂಗತಿ ಎಂದರೆ, ತಮ್ಮ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿ ಯಾರು ಎಂಬುದೇ ಗ್ರಾಮಸ್ಥರಿಗೆ ತಿಳಿದಿಲ್ಲ .

### ನ್ಯಾಯಾಲಯದ ಸೂಚನೆ

ರಾಜ್ಯದ ಹೈಕೋರ್ಟ್ ಈಗಾಗಲೇ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಶೀಘ್ರದಲ್ಲಿ ನಡೆಸಬೇಕು ಎಂದು ಸರ್ಕಾರಕ್ಕೆ ಸೂಚನೆ ನೀಡಿದು ಆದರೂ ಚುನಾವಣೆ ನಡೆಸುವ ಆಸಕ್ತಿ ರಾಜ್ಯ ಸರ್ಕಾರ ತೋರಿಸುತ್ತಿಲ್ಲ.

### ಸಾರ್ವಜನಿಕರ ಬೇಡಿಕೆ

ಗ್ರಾಮೀಣ ಭಾಗದ ಜನರು ಈಗ ಒತ್ತಾಯಿಸುತ್ತಿರುವುದು ಒಂದೇ ಒಂದುತಕ್ಷಣ ಗ್ರಾಮ ಪಂಚಾಯಿತಿ ಚುನಾವಣೆ ನಡೆಸಬೇಕು. ಜನಪ್ರತಿನಿಧಿಗಳು ಆಯ್ಕೆಯಾದರೆ ಮಾತ್ರ ಗ್ರಾಮಗಳ ಅಭಿವೃದ್ಧಿಗೆ ವೇಗ ಸಿಗುತ್ತದೆ ಮತ್ತು ಜನರ ಸಮಸ್ಯೆಗಳು ತ್ವರಿತವಾಗಿ ಪರಿಹಾರ ಕಾಣುತ್ತವೆ ಎಂಬುದು ಅವರ ನಿಲುವು.

### ರಾಜಕೀಯ ಲೆಕ್ಕಾಚಾರ

ಶಾಸಕರಿಗೆ ಇಲ್ಲ ಆಸಕ್ತಿ ರಾಜಕೀಯ ವಲಯದಲ್ಲಿ ಕೇಳಿಬರುತ್ತಿರುವ ಮಾತುಗಳ ಪ್ರಕಾರ, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಯಾವ ಪಕ್ಷದ ಶಾಸಕರಿಗೂ ಆಸಕ್ತಿ ಇಲ್ಲ. ಕಾರಣವೇನೆಂದರೆ, ಅಧಿಕಾರದ ವಿಕೇಂದ್ರೀಕರಣದ ಭೀತಿ, ಹೊಸ ಸ್ಥಳೀಯ ನಾಯಕರು ಹುಟ್ಟಿ ಕೊಂಡರೆ ತಮ್ಮ ಪ್ರಭಾವ ಕಡಿಮೆಯಾಗಬಹುದು ಎಂಬ ಆತಂಕ, ಅನುದಾನದ ಮೇಲಿನ ಹಿಡಿತ, ಚುನಾಯಿತ ಪ್ರತಿನಿಧಿಗಳಿಲ್ಲದಿದ್ದರೆ ಅಧಿಕಾರಿಗಳ ಮೂಲಕ ನಿಧಿಗಳನ್ನು ನಿಯಂತ್ರಿಸಲು ಸುಲಭ. ಈ ಎಲ್ಲಾ ಅಂಶಗಳು ಚುನಾವಣೆಯನ್ನು ಮುಂದೂಡುವುದಕ್ಕೆ ಕಾರಣವಾಗಿವೆ ಎಂಬುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ.

**ಗ್ರಾಮ ಪಂಚಾಯಿತಿ ಚುನಾವಣೆ ವಿಳಂಬವಾಗುತ್ತಿರುವುದು ಕೇವಲ ಆಡಳಿತಾತ್ಮಕ ಸಮಸ್ಯೆಯಲ್ಲ. ಅದು ಪ್ರಜಾಪ್ರಭುತ್ವದ ಮೂಲ ಸಿದ್ಧಾಂತಗಳ ಮೇಲಿನ ಸವಾಲಾಗಿದೆ. ಸರ್ಕಾರ ತಕ್ಷಣ ಕ್ರಮ ಕೈಗೊಂಡು ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸಿ, ಗ್ರಾಮೀಣ ಆಡಳಿತಕ್ಕೆ ಪುನರ್ಜೀವ ನೀಡಬೇಕಾಗಿದೆ. ಇಲ್ಲದಿದ್ದರೆ ಹಳ್ಳಿಗಳ ಅಭಿವೃದ್ಧಿ ಕೇವಲ ಕಡತಗಳಲ್ಲಿ ಸೀಮಿತವಾಗಿ, ಜನರ ಬದುಕು ಸಂಕಷ್ಟದಲ್ಲಿ ಸಿಲುಕಿಕೊಳ್ಳುವುದು ಖಚಿತ.**
-ಚೇತನ್ ಸೊರಳ್ಳಿ ರಾಜಕೀಯ ಯುವ ಚಿಂತಕರು ಬೀದರ್

# ಮನೆ ಧ್ವಂಸ: ಗ್ರಾಮಸ್ಥರ ವಿರುದ್ಧ ಪ್ರಕರಣ ದಾಖಲು

• ಉದಯವಾಹಿನಿ, ತರೀಕೆರೆ

ತಾಲ್ಲೂಕಿನ ಯರೇಹಳ್ಳಿ ತಾಂಡ್ಯ ಗ್ರಾಮದಲ್ಲಿ ದೇವಸ್ಥಾನಕ್ಕೆ ಸೇರಿದೆ ಎನ್ನಲಾದ ಜಾಗದಲ್ಲಿ ಕುಟುಂಬವೊಂದು ನಿರ್ಮಿಸಿಕೊಂಡಿದ್ದ ಮನೆಯನ್ನು ಗ್ರಾಮಸ್ಥರು ತೆರವು ಮಾಡಿದ್ದು, ಈ ಸಂಬಂಧ 20 ಜನರ ವಿರುದ್ಧ ದೂರು ದಾಖಲಾಗಿದೆ.'ಈ ಜಾಗದಲ್ಲಿ ಹಲವು ವರ್ಷಗಳಿಂದ ಕುಟುಂಬದೊಂದಿಗೆ ವಾಸವಾಗಿದ್ದೇನೆ. ಈ ಜಾಗ ನಮ್ಮದಾಗಿದ್ದು, ನಮಗೆ ಸೇರಬೇಕು. ಈ ಜಾಗದ ಕುರಿತು ನಾವು ನ್ಯಾಯಾಲಯದಲ್ಲಿ ದಾವೆ ಹೂಡಿದ್ದೇವೆ. ಗ್ರಾಮಸ್ಥರು ನಮ್ಮ ಮನೆಯನ್ನು ಧ್ವಂಸಗೊಳಿಸಿದ್ದಾರೆ' ಎಂದು ರಾಮಾಭೋವಿ ಎಂಬುವರು ತರೀಕೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.'ರಾಮಾಭೋವಿ ವಾಸವಿರುವ ಜಾಗ ದೇವಸ್ಥಾನಕ್ಕೆ ಸೇರಿದ್ದು, ದಾಖಲೆಗಳು ದೇವಸ್ಥಾನದ ಹೆಸರಿನಲ್ಲಿವೆ. ಗ್ರಾಮಸ್ಥರ ಅನುಮತಿ ಮೇರೆಗೆ ಈ ಜಾಗದಲ್ಲಿ ತಾತ್ಕಾಲಿಕವಾಗಿ ಮನೆ ನಿರ್ಮಿಸಿಕೊಂಡು ಕೆಲಕಾಲ ವಾಸವಿರುವುದಾಗಿ ರಾಮಾಭೋವಿ ತಿಳಿಸಿದ್ದರು. ನಂತರದ ದಿನಗಳಲ್ಲಿ ಜಾಗ ಖಾಲಿ ಮಾಡಲು ಒಪ್ಪಿರಲಿಲ್ಲ. ಈ ಜಾಗವನ್ನು ನಮಗೇ ದಾಖಲೆ ಮಾಡಿಕೊಡಬೇಕೆಂದು ಗ್ರಾಮ ಪಂಚಾಯಿತಿಗೆ ಅರ್ಜಿ ಕೂಡ ಸಲ್ಲಿಸಿದ್ದರು. ಮಾಹಿತಿ ತಿಳಿದ ಗ್ರಾಮಸ್ಥರು ಇದನ್ನು ವಿರೋಧಿಸಿ ಜಾಗವನ್ನು ತೆರವು ಗೊಳಿಸಿದ್ದಾರೆ' ಎಂದು ಗ್ರಾಮಸ್ಥರಾದ ನಾರಾಯಣ ಭೋವಿ, ರೇಣುಕುಮಾರ್ ತಿಳಿಸಿದರು.

# ಭದ್ರಾ ನೀರಿಲ್ಲದೆ ಒಣಗಿದ ಭತ್ತ...

**ಕಡರನಾಯ್ಕನಹಳ್ಳಿ:** ಭದ್ರಾ ಅಚ್ಚುಕಟ್ಟು ಪ್ರದೇಶದ ಕೊನೆ ಭಾಗದ ಕೆಲವು ಕಡೆ ಬೇಸಿಗೆ ಹಂಗಾಮಿನಲ್ಲಿ ಒಂದು ಹನಿಯೂ ನೀರು ತಲುಪದ್ದರಿಂದ ಜಮೀನುಗಳು ಬೀಳು ಬಿದ್ದಿವೆ. ತಮ್ಮ ಭೂಮಿಗೆ ನೀರು ಸಿಗಲಿದೆ ಎಂಬ ಭರವಸೆಯಲ್ಲಿ ಭತ್ತ ನಾಟಿ ಮಾಡಿದ್ದ ಒಂದಿಷ್ಟು ರೈತರು ಈಗ ಜೀವಜಲ ಸಿಗದೆ ಪರಿತಪಿಸುವಂತಾಗಿದೆ. ಕಾಳು ಕಟ್ಟುತ್ತಿರುವ ಭತ್ತದ ಪೈರು ರಣ ಬಿಸಿಲಿನಿಂದಾಗಿ ಒಣಗುತ್ತಿದೆ.ಭದ್ರಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಗೆ ಒಳಪಡುವ ಹರಿಹರ ತಾಲ್ಲೂಕಿನ ಭಾನುವಳ್ಳಿ ಗ್ರಾಮದ 11ನೇ ನಾಲೆಯಿಂದ 10 ದಿನದ ಸರದಿಯಂತೆ ನೀರು ಸರಬರಾಜು ಆಗಬೇಕಿತ್ತು. ಆದರೆ ವಿಳಂಬ ಮತ್ತು ಅಸಮರ್ಪಕ ನೀರು ಸರಬರಾಜಿನ ಕಾರಣ ಗದ್ದೆಗಳು ಒಣಗಿವೆ ಎಂದು ರೈತರು ದೂರಿದರು.'ಕಾಳು ಕಟ್ಟುವ ಹಂತದಲ್ಲಿ ನೀರು ಇಲ್ಲದಿದ್ದರೆ ಬೆಳೆ ಕೈಗೆ ಸಿಗುವುದಿಲ್ಲ. ಎಕರೆಗೆ 25 ಸಾವಿರದಿಂದ 35 ಸಾವಿರ ಖರ್ಚಾಗುತ್ತದೆ. ಫಸಲು ರೈತರ ಕೈಸೇರದಿದ್ದರೆ ಸಾಲದ ಸುಳಿಯಲ್ಲಿ ಸಿಲುಕುತ್ತಾರೆ' ಎಂದು ಅಳಲು ತೋಡಿಕೊಂಡರು.

# ರೈತರ ಕಬ್ಬು ಖರೀದಿಸಿದ ಸಕ್ಕರೆ ಕಾರ್ಖಾನೆಯು ಬಾಕಿ ಹಣ ಪಾವತಿಸಲು ಮನವಿ

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ಪಟ್ಟಣದ ಸಿದ್ದಸಿರಿ ಎಥೆನಾಲ್ ಕಾರ್ಖಾನೆಯು ಚಿಂಚೋಳಿ ಮತ್ತು ಕಾಳಗಿ ತಾಲ್ಲೂಕಿನ ರೈತರು ಬೆಳೆದ ಕಬ್ಬು ಖರೀದಿಸಿ ಒಮ್ಮೆ 2500 ರೂಪಾಯಿ ಮತ್ತು ಒಮ್ಮೆ 150 ರೂಪಾಯಿ ರೈತರಿಗೆ ಪಾವತಿ ಮಾಡಲಾಗಿದ್ದು ಇನ್ನೂಳಿದ 250 ರೂಪಾಯಿ ಪಾವತಿ ಮಾಡವಂತೆ ಸೊಮವಾರ ತಹಸೀಲ್ ಕಛೇರಿ ಎದುರು ತಾಲ್ಲೂಕ ರೈತ ಹಿತರಕ್ಷಣಾ ಸಮಿತಿ ವತಿಯಿಂದ ತಹಸೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ರೈತರು ಬಾಕಿ ಉಳಿದಿರುವ ಹಣ ಕೇಳಿದರೆ ಕಾರ್ಖಾನೆಯವರು ಹರಕೆ ಉತ್ತರ ಕೋಡುತ್ತಿದ್ದಾರೆ,ಕಲಬುರ್ಗಿ ಜಿಲ್ಲೆಯಲ್ಲಿರುವ ಎಲ್ಲಾ ಕಾರ್ಖಾನೆಯವರು ಸರ್ಕಾರ ನಿಗಧಿ ಪಡಿಸಿದ ಹಣ ರೈತರಿಗೆ ಪಾವತಿ ಮಾಡಲಾಗಿದೆ,ಆದರೆ ಚಿಂಚೋಳಿ ಕಾರ್ಖಾನೆಯು ರೈತರ ಇನ್ನೂಳಿದ ಹಣ ಪಾವತಿ ಮಾಡದೆ ಕಳೆದ ಆರು ತಿಂಗಳಿಂದ ರೈತರಿಗೆ ಅಲೆದಾಡಿಸುತ್ತಿದ್ದಾರೆ,ಜಿಲ್ಲಾದಿಕಾರಿಗಳು ಕಾರ್ಖಾನೆ ಮುಖ್ಯಸ್ಥರೋಂದಿಗೆ ಸಮಲೋಚನೆ ನಡೆಸಿ ರೈತರ ಹಣ ಒಂದು ವಾರದಲ್ಲಿ ಪಾವತಿ ಮಾಡಬೇಕು. ವಾರದಲ್ಲಿ ಉಳಿದ ರೈತರ ಹಣ ಪಾವತಿ ಮಾಡದೆ ಇದ್ದಲ್ಲಿ ಸಿದ್ದಸಿರಿ ಎಥೆನಾಲ್ ಕಾರ್ಖಾನೆ ಎದುರು ಧರಣಿಯೋಂದಿಗೆ ಉಗ್ರ ಹೋರಾಟ ಮಾಡಲಾಗುವುದು,ಈ ಕೂಡಲೇ ಸಿದ್ದಸಿರಿ ಕಂಪನಿಯೋಂದಿಗೆ ಮಾತನಾಡಿ ಶೀಘ್ರದಲ್ಲೇ ರೈತರ ಹಣ ಪಾವತಿ ಮಾಡಬೇಕು ಎಂದು ಸಮಿತಿ ಅಧ್ಯಕ್ಷ ಅಬ್ದುಲ್ ಬಾಷೀದ್,ಮತ್ತು ಲಕ್ಷ್ಮಣ ಆವುಂಟಿ ಒತ್ತಾಯಿಸಿದರು. ಪ್ರಮುಖರು: ಸುಭಾಷ್ಚಂದ್ರ ಪಾಟೀಲ್ ಬಸವರಾಜ ಕಡಬೂರ್,ಸಿದ್ದು ತಿರಲಾಪೂರ,ನಾಗೇಶ ಗುಣಾಜೀ,ಖಲೀಲ್ ಪಟೇಲ್,ರಾಜು ನವಲೇ ಅನೇಕರಿದ್ದರು.

# ಆಟೊ ರಿಕ್ಷಾದಲ್ಲಿದ್ದ 15 ಮೂಟೆ ಪಡಿತರ ಅಕ್ಕಿ ವಶ

• ಉದಯವಾಹಿನಿ, ವಿಟ್ಲ

ಬಂಟ್ವಾಳ ತಾಲ್ಲೂಕಿನ ವಿಟ್ಲ ಕಸಬಾ ಗ್ರಾಮದ ಶಿವಾಜಿ ನಗರದಲ್ಲಿ ಆಟೋರಿಕ್ಷಾದಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ಪಡಿತರ ಅಕ್ಕಿಯನ್ನು ಆಹಾರ ಮತ್ತು ನಾಗರಿಕ ಪೂರೈಕೆಯ ಇಲಾಖೆ ಅಧಿಕಾರಿಗಳು ಪೊಲೀಸರ ನೆರವಿನಿಂದ ವಶಕ್ಕೆ ಪಡೆದಿದ್ದಾರೆ. ಶಿವಾಜಿ ನಗರದ ನಿವಾಸಿ ಅಲಿ ಅಕ್ಟರ್ (40) ಪಡಿತರ ಅಕ್ಕಿ ಅಕ್ರಮವಾಗಿ ದಾಸ್ತಾನು ಮಾಡಿದ ಆರೋಪಿ. ಆತನ ವಿರುದ್ಧ ವಿಟ್ಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಶಿವಾಜಿ ನಗರದಲ್ಲಿ ಆಟೋರಿಕ್ಷಾವೊಂದರಲ್ಲಿ ಪಡಿತರ ಅಕ್ಕಿಯನ್ನು ತುಂಬಿಸಿರುವ ಬಗ್ಗೆ ಬಂಟ್ವಾಳ ತಾಲ್ಲೂಕಿನ ಆಹಾರ ನಿರೀಕ್ಷಕ ಎ.ಪ್ರಶಾಂತ ಶೆಟ್ಟಿ ಅವರಿಗೆ ಶನಿವಾರ ಬೆಳಿಗ್ಗೆ ಮಾಹಿತಿ ಬಂದಿತ್ತು.

ಅವರು ಕಚೇರಿ ಸಿಬ್ಬಂದಿ ಹಾಗೂ ವಿಟ್ಲ ಪೊಲೀಸ್ ಠಾಣೆಯ ಪಿಎಸ್‌ಐ ರಾಮಕೃಷ್ಣ ಮತ್ತು ಪೊಲೀಸ್ ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದರು. ಅಲ್ಲಿನ ಮನೆಯೊಂದರ ಅಂಗಳದಲ್ಲಿ ನಿಲ್ಲಿಸಿದ್ದ ಆಟೋರಿಕ್ಷಾದಲ್ಲಿ 15 ಚೀಲಗಳಲ್ಲಿ ಪಡಿತರ ಅಕ್ಕಿಯನ್ನು ತುಂಬಿಸಿಟ್ಟಿರುವುದು ಕಂಡುಬಂದಿತ್ತು. ಸ್ಥಳದಲ್ಲಿದ್ದ ಆರೋಪಿ ವಿಟ್ಲ ಕಸಬಾ ಗ್ರಾಮದ ನಿವಾಸಿ ಅಲಿ ಅಕ್ಟರ್ ಬಳಿ ಈ ಬಗ್ಗೆ ವಿಚಾರಿಸಿದಾಗ, ಅಕ್ಕಿ ಮೂಟೆಗಳನ್ನು ತಾನೇ ಅಕ್ರಮವಾಗಿ ದಾಸ್ತಾನು ಮಾಡಿರುವುದಾಗಿ ಆತ ಒಪ್ಪಿಕೊಂಡಿದ್ದ. ಆ 15 ಅಕ್ಕಿ ಮೂಟೆಗಳಲ್ಲಿ ಒಟ್ಟು 679.38 ಕೆ.ಜಿ ತೂಕದ ಪಡಿತರ ಅಕ್ಕಿ ಪತ್ತೆಯಾಗಿದೆ. ಅದರ ಮೌಲ್ಯ 23,098. ಈ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

### ಬೀದರ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಧು-ವರರು ಅಂಬೇಡ್ಕರ್ ಪ್ರತಿಮೆಯ ಸನ್ನಿಧಿಯಲ್ಲಿ ವಿವಾಹ ಪ್ರತಿಜ್ಞೆ

# ಬೀದರ್‌ನಲ್ಲಿ ಅಪರೂಪದ ಆದರ್ಶಪ್ರಾಯ ವೈಚಾರಿಕ ವಿವಾಹ

• ಉದಯವಾಹಿನಿ, ಬೀದರ್



ಉದಯವಾಹಿನಿ ಚಿತ್ರ

ಜಿಲ್ಲೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಅಪರೂಪದ ಹಾಗೂ ಆದರ್ಶಪ್ರಾಯ ವಿವಾಹವೊಂದು ಜರುಗಿದ್ದು, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರತತ್ವ-ಸಿದ್ಧಾಂ ತಗಳ ಅನುಯಾಯಿಗಳಾದ ನವ ಜೋಡಿ ಸಿದ್ಧಾರ್ಥ ಮತ್ತು ಸಂಜೀವನಿ ಅವರು ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ. ಕೇವಲ ಶಾಸ್ತ್ರಗಳಿಗೆ ಸೀಮಿತವಾಗದೆ, ಸಾಮಾಜಿಕ ಬದ್ಧತೆಯೊಂದಿಗೆ ದಾಂಪತ್ಯ ಜೀವನಕ್ಕೆ ಬಾಬಾ ಕಾಲಿಡಲು ಬಯಸಿದ ಈ ಜೋಡಿ, ನಗರದ ಡಾ.ಅಂಬೇಡ್ಕರ್ ವೃತ್ತದಲ್ಲಿರುವ ಸಾಹೇಬರ ಪ್ರತಿಮೆಯ ಮುಂದೆ ಪ್ರತಿಜ್ಞೆ ಸ್ವೀಕರಿಸಿ, ಪ್ರಾರ್ಥನೆ ಸಲ್ಲಿಸುವ ಮೂಲಕ ಸಮಾಜದ ಗಮನ ಸೆಳೆದಿದ್ದಾರೆ.

ವಧು-ವರರು ಬೀದರಿನ ಗುಂಪಾ ಬಡಾವಣೆಯಲ್ಲಿವರಾಗಿದ್ದು ವಧು ಸಂಜೀವನಿ ಅವರು ಕೆಂಪು-ಬಿಳಿ ಸೀರೆಯಲ್ಲಿ ಕಂಗೊಳಿಸಿ ದರೆ, ವರ ಸಿದ್ಧಾರ್ಥ ಅವರು ಸಾಂಪ್ರದಾಯಿಕ ಪಂಚೆ-ಶಲ್ಯ ಧರಿಸಿ ಬೀದರ್ ನಗರದ ಡಾ.ಅಂಬೇಡ್ಕರ್ ಪ್ರತಿಮೆ ಮುಂದೆ ಭಾನುವಾರ ಪ್ರತಿಜ್ಞೆ ಸ್ವೀಕರಿಸಿದ ನವ ಜೋಡಿ ಕೈ ಮುಗಿದು ನಿಂತು ಪ್ರತಿಜ್ಞೆ ಸ್ವೀಕರಿಸಿದ ದೃಶ್ಯವು ನೆರೆದಿದ್ದವರಲ್ಲಿ ಭಕ್ತಿ ಮತ್ತು ಹೆಮ್ಮೆಯನ್ನು ಮೂಡಿಸಿತು.ವರ ಸಿದ್ಧಾರ್ಥ ಹೈದ್ರಾಬಾದಿನ ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದರೆ, ವಧು ಸಂಜೀವನಿ ಬಿಎಸ್ಸಿ ಪದವಿಧರರಾಗಿದ್ದಾರೆ. ಈ ಜೋಡಿ ಯುವ ಪೀಳಿಗೆಗೆ ಒಂದು ಉತ್ತಮ ಸಂದೇಶ ನೀಡಿದ್ದಾರೆ ಎಂದರೂ ತಪ್ಪಾಗಲಾರದು.ಕಾರ್ಯಕ್ರಮದಲ್ಲಿ ಕುಟುಂಬಸ್ಥರಾದ ಸುರೇಶ್ ಶಿಂಧೆ, ಶ್ರೇಯಾಬ್ಯಾನರ್, ವಿಹಾನ್ ಸೇರಿದಂತೆ ಆಪ್ತರು ಮತ್ತು ಹಿತೈಷಿಗಳು ಭಾಗವಹಿಸಿ, ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು. ಬೀದರ್‌ನಗರದ ಹೃದಯ ಭಾಗದಲ್ಲಿ ನಡೆದ ಈ ಪ್ರಪ್ರಥಮ ವಿವಾಹ ಪ್ರತಿಜ್ಞಾ ಕಾರ್ಯಕ್ರಮವು ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿದ್ದು, ಅರ್ಥಪೂರ್ಣ ಬದುಕಿಗೆ ಹೊಸ ಮುನ್ನುಡಿ ಬರೆದಿದೆ.

### ಅರ್ಥಪೂರ್ಣ ಮಾದರಿ ವಿವಾಹ

ಈ ಅರ್ಥಪೂರ್ಣ ವಿವಾಹವು ಬೌದ್ಧ ಧರ್ಮದ ರೀತಿ-ನೀತಿಗಳ ಅನ್ವಯ ನಡೆದಿದ್ದು, ವಧು-ವರರು ಡಾ.ಅಂಬೇಡ್ಕರ್ ಅವರ ಜೀವ ನ ಸಂದೇಶ ಹಾಗೂ ಸಂವಿಧಾನದ ಆಶಯಗಳನ್ನು ತಮ್ಮ ದಾಂಪತ್ಯದಲ್ಲಿ ಅಳವಡಿಸಿಕೊಳ್ಳುವ ದೃಢ ಸಂಕಲ್ಪ ಮಾಡಿರುವುದು ರಾಜ್ಯದ ಯುವ ನವ ಜೋಡಿಗಳಿಗೆ ಮಾದರಿಯಾಗಿದೆ.

**ಮಹಾಪುರುಷರ ತತ್ವಗಳನ್ನು ಮೈಗೂಡಿಸಿಕೊಂಡು ಬದುಕಲು ನಿರ್ಧರಿಸಿದ ಈ ನವಜೋಡಿಯ ನಡೆ ಇಂದಿನ ಯುವ ಪೀಳಿಗೆಗೆ ದೊಡ್ಡ ಮಾದರಿಯಾಗಿದೆ. ಸಂಪ್ರದಾಯದ ಆಡಂಬರಕ್ಕಿಂತ ವೈಚಾರಿಕ ನಿಲುವುಗಳು ಮುಖ್ಯ ಎಂಬುದನ್ನು ಈ ವಿವಾಹ ಸಾಬೀತುಪಡಿಸುತ್ತದೆ.**
-ಡಾ.ರಾಜ್‌ಕುಮಾರ್ ಬನ್ನೆರ್ ಬ್ರಿಮ್ಸ್ ವೈದ್ಯರು ಬೀದರ್

# ರಸ್ತೆ ಬದಿ ಕಸ ಎಸೆದರೆ ಕ್ರಮ: ಗ್ರಾ.ಪಂ ಎಚ್ಚರಿಕೆ

• ಉದಯವಾಹಿನಿ, ಶಿರಸಿ

ಶಿರಸಿ-ಯಲ್ಲಾಪುರ ಮಾರ್ಗದಲ್ಲಿ ನಗರದಂಚಿನ ದೇವಿನಿಲಯ ಹಾಗೂ ಹೊಸ್ಮನೆ ಭಾಗದ ಸುತ್ತಮುತ್ತಲಿನ ರಸ್ತೆ ಬದಿಗಳಲ್ಲಿ ಸಾರ್ವಜನಿಕರು ಕಸ ಎಸೆಯುತ್ತಿರುವುದರಿಂದ ಪರಿಸರ ಹದಗೆಟ್ಟಿದ್ದು, ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವ ಇಸಳೂರು ಗ್ರಾಮ ಪಂಚಾಯಿತಿಯು ಕಸ ವಿಲೇವಾರಿ ಮಾಡುವ ಮೂಲಕ ಸ್ವಚ್ಛತಾ ಕಾರ್ಯಕ್ಕೆ ಮುಂದಾಗಿದೆ.

ಕಳೆದ ಕೆಲವು ದಿನಗಳಿಂದ ಈ ಮಾರ್ಗದ ರಸ್ತೆ ಬದಿಗಳಲ್ಲಿ ಕಸದ ರಾಶಿಗಳು ಸಂಗ್ರಹಗೊಂಡು ಗಬ್ಬು ನಾರುತ್ತಿತ್ತು. ಇದರಿಂದ ಈ ಭಾಗದಲ್ಲಿ ಸಂಚರಿಸುವ ವಾಹನ ಸವಾರರಿಗೆ ಹಾಗೂ ಸ್ಥಳೀಯ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿತ್ತು. ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯೂ ಎದುರಾಗಿತ್ತು. ಸಾರ್ವಜನಿಕರ ದೂರು ಹಾಗೂ ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಪಂಚಾಯಿತಿ ಸಿಬ್ಬಂದಿ ಗುರುವಾರ ಸ್ಥಳಕ್ಕೆ ಭೇಟಿ ನೀಡಿ, ರಸ್ತೆ ಬದಿಯಲ್ಲಿದ್ದ ಪ್ಲಾಸ್ಟಿಕ್ ಹಾಗೂ ಇತರ ತ್ಯಾಜ್ಯಗಳನ್ನು ಸಂಪೂರ್ಣವಾಗಿ ತೆರವುಗೊಳಿಸಿ ಸ್ವಚ್ಛಗೊಳಿಸಿದರು.ಈ ಕುರಿತು ಪ್ರತಿಕ್ರಿಯಿಸಿರುವ ಪಿಡಿಒ ಜಯವೀರ ಭಟ್, 'ಸಾರ್ವಜನಿಕರು ತಮ್ಮ ಮನೆ ಹಾಗೂ ಉದ್ದಿಮೆಗಳ ಕಸವನ್ನು ಜವಾಬ್ದಾರಿಯುತವಾಗಿ ವಿಲೇವಾರಿ ಮಾಡಬೇಕು. ರಸ್ತೆ ಬದಿಯಲ್ಲಿ ಕಸ ಬಿಸಾಡುವುದರಿಂದ ಪರಿಸರ ಮಾಲಿನ್ಯವಾಗುವುದಲ್ಲದೆ, ಸಾರ್ವಜನಿಕ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಗ್ರಾಮ ಪಂಚಾಯಿತಿ ವತಿಯಿಂದ ಸ್ವಚ್ಛತೆಗೆ ಆದ್ಯತೆ ನೀಡಲಾಗುತ್ತಿದ್ದು, ಸಾರ್ವಜನಿಕರು ಇದಕ್ಕೆ ಸಹಕರಿಸಬೇಕು' ಎಂದು ಮನವಿ ಮಾಡಿದರು.ಇದೇ ವೇಳೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ ಅವರು, 'ಇನ್ಮುಂದೆ ಯಾರಾದರೂ ರಸ್ತೆ ಬದಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಕಸ ಬಿಸಾಡುವುದು ಕಂಡುಬಂದಲ್ಲಿ ಅಂತಹವರ ವಿರುದ್ಧ ಗ್ರಾಮ ಪಂಚಾಯಿತಿ ವತಿಯಿಂದ ದಂಡ ವಿಧಿಸುವುದರ ಜತೆಗೆ ಕಾನೂನು ಕ್ರಮ ಕೈಗೊಳ್ಳಲಾಗುವುದು.

# ಜಗಳೂರು ತಾಲ್ಲೂಕಿನಲ್ಲಿ ಕ್ಷೀಣಿಸುತ್ತಿದೆ ಅಂತರ್ಜಲ

• ಉದಯವಾಹಿನಿ, ಜಗಳೂರು


ಉದಯವಾಹಿನಿ ಚಿತ್ರ

ಕಾದು ಕಾವಲಿಯಂತಾದ ಭೂಮಿಯಲ್ಲಿ ಅಂತರ್ಜಲ ಕ್ಷೀಣಿಸುತ್ತಿದ್ದರೆ ಮತ್ತೊಂದೆಡೆ ಅಡಕೆ ತೋಟ ಉಳಿಸಿಕೊಳ್ಳಲು ರೈತರು ಅಂತರ್ಜಲ ಶೋಧನೆಗಾಗಿ ಒಡವೆ, ಬಂಗಾರ ಮಾರಾಟ ಮಾಡಿ ಇಲ್ಲವೇ ಗಿರವಿ ಇಟ್ಟು ಬೋರ್‌ವೆಲ್ ಕೊರೆಸುತ್ತಿದ್ದಾರೆ.ಈ ನಡುವೆ ಬರವನ್ನೇ ಬಂಡವಾಳ ಮಾಡಿಕೊಂಡ ಬೋರ್‌ವೆಲ್ ಲಾರಿಗಳ ಮಾಲೀಕರು, ಏಜೆಂಟರು ರೈತರ ಬದುಕಿಗೆ ಬರೆ ಎಳೆಯುತ್ತಿದ್ದಾರೆ!ಜಗಳೂರು ತಾಲೂಕಿನ ಬಹುತೇಕ ಗ್ರಾಮದಲ್ಲಿಈಗ ಎಲ್ಲಿ ನೋಡಿದರೂ ಬೋರ್‌ವೆಲ್ ಕೊರೆಯುವ ಲಾರಿಗಳು ಸದ್ದು ಮಾಡುತ್ತಿವೆ. ಭೂಮಿ ಗುದ್ದಿ, ನೀರು ತೆಗೆಯುವ ಕೆಲಸವನ್ನು ಬೋರ್‌ವೆಲ್ ಲಾರಿಗಳು ಮಾಡುತ್ತಿದ್ದರೆ, ಅಡಕೆ ತೋಟ ಉಳಿವಿಗೆ ಶತಾಯ ಗತಾಯ ಪಣತೊಟ್ಟ ರೈತ ಹೆಂಡತಿ, ಮಕ್ಕಳ ಬಂಗಾರವನ್ನು ಬ್ಯಾಂಕ್ ಅಥವಾ ಖಾಸಗಿ ಫೈನಾನ್ಸ್ ಕಂಪನಿಗಳಲ್ಲಿ ಅಡವಿಟ್ಟು ಬೋರ್‌ವೆಲ್ ಕೊರೆಸಲು ಹಣ ಹೊಂದಿಸುತ್ತಿದ್ದಾರೆ.ಏಜೆಂಟರ್‌ರಿಂದ ಲೂಟಿ!ಕಳೆದ ಎರಡು ವರ್ಷಗಳಿಂದ ಉತ್ತಮ ಬೆಲೆಗೆ ಅಡಕೆ ಮಾರಾಟ ಮಾಡಿ ಗಳಿಸಿದ ಹಣದಲ್ಲಿ ರೈತರು, ಹೆಂಡತಿ, ಮಕ್ಕಳಿಗೆ ಬಂಗಾರ ಒಡವೆ ಮಾಡಿಸಿದ್ದರು. ಈಗ ಅದೇ ಒಡವೆಗಳನ್ನು ಅಡವಿರಿಸಿ, ಮಾರಾಟ ಮಾಡಿ ಬೋರ್‌ವೆಲ್ ಕೊರೆಸುವ ಆಪತ್ತು ಬಂದಿದೆ. ಆದರೆ, ಬೋರ್‌ವೆಲ್ ಏಜೆಂಟರು ಮತ್ತು ಮಾಲೀಕರು ಇರಾನ್-ಅಮೆರಿಕ ಯುದ್ಧದ ನೆಪ ಹೇಳುತ್ತಾ 'ಡೀಸೆಲ್-ಪೆಟ್ರೋಲ್ ದುಬಾರಿಯಾಗಿದೆ. ಬೋರ್‌ವೆಲ್ ಪಾಯಿಂಟ್‌ಗಳಲ್ಲಿ ಗಟ್ಟಿಕಲ್ಲುಗಳು ಬರುತ್ತಿದ್ದು, ಕೊರೆಯುವುದು ಕಷ್ಟವಾಗುತ್ತದೆ. 25 ನಿಮಿಷಗಳಿಗೆ ಒಂದು ಕಬ್ಬಿಣದ ರಾಡ್ ನೆಲ ಕೊರೆದರೆ ಡೀಸೆಲ್ ಎರಡು ಪಟ್ಟು ಖರ್ಚಾಗುತ್ತದೆ.

### ರೈತರಿಂದ ಮನ ಬಂದಂತೆ ಹಣ ವಸೂಲಿ

ಬೋರ್‌ವೆಲ್ ಲಾರಿ ಮಾಲೀಕರು ರೈತರಿಂದ ಮನ ಬಂದಂತೆ ಹಣ ವಸೂಲಿ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅವರ ಅಧ್ಯಕ್ಷತೆಯಲ್ಲಿರೈತರು ಮತ್ತು ಬೋರ್‌ವೆಲ್ ಲಾರಿಗಳ ಮಾಲೀಕರ ಸಭೆ ನಡೆಸಿ, ರೈತರಿಗೆ ಹೊರೆಯಾಗದಂತೆ ನ್ಯಾಯಯುತ ದರ ನಿಗದಿ ಮಾಡಬೇಕು. ಇಲ್ಲದಿದ್ದರೆ ರೈತರು, ಮನೆ, ಜಮೀನು ಮಾರಾಟ ಮಾಡಿ ಗುಳೆ ಹೋಗುವ ಸ್ಥಿತಿ ಬಂದರು ಆಶ್ಚರ್ಯವಿಲ್ಲ' ಎಂದು ಪ್ರಗತಿಪರ ರೈತ ಮೆದಗಿನಕೆರೆ ಮಂಜುನಾಥ್, ಕಟ್ಟಿಗೆಹಳ್ಳಿ ನಾಗರಾಜ್ ಸೇರಿ ಹಲವು ರೈತರು ಆಗ್ರಹಿಸಿದ್ದಾರೆ.

**ಇರಾನ್-ಅಮೆರಿಕ ಯುದ್ಧದ ನೆಪ ಹೇಳುತ್ತಾ 'ಡೀಸೆಲ್ -ಪೆಟ್ರೋಲ್ ದುಬಾರಿ**

# ಪುರಾಣ ಮಂಗಲ ಕಾರ್ಯಕ್ರಮ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಕಾರಟಗಿ

ತಾಲೂಕಿನ ಬೂದಗುಂಪ, ಮೇ 11: ದಿನಾಂಕ 9.05.2026 ರಂದು ಬೂದಗುಂಪ-ತಿಮ್ಮಾಪುರ-ಹಾಲಸಮುದ್ರದ ಈ ತ್ರಿವಳಿ ಗ್ರಾಮಗಳ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಶಾಖಾ ವಿರಕ್ತ ಮಠದಲ್ಲಿ ಆಯೋಜಿಸಿದ್ದ ಹಾನಗಲ್ ಶ್ರೀ ಕುಮಾರ ಮಹಾಶಿವಯೋಗಿಗಳವರ ಪುರಾಣ ಮಂಗಲ ಕಾರ್ಯಕ್ರಮ ಅತ್ಯಂತ ವಿಜೃಂಭಣೆಯಿಂದ ನಡೆಯಿತು.ಈ ಪಾವನ ಕಾರ್ಯಕ್ರಮದಲ್ಲಿ ನ್ಯಾಷನಲ್ ಪ್ರಾಥಮಿಕ ಮತ್ತು ಗ್ರೀನ್ ವ್ಯಾಲಿ ರೂರಲ್ ಪ್ರೌಢಶಾಲೆಯ ಸಂಸ್ಥಾಪಕರಾದ ಶ್ರೀ ಕೆ. ವೆಂಕಟರಾವ್ ಅವರು ಭಾಗವಹಿಸಿದ್ದರು. ಶ್ರೀ ಶಾಂತಿನಿಕೇತನ ಪಬ್ಲಿಕ್ ಶಾಲೆಯ ಸಂಸ್ಥಾಪಕ ಶರಣಪ್ಪ ಅಂಗಡಿ, ಗ್ಲೋಬಲ್ ಪಬ್ಲಿಕ್ ಶಾಲೆಯ ಅರುಣ್ ಬಾಬು ಕೋರಿಪಲ್ಲಿ, ಮತ್ತು ಸಂತೋಷ್ ಕುಮಾರ್ ಯರಕಲ್ ಭಾಗವಹಿಸಿದ್ದರು, ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಶ್ರೀಮನ್ನಿರಂಜನ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳವರು, ಶಿಕ್ಷಣ ಕ್ಷೇತ್ರಕ್ಕೆ ಕೆ. ವೆಂಕಟರಾವ್ ಅವರು ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ ಅವರನ್ನು ಆಶೀರ್ವದಿಸಿ ಸನ್ಮಾನಿಸಿದರು.ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಶಾಲೆಗಳನ್ನು ಸ್ಥಾಪಿಸಿ ಶೈಕ್ಷಣಿಕ ಸೇವೆ ಸಲ್ಲಿಸುತ್ತಿರುವ ಕೆ. ವೆಂಕಟರಾವ್ ಅವರ ಕಾರ್ಯವನ್ನು ಶ್ರೀಗಳು ಈ ಸಂದರ್ಭದಲ್ಲಿ ಶ್ಲಾಘಿಸಿದರು. ಪುರಾಣ ಮಂಗಲ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು, ಮಠದ ಸದ್ಭಕ್ತರು ಹಾಗೂ ಗಣ್ಯರು ಭಾಗವಹಿಸಿದ್ದರು.

# ಜಿ ರಾಮ್ ಜಿ ಕಾಯಿದೆ ಜು.1 ರಿಂದ ಜಾರಿ; ಗ್ರಾಮೀಣ ಕುಟುಂಬಗಳಿಗೆ ವರ್ಷಕ್ಕೆ 125 ದಿನಗಳ ಖಾತರಿ ಉದ್ಯೋಗ- ಕೇಂದ್ರ ಅಧಿಸೂಚನೆ

**ಭೋಪಾಲ್(ಮಧ್ಯಪ್ರದೇಶ):** ಕೇಂದ್ರ ಸರ್ಕಾರ ವಿಕ್ಷಿತ್ ಭಾರತ್-ಜಿ ರಾಮ್ ಜಿ ಕಾಯ್ದೆ-2025ಕ್ಕೆ ಅಧಿಸೂಚನೆ ಹೊರಡಿಸಿದೆ. ಇದರಡಿಯಲ್ಲಿ ಜುಲೈ 1ರಿಂದ ಗ್ರಾಮೀಣ ಕುಟುಂಬಗಳಿಗೆ ವರ್ಷಕ್ಕೆ 125 ದಿನಗಳ ಖಾತರಿ ಉದ್ಯೋಗ ದೊರೆಯಲಿದೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಹಾಗು ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಭೋಪಾಲ್‌ನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಅಧಿಕೃತವಾಗಿ ವಿಕ್ಷಿತ್ ಭಾರತ್-ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್-ಗ್ರಾಮೀಣ (ವಿಬಿ-ಜಿ ರಾಮ್ ಜಿ) ಕಾಯ್ದೆ ಎಂದು ಹೆಸರಿಸಲಾದ ಹೊಸ ಕಾಯ್ದೆಯು ವಿಕ್ಷಿತ್ ಭಾರತ್ ದೃಷ್ಟಿಕೋನದಡಿ ಸದ್ಯ ಅಸ್ತಿತ್ವದಲ್ಲಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ಎಂಜಿಎನ್‌ಆರ್ ಇಜಿಎ) ಚೌಕಟ್ಟನ್ನು ಬದಲಾಯಿಸುತ್ತದೆ ಮತ್ತು ವಿಸ್ತರಿಸುತ್ತದೆ ಎಂದು ತಿಳಿಸಿದರು. ಜು.1ರಿಂದ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಹುಡುಕುತ್ತಿರುವ ಸಹೋದರ-ಸಹೋದರಿಯರಿಗೆ ವರ್ಷಕ್ಕೆ 100 ಅಲ್ಲ, 125 ದಿನಗಳವರೆಗೆ ಉದ್ಯೋಗ ನೀಡಲಾಗುವುದು.

ಯೋಜನೆಯ ಅನುಷ್ಠಾನದ ಪರಿವರ್ತನೆ ಹಾಗು ಮಧ್ಯಂತರ ಅವಧಿಯಲ್ಲಿ ಎಲ್ಲಾ ನಿಬಂಧನೆಗಳು ಮುಂದುವರಿಯುತ್ತವೆ ಎಂದು ಸಚಿವರು ಸ್ಪಷ್ಟಪಡಿಸಿದರು.



ಜುಲೈ 1ರ ವರೆಗೆ ಅಡಿಯಲ್ಲಿ ಅಪೂರ್ಣಗೊಂಡ ಕೆಲಸಗಳು ಪೂರ್ಣಗೊಳ್ಳುತ್ತವೆ. ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯ ಸಿದ್ಧತೆಗಳನ್ನು ಮುಗಿಸಲು ರಾಜ್ಯಗಳಿಗೆ 6 ತಿಂಗಳ ಕಾಲಾವಕಾಶ ನೀಡಲಾಗುವುದು. ಜುಲೈ 1ರ ನಂತರ ಯಾವುದೇ ರಾಜ್ಯ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲು ವಿಫಲವಾದರೆ, ಕೆಲಸಕ್ಕೆ ನೀಡುವ ಹಣಕಾಸಿನ ಮಾದರಿಯು ವಿಕ್ಷಿತ್ ಭಾರತ್-ಜಿ ರಾಮ್ ಜಿ ಯೋಜನೆಯಡಿಯಲ್ಲಿ ಬರುತ್ತದೆ ಎಂದು ಚೌಹಾಣ್ ತಿಳಿಸಿದರು. ಕಾಯ್ದೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ 95,600 ಕೋಟಿ ರೂ.ಗೂ ಹೆಚ್ಚು ಹಣ ಹಂಚಿಕೆ ಮಾಡಿದೆ. ಜುಲೈ 1ರಿಂದ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಗೆ ಬರಲಿದೆ ಎಂದು ಕೇಂದ್ರ ಈಗಾಗಲೇ ತಿಳಿಸಿದೆ.

### ಕಾರ್ಮಿಕ ವೆಚ್ಚದ ಒತ್ತಡ

ಈ ಯೋಜನೆ ಗ್ರಾಮೀಣ ಕಾರ್ಮಿಕ ಪೂರೈಕೆಯನ್ನು ಅವಲಂಬಿಸಿರುವ ಕೈಗಾರಿಕೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ದಟ್ಟವಾಗಿದೆ. ಕಾರ್ಮಿಕರು ಖಾಸಗಿ ವಲಯ ಮತ್ತು ನಿರ್ಮಾಣ ಕೆಲಸಗಳಿಗಿಂತಲೂ ಖಾತರಿಪಡಿಸಿದ ಸರ್ಕಾರಿ ವೇತನಕ್ಕೆ ಆದ್ಯತೆ ನೀಡುವುದು ಇದಕ್ಕೆ ಕಾರಣ.

ಆದರೆ, ಯೋಜನೆಯು ಗ್ರಾಮೀಣ ಖರೀದಿ ಶಕ್ತಿಯನ್ನು ಹೆಚ್ಚಿಸುವ ನಿರೀಕ್ಷೆಯಿದೆ. ಕೃಷಿ ಸಂಬಂಧಿ ಮತ್ತು ಇತರ ಗ್ರಾಮೀಣ ಕೇಂದ್ರಿತ ವ್ಯವಹಾರಗಳಿಗೆ ಪ್ರಯೋಜನವಾಗುತ್ತದೆ. ಗ್ರಾಮೀಣ ಕಾರ್ಯಪಡೆಯ ಮೇಲೆ ಅವಲಂಬಿತವಾಗಿರುವ ಕೈಗಾರಿಕೆಗಳು ಹೊಸ ಚೌಕಟ್ಟಿನಡಿಯಲ್ಲಿ ಹೆಚ್ಚಿನ ಕಾರ್ಮಿಕ ವೆಚ್ಚದ ಒತ್ತಡ ಎದುರಿಸಬೇಕಾಗಬಹುದು.

## ಪ್ರತಿ ವರ್ಷ ಮೇ 10ರಂದು ಮರ್ಕಾ-ಎ-ಹಕ್ ದಿನವಾಗಿ ಆಚರಣೆ

**ಇಸ್ಲಾಮಾಬಾದ್:** ಮೇ 10 ಅನ್ನು ವಾರ್ಷಿಕವಾಗಿ ಮರ್ಕಾ-ಎ-ಹಕ್ ದಿನವಾಗಿ ಆಚರಿಸುವುದಾಗಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಘೋಷಿಸಿದ್ದಾರೆ. ಕಳೆದ ವರ್ಷ ಭಾರತದೊಂದಿಗಿನ ನಾಲ್ಕು ದಿನಗಳ ಸಂಘರ್ಷಕ್ಕೆ ಇಸ್ಲಾಮಾಬಾದ್ ಮರ್ಕಾ-ಎ-ಹಕ್ ಎಂದು ಹೆಸರಿಸಿದೆ. ಈ ಹೆಸರಿನ ಮೊದಲ ವಾರ್ಷಿಕೋತ್ಸವವನ್ನು ಗುರುತಿಸುವ ಸಮಾರಂಭದಲ್ಲಿ ಮಾತನಾಡಿದ ಶೆಹಬಾಜ್ ಷರೀಫ್, ಪಾಕಿಸ್ತಾನಿ ಸಶಸ್ತ್ರ ಪಡೆಗಳು ಶತ್ರುಗಳಿಗೆ ಐತಿಹಾಸಿಕ ಮತ್ತು ಸೂಕ್ತ ಪ್ರತಿಕ್ರಿಯೆ ನೀಡಿವೆ ಎಂದು ಹೇಳಿಕೊಂಡಿದ್ದಾರೆ.

26 ಪ್ರವಾಸಿಗರು ಸಾವನ್ನಪ್ಪಿದ ಪೆಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ ಭಾರತ 2025ರ ಮೇ 7 ರಂದು ಆಪರೇಷನ್ ಸಿಂಧೂರ್ ಪ್ರಾರಂಭಿಸಿತ್ತು. ಪಾಕಿಸ್ತಾನ ಮತ್ತು ಆಕ್ರಮಿತ ಕಾಶ್ಮೀರದಲ್ಲಿ ಒಂಬತ್ತು ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ವೈಮಾನಿಕ ದಾಳಿ ನಡೆಸಿದ ಭಾರತ ಕನಿಷ್ಠ 100 ಭಯೋತ್ಪಾದಕರನ್ನು ಕೊಂದು ಹಾಕಿತ್ತು.

ಭಾರತದ ಈ ಕ್ರಮದಿಂದ ಭಾರತ - ಪಾಕ್ ನಡುವೆ ತೀವ್ರ ಉದ್ವಿಗ್ನ ಪರಿಸ್ಥಿತಿಯನ್ನು ಉಂಟು ಮಾಡಿತ್ತು. ಪಾಕಿಸ್ತಾನ ಕೂಡಾ ಪ್ರತೀಕಾರದ ದಾಳಿಗಳನ್ನು ಪ್ರಾರಂಭಿಸಿತ್ತು. ಆದರೆ, ಅವೆಲ್ಲ ದಾಳಿಗಳನ್ನು ಭಾರತೀಯ ಸೇನೆ ವಿಫಲಗೊಳಿಸಿತ್ತು. ಮೇ 10, 2025 ರಂದು ಎರಡೂ ಕಡೆಯ ಸೇನಾ ಅಧಿಕಾರಿಗಳ ನಡುವಿನ ಹಾಟ್ ಲೈನ್ ಮಾತುಕತೆಗಳ ನಂತರ, ಮಿಲಿಟರಿ ಕಾರ್ಯಾಚರಣೆಗಳನ್ನು ನಿಲ್ಲಿಸುವ ಬಗ್ಗೆ ಒಪ್ಪಂದ ಮಾಡಿಕೊಳ್ಳುವುದರೊಂದಿಗೆ ಯುದ್ಧ ಕೊನೆಗೊಂಡಿತ್ತು.

## ಟೈರ್‌ನಲ್ಲಿ ಹೊತ್ತಿಕೊಂಡ ಬೆಂಕಿ: ಅದೃಷ್ಟವಶಾತ್ ಎಲ್ಲಾ ಪ್ರಯಾಣಿಕರು ಪಾರು

**ಕಠ್ಮಂಡು:** ಟರ್ಕಿಶ್ ಏರ್ಲೈನ್ಸ್ ವಿಮಾನ ಲ್ಯಾಂಡಿಂಗ್ ಆಗುತ್ತಿದ್ದ ವೇಳೆ ಅದರ ಟೈರ್‌ಗೆ ಬೆಂಕಿ ಹೊತ್ತಿಕೊಂಡ ಆಘಾತಕಾರಿ ಘಟನೆ ನೇಪಾಳದ ಕಠ್ಮಂಡುವಿನ ತ್ರಿಭುವನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದಿದೆ. ಈ ಘಟನೆ ನಡೆದಿದ್ದು, ಎಲ್ಲಾ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬೆಂಕಿ ಹೊತ್ತುಕೊಳ್ಳುತ್ತಿದ್ದಂತೆ ತ್ವರಿತವಾಗಿ ನಿಯಂತ್ರಣಕ್ಕೆ ತರಲಾಯಿತು. ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ಇಸ್ತಾನ್ ಬುಲ್‌ನಿಂದ ಕಠ್ಮಂಡುವಿಗೆ ಆಗಮಿಸುತ್ತಿದ್ದ ಟರ್ಕಿಶ್ ಏರ್ಲೈನ್ಸ್ ಟಿಕೆ 726 ವಿಮಾನದ ಟೈರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು. ಲ್ಯಾಂಡಿಂಗ್ ಸಮಯದಲ್ಲಿ ಟೈರ್‌ಗೆ ಬೆಂಕಿ ಹೊತ್ತಿಕೊಂಡ ತಕ್ಷಣ ತುರ್ತು ತಂಡಗಳು ಪ್ರತಿಕ್ರಿಯಿಸಿದವು.

ಟರ್ಕಿಶ್ ಏರ್ಲೈನ್ಸ್ ಟಿಕೆ 726 ವಿಮಾನ ಇಸ್ತಾನ್‌ಬುಲ್‌ನಿಂದ ಕಠ್ಮಂಡುವಿಗೆ ತೆರಳುತ್ತಿತ್ತು. ಇಳಿಯುವಾಗ ಟೈರ್ ಬೆಂಕಿಗೆ ಆಹುತಿಯಾಗಿತ್ತು. ಅಗ್ನಿಶಾಮಕದಳದ ಸಿಬ್ಬಂದಿ ಬೆಂಕಿಯನ್ನು ನಿಯಂತ್ರಿಸಿದರು. ಎಲ್ಲಾ ಪ್ರಯಾಣಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ವಿಮಾನ ನಿಲ್ದಾಣದ ಭದ್ರತಾ ಅಧಿಕಾರಿ ತಿಳಿಸಿದ್ದಾರೆ. ಘಟನೆಯ ಸಮಯದಲ್ಲಿ ವಿಮಾನದಲ್ಲಿ 278 ಪ್ರಯಾಣಿಕರು, 11 ಸಿಬ್ಬಂದಿ ಇದ್ದರು. ವಿಶ್ವಸಂಸ್ಥೆಯ ಹಲವಾರು ಪ್ರತಿನಿಧಿಗಳು ವಿಮಾನದಲ್ಲಿ ಇದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ. ತುರ್ತು ರಕ್ಷಣಾ ಸಿಬ್ಬಂದಿ ತಕ್ಷಣ ಪ್ರತಿಕ್ರಿಯೆ ನೀಡಿದ ಪರಿಣಾಮ ಆಗಬಹುದಾಗಿದ್ದ ದೊಡ್ಡ ದುರಂತವೊಂದು ತಪ್ಪಿದೆ. ಇಲ್ಲಿಯವರೆಗೆ ಯಾವುದೇ ಗಾಯಗಳಾಗಿರುವ ಬಗ್ಗೆ ವರದಿಯಾಗಿಲ್ಲ. ವಿಮಾನದ ಟೈರ್‌ಗೆ ಬೆಂಕಿ ಹೊತ್ತಿಕೊಳ್ಳಲು ಏನು ಕಾರಣ ಎಂದು ಇನ್ನೂ ತಿಳಿದುಬಂದಿಲ್ಲ. ವಿಮಾನಯಾನ ಅಧಿಕಾರಿಗಳು ಹೆಚ್ಚಿನ ತನಿಖೆ ನಡೆಸುವ ನಿರೀಕ್ಷೆಯಿದೆ.

# ಉಕ್ರೇನ್ ಯುದ್ಧ ಶೀಘ್ರದಲ್ಲೇ ಅಂತ್ಯ

## ಝೆಲೆನ್ಸ್ಕಿ ಜೊತೆ ನೇರ ಭೇಟಿಗೆ ಸಿದ್ದ: ರಷ್ಯಾ ಅಧ್ಯಕ್ಷ ಪುಟಿನ್

**ಮಾಸ್ಕೋದಲ್ಲಿ ಆಚರಿಸಲಾಗುವ ವಿಜಯ ದಿನದ ಅಂಗವಾಗಿ ರಷ್ಯಾ-ಉಕ್ರೇನ್ ಯುದ್ಧಕ್ಕೆ 3 ದಿನಗಳ ಕದನವಿರಾಮದ ನಡುವೆ ಈ ಯುದ್ಧವನ್ನು ಆದಷ್ಟು ಬೇಗ ಮುಕ್ತಾಯಗೊಳಿಸುವ ಕುರಿತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸುಳಿವು ನೀಡಿದ್ದು, ಶಾಂತಿಗಾಗಿ ರೂಪಿಸಲಾಗಿರುವ ಷರತ್ತುಗಳನ್ನು ಒಪ್ಪಿಕೊಂಡಲ್ಲಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರನ್ನು ನೇರವಾಗಿ ಭೇಟಿಯಾಗಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ. ಅಷ್ಟೇ ಅಲ್ಲದೆ, ಉಕ್ರೇನ್ ಯುದ್ಧದ ಬಳಿಕ ಯುರೋಪಿಯನ್ ರಾಷ್ಟ್ರಗಳಿಂದ ಎದುರಿಸುತ್ತಿರುವ ನಿರ್ಬಂಧಗಳ ನಡುವೆ ಅವರೊಂದಿಗೆ ಮಾತುಕತೆಗೂ ಸಿದ್ದವಿರುವುದಾಗಿ ಇದಕ್ಕೆ ಜರ್ಮನಿಯ ಮಾಜಿ ಚಾನ್ಸೆಲರ್ ಗೇರ್ಹಾರ್ಡ್ ಶ್ರೋಡರ್ ಸೂಕ್ತ ಎಂದು ತಿಳಿಸಿದ್ದಾರೆ.**

**ಮಾಸ್ಕೋ:** ರಷ್ಯಾ-ಉಕ್ರೇನ್ ನಡುವೆ ಸುಮಾರು 4 ವರ್ಷಗಳಿಗೂ ಅಧಿಕ ಕಾಲದಿಂದ ಸುಧೀರ್ಘವಾಗಿ ನಡೆಯುತ್ತಿರುವ ಯುದ್ಧಕ್ಕೆ ಇತ್ತೀಚೆಗಷ್ಟೇ 3 ದಿನಗಳ ಕದನವಿರಾಮ ಘೋಷಣೆಯಾಗಿತ್ತು, ಈ ಬೆನ್ನಲ್ಲೇ, ಇದೀಗ ಈ ಯುದ್ಧವನ್ನು ಶೀಘ್ರದಲ್ಲೇ ಅಂತ್ಯಗಳಿಸುವ ಕುರಿತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸುಳಿವು ನೀಡಿದ್ದಾರೆ. ಅಷ್ಟೇ ಅಲ್ಲದೆ, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರೊಂದಿಗೆ ನೇರ ಮಾತುಕತೆಯ ಸಾಧ್ಯತೆಯನ್ನು ಸಹ ಪ್ರಸ್ತಾಪಿಸಿದ್ದಾರೆ. ಆದರೆ, ಇದಕ್ಕೆ ಪೂರ್ವ ಷರತ್ತನ್ನು ವಿಧಿಸಿದ್ದು, ಈ ಕುರಿತು ಪೂರ್ವ ಮಾತುಕತೆಯ ಶಾಂತಿ ಒಪ್ಪಂದವನ್ನು ಔಪಚಾರಿಕಗೊಳಿಸಲು ಸಭೆಯು ಅಂತಿಮ ಹೆಜ್ಜೆಯಾಗಿರಬೇಕು. ಇದಕ್ಕಾಗಿ ಮೂರನೇ ದೇಶದಲ್ಲಿ(ರಷ್ಯಾ-ಉಕ್ರೇನ್ ಹೊರತುಪಡಿಸಿ) ಭೇಟಿಯಾಗಲು ಸಾಧ್ಯವಿದೆ, ಆದರೆ ದೀರ್ಘಕಾಲೀನ ಐತಿಹಾಸಿಕ ದೃಷ್ಟಿಕೋನದಲ್ಲಿ ಶಾಂತಿಯ ಕುರಿತು ಅಂತಿಮ ಒಪ್ಪಂದಗಳನ್ನು ತಲುಪಿದ್ದರೆ ಮಾತ್ರ ಎಂದು ಪುಟಿನ್ ಸ್ಪಷ್ಟಪಡಿಸಿದ್ದಾರೆ. ಇದು ಸದ್ಯ ಝೆಲೆನ್ಸ್ಕಿ ಅವರೊಂದಿಗೆ ಮುಖಾಮುಖಿ ಭೇಟಿಯಾಗಲು ಸಿದ್ದರಿರುವುದನ್ನು ಸೂಚಿಸಿದ್ದಾರೆ.

ಇನ್ನು, ಯುರೋಪಿಯನ್ ಒಕ್ಕೂಟದ ಅಧಿಕಾರಿಗಳು ರಷ್ಯಾದೊಂದಿಗೆ ಮಾತುಕತೆಗೆ ಸಿದ್ದತೆ ನಡೆಸುತ್ತಿವೆ ಎಂಬ ವರದಿಗಳ ಮಧ್ಯೆ ಅವರೊಂದಿಗೆ ಮಾತುಕತೆ ನಡೆಸುವ ಮೂಲಕ ಈಗಾಗಲೇ ಕ್ಷೀಣಿಸಿರುವ ಸಂಬಂಧಗಳನ್ನು ಮತ್ತೆ ಪುನಶ್ಚೇತನಗೊಳಿಸಲು ಪುಟಿನ್ ಸಿದ್ದವಾಗಿದ್ದಾರಾ ಎಂಬ ಪ್ರಶ್ನೆಗೆ ಉತ್ತರಿಸಿದ ಪುಟಿನ್ ಯುರೋಪಿಯನ್ನರೊಂದಿಗೆ ಮಾತುಕತೆ ನಡೆಸಲು ಸೂಕ್ತ ವ್ಯಕ್ತಿ ಜರ್ಮನಿಯ ಮಾಜಿ ಚಾನ್ಸೆಲರ್ ಗೇರ್ಹಾರ್ಡ್ ಶ್ರೋಡರ್ ಅವರು ಆಗಿರುತ್ತಾರೆ ಎಂದು ತಿಳಿಸಿದ್ದಾರೆ. ಪ್ರಪಂಚದ ಭೀಕರ ಯುದ್ಧಗಳಲ್ಲಿ ಪ್ರಮುಖವಾದದ್ದು ಎನಿಸಿಕೊಂಡಿರುವ 2ನೇ ಮಹಾಯುದ್ಧದಲ್ಲಿ ಜರ್ಮನಿಯ ನಾಜಿ ಪಡೆಗಳ ವಿರುದ್ದ ಸೋವಿಯತ್ ಯೂನಿಯನ್‌ನ ವಿಜಯವನ್ನು ಗುರುತಿಸಲು ರಷ್ಯಾದ ರಾಜಧಾನಿ ಮಾಸ್ಕೋದಲ್ಲಿ ಪ್ರತಿವರ್ಷ ಮೇ.9ರಂದು ವಾರ್ಷಿಕ ಕಾರ್ಯಕ್ರಮ ನಡೆಯುತ್ತದೆ. ಈ ಕಾರ್ಯಕ್ರಮದಲ್ಲಿ ಯುದ್ಧದ ಸಮಯದಲ್ಲಿ ಮಡಿದ ಅಂದಾಜು 27 ಮಿಲಿಯನ್ ಸೋವಿಯತ್ ನಾಗರಿಕರನ್ನು ಗೌರವಿಸುತ್ತದೆ ಹಾಗೂ ಈ ವೇಳೆ, ರಷ್ಯಾದ ಮಿಲಿಟರಿಯನ್ನು ಸಾಮರ್ಥ್ಯವನ್ನು ತೋರಿಸುವ ಪ್ರದರ್ಶನಗಳು ನಡೆಯುತ್ತವೆ. ಆದರೆ, ಉಕ್ರೇನ್ ಯುದ್ಧದ ನಡುವೆ ಡ್ರೋನ್ ದಾಳಿಯ ಬೆದರಿಕೆಯ ಹಿನ್ನಲೆಯಲ್ಲಿ ಎಲ್ಲಾ ವರ್ಷಕ್ಕಿಂತ ಈ ಬಾರಿಯ ವಿಜಯ ದಿನ ಆಚರಣೆ ಭಿನ್ನವಾಗಿದ್ದು, ಮಾಸ್ಕೋದ ರೆಡ್ ಸ್ಕ್ವೇರ್‌ನಲ್ಲಿ ನಡೆದ ವಿಜಯ ದಿನದ ಪರೇಡ್‌ನಲ್ಲಿ ಯಾವುದೇ ಮಿಲಿಟರಿ ಟ್ಯಾಂಕ್‌ಗಳು ಪಟಾಕಿಗಳಂತಹ ಆಡಂಬರಗಳನ್ನು ಮಾಡದೇ ಈ ಪ್ರದೇಶದಾದ್ಯಂತ ಭಾರೀ ಭದ್ರತೆಯಲ್ಲಿ ಆಚರಿಸಲಾಗಿದೆ.


**1** ಉಕ್ರೇನ್‌ನೊಂದಿಗಿನ ಯುದ್ಧ ಶೀಘ್ರವೇ ಮುಕ್ತಾಯಗೊಳ್ಳಬಹುದು ಎಂದು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿಕೆ

**2** ಶಾಂತಿಗಾಗಿ ರಷ್ಯಾ ರೂಪಿಸಿರುವ ಷರತ್ತುಗಳನ್ನು ಒಪ್ಪಿದರೆ ಉಕ್ರೇನ್ ಅಧ್ಯಕ್ಷರೊಂದಿಗೆ ನೇರ ಭೇಟಿಗೆ ಸಿದ್ದ ಎಂದ ಪುಟಿನ್

**3** ಏನಿದು ರಷ್ಯಾದ ವಿಜಯ ದಿನ

2ನೇ ಮಹಾಯುದ್ಧದ ಸಮಯದಲ್ಲಿ ಸೋವಿಯತ್ ಯೂನಿಯನ್ ರಾಷ್ಟ್ರ ಜಯಗಳಿಸಿದ ಸಂದರ್ಭವನ್ನು ಆಚರಿಸಲು ರಷ್ಯಾದಲ್ಲಿ ಪ್ರತಿವರ್ಷವು ವಿಜಯದಿನವನ್ನು ಆಚರಿಸಲಾಗುತ್ತದೆ. ಇದು ಉಕ್ರೇನ್‌ಗೂ ಸಹ ಅನ್ವಯವಾಗುತ್ತದೆ. ಈ ನಿಟ್ಟಿನಲ್ಲಿ ಈ ಸಂಭ್ರಮದ ದಿನಗಳ ನಡುವೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೇರ ಮನವಿಯ ಮೇರೆಗೆ ಉಭಯ ದೇಶಗಳು 3 ದಿನಗಳ ಕಾಲ ಕದನವಿರಾಮ ಘೋಷಿಸಿದ್ದವು. ಇದಾದ ಬೆನ್ನಲ್ಲೇ, ವಿಜಯ ದಿನದ ಸ್ಮರಣಾರ್ಥ ಮಾಸ್ಕೋದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಧ್ಯಮಗಳೊಂದಿಗೆ ರಷ್ಯಾ ಅಧ್ಯಕ್ಷ ಪುಟಿನ್ ಮಾತನಾಡಿದ್ದು, ಈ ವೇಳೆ, ಈ ವಿಷಯ(ಯುದ್ಧ) ಆದಷ್ಟು ಬೇಗನೆ ಮುಕ್ತಾಯಗೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ ಎಂದು ಹೇಳಿಕೆ ನೀಡಿದ್ದಾರೆ.

**ಉಕ್ರೇನ್ ಯುದ್ಧ ಶೀಘ್ರ ಅಂತ್ಯಗೊಳ್ಳಬಹುದು ಎಂದು ಪುಟಿನ್ ಸುಳಿವು**



## ನಾನು ಮೋದಿ ಅವರಿಗೆ ಮಾತು ಕೊಟ್ಟಿದ್ದೇನೆ: ಪವನ್ ಕಲ್ಯಾಣ್ ಪತ್ನಿಯ ಭಾವನಾತ್ಮಕ ಪೋಸ್ಟ್

**ಹೈದರಾಬಾದ್:** ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಆಂಧ್ರ ಪ್ರದೇಶದ ಡಿಸಿಎಂ ಪವನ್ ಕಲ್ಯಾಣ್ ಅವರ ಹೈದರಾಬಾದ್ ನಲ್ಲಿರುವ ನಿವಾಸಕ್ಕೆ ಭೇಟಿ ನೀಡಿದ ಬಳಿಕ, ಪವನ್ ಪತ್ನಿ ಅನ್ನಾ ಲೆಜ್ನೆವಾ ಅವರು ಸಾಮಾಜಿಕ ಮಾಧ್ಯಮದಲ್ಲಿ ಭಾವನಾತ್ಮಕ ಪೋಸ್ಟ್ ಹಂಚಿಕೊಂಡಿದ್ದಾರೆ.ಪವನ್ ಕಲ್ಯಾಣ್ ಮತ್ತು ಅನ್ನಾ ಲೆಜ್ನೆವಾ ಕೊನಿದೆಲ ಅವರು ಪ್ರಧಾನಿಯನ್ನು ತಮ್ಮ ನಿವಾಸಕ್ಕೆ ಆತ್ಮೀಯವಾಗಿ ಬರಮಾಡಿಕೊಂಡಿದ್ದರು. ಈ ವೇಳೆ ಪವನ್ ಕಲ್ಯಾಣ್ ಅವರ ಇತ್ತೀಚಿನ ಶಸ್ತ್ರಚಿಕಿತ್ಸೆ ಮತ್ತು ಆರೋಗ್ಯದ ಬಗ್ಗೆ ಮೋದಿ ವಿಚಾರಿಸಿದ್ದಾರೆ. ನಂತರ ಪವನ್ ಕುಟುಂಬ ಸದಸ್ಯರೊಂದಿಗೆ ಸ್ವಲ್ಪ ಸಮಯ ಮಾತುಕತೆ ನಡೆಸಿದ್ದಾರೆ.ಪ್ರಧಾನಿ ಭೇಟಿಯ ಛಾಯಾಚಿತ್ರಗಳನ್ನು ಹಂಚಿಕೊಂಡಿರುವ ಅನ್ನಾ ಲೆಜ್ನೆವಾ, ಸಂತೋಷ ಮತ್ತು ಕೃತಜ್ಞತೆ ವ್ಯಕ್ತಪಡಿಸಿದರು. ತಮ್ಮ ಪೋಸ್ಟ್‌ನಲ್ಲಿ, ಪ್ರಧಾನಿ ನಮ್ಮ ಮನೆಗೆ ಭೇಟಿ ನೀಡಿದ್ದು, ನನಗೆ ತುಂಬಾ ಸಂತೋಷವಾಗಿದೆ. ಈ ದಿನವನ್ನು ನಾನು ಎಂದಿಗೂ ಮರೆಯುವುದಿಲ್ಲ. ನನ್ನ ಪತಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ನಾನು ಅವರಿಗೆ ಮಾತು ಕೊಟ್ಟಿದ್ದೇನೆ ಎಂದು ಬರೆದಿದ್ದಾರೆ.ಪ್ರಧಾನಿ ಮೋದಿ ಅವರೂ ಪವನ್ ಕಲ್ಯಾಣ್ ಅವರ ನಿವಾಸಕ್ಕೆ ಭೇಟಿ ನೀಡಿದ ಬಗ್ಗೆ ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಹಂಚಿಕೊಂಡಿದ್ದಾರೆ. ಪವನ್ ಅವರ ಆರೋಗ್ಯ ಸ್ಥಿತಿಯ ಬಗ್ಗೆ ವಿಚಾರಿಸಿದ್ದೇನೆ ಮತ್ತು ಅವರು ಶೀಘ್ರವಾಗಿ ಚೇತರಿಸಿಕೊಳ್ಳಬೇಕೆಂದು ಹಾರೈಸಿದ್ದೇನೆ ಎಂದು ತಿಳಿಸಿದ್ದಾರೆ. ಪ್ರಧಾನಿಯವರ ಪೋಸ್ಟ್‌ಗೆ ಪ್ರತಿಕ್ರಿಯಿಸಿದ ಪವನ್ ಕಲ್ಯಾಣ್, ತಮ್ಮ ಮನೆಗೆ ಖುದ್ದಾಗಿ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಕ್ಕಾಗಿ ಮೋದಿ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ. ಪ್ರಧಾನಿಯವರು ತೋರಿಸಿದ ಪ್ರೀತಿಯನ್ನು ತಮ್ಮ ಜೀವನದುದ್ದಕ್ಕೂ ಮರೆಯಲಾಗದು.


ಉದಯ ವಾಹಿನಿ

ದೇಶ-ವಿದೇಶ

ಮಂಗಳವಾರ 12 ಮೇ 2026




## ಮಿನಿ ನ್ಯೂಸ್

### ಮಾನ್ಸೂನ್ ಬಿತ್ತನೆಗೆ ರಸಗೊಬ್ಬರ ದಾಸ್ತಾನು ಸಾಕಷ್ಟಿದೆ

**ದೆಹಲಿ:** ದೇಶದಲ್ಲಿ ರಸಗೊಬ್ಬರ ದಾಸ್ತಾನು ಸಾಕಷ್ಟಿದ್ದು, ಮುಂಬರುವ ಖಾರಿಫ್ (ಮಾನ್ಸೂನ್ ಬಿತ್ತನೆ) ಋತುವಿನಲ್ಲಿ ಸಮರ್ಪಕ ಪೂರೈಕೆ ಹೊಂದಿದೆ ಎಂದು ಕೇಂದ್ರ ಸರ್ಕಾರ ಇಂದು ಸ್ಪಷ್ಟಪಡಿಸಿದೆ. ಮಧ್ಯ ಪ್ರಾಚ್ಯದ ಇತ್ತೀಚಿನ ಬೆಳವಣಿಗೆಗಳ ಬೆನ್ನಲ್ಲೇ ಮಾತನಾಡಿರುವ ರಸಗೊಬ್ಬರ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಅಪರ್ಣಾ ಎಸ್.ಶರ್ಮಾ ಅವರು, ಪ್ರಮುಖ ರಸಗೊಬ್ಬರಗಳ ಗರಿಷ್ಠ ಚಿಲ್ಲರೆ ಬೆಲೆ (ಎಂಆರ್‌ಪಿ) ಸ್ಥಿರವಾಗಿದೆ. ದೇಶದಲ್ಲಿ ರಸಗೊಬ್ಬರದ ಭದ್ರತೆ ಸಾಕಷ್ಟಿದ್ದು, ಉತ್ತಮವಾಗಿ ನಿರ್ವಹಣೆ ಮಾಡಲಾಗಿದೆ. ಅವಶ್ಯಕತೆಗೆ ಅನುಗುಣವಾದ ಪೂರೈಕೆ ಇದ್ದು, ಕೊರತೆ ಇಲ್ಲ ಎಂದರು.

ರಸಗೊಬ್ಬರ ಇಲಾಖೆಯ ಪರವಾಗಿ ಕೃಷಿ ಇಲಾಖೆಯಿಂದ ನಿರ್ಣಯಿಸಲಾದ ರಸಗೊಬ್ಬರದ ಅಗತ್ಯತೆಯ ಆಧಾರದ ಮೇಲೆ 2026ರ ಮಾನ್ಸೂನ್ ಋತುವಿನ ದಾಸ್ತಾನಿಗಿಂತ ಶೇ.51ಕ್ಕಿಂತ ಹೆಚ್ಚಾಗಿದೆ. ಕೃಷಿ ಇಲಾಖೆ ರಸಗೊಬ್ಬರದ ಮೌಲ್ಯಮಾಪನ ನಡೆಸಿದ್ದು, ಖಾರಿಫ್‌ಗೆ 390.54 ಲಕ್ಷ ಟನ್ ಗೊಬ್ಬರ ಬೇಕಿದೆ. ಈ ಹಿನ್ನೆಲೆಯಲ್ಲಿ ರಸಗೊಬ್ಬರ ದಾಸ್ತಾನು ಉತ್ತಮವಾಗಿದ್ದು, ಎಂಆರ್‌ಪಿ ರಸಗೊಬ್ಬರ ಕೂಡ ಅದೇ ರೀತಿ ಉತ್ತಮವಾಗಿದೆ ಎಂದು ಹೇಳಿದರು.

### ತಮಿಳುನಾಡು ಶಾಸಕರಿಗೆ ಪ್ರಮಾಣ ವಚನ ಬೋಧನೆ

**ಚೆನ್ನೈ :** ಆರು ದಿನಗಳ ಬಹುಮತ ಸರ್ಕಸ್' ನಂತರ ಕೊನೆಗೂ ನಟ/ ರಾಜಕಾರಣಿ ವಿಜಯ್ ಅವರು ತಮ್ಮ ನೇತೃತ್ವದಲ್ಲಿ ಸರ್ಕಾರ ರಚಿಸಿದ್ದಾರೆ. ಅವರು ರಾಜ್ಯದ ಸಿಎಂ ಆಗಿ ಪ್ರಮಾಣ ಸ್ವೀಕರಿಸಿದರು. ಇಂದು ಆಯ್ಕೆಯಾದ ಎಲ್ಲಾ ಶಾಸಕರಿಗೆ ಪ್ರಮಾಣ ವಚನ ಬೋಧಿಸಲಾಯಿತು. ಆದರೆ, ರಾಜ್ಯದ ಅತಿ ಕಿರಿಯ ಸಚಿವೆಯಾಗಿರುವ ಕೀರ್ತನಾ ಅವರಿಗೆ ಮಾತ್ರ ಪ್ರಮಾಣ ಬೋಧಿಸಲಾಗಿಲ್ಲ.

17ನೇ ತಮಿಳುನಾಡು ವಿಧಾನಸಭೆಯ ಮೊದಲ ಅಧಿವೇಶನ ಇಂದು ಪ್ರಾರಂಭವಾಯಿತು. ಮುಖ್ಯಮಂತ್ರಿ ಜೋಸೆಫ್ ವಿಜಯ್ ಪೆರಂಬೂರು ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಆ ಬಳಿಕ ಎಲ್ಲಾ ರಾಜಕೀಯ ಪಕ್ಷಗಳ ಹೊಸದಾಗಿ ಆಯ್ಕೆಯಾದ ಶಾಸಕರು ಪ್ರಮಾಣ ವಚನ ಸ್ವೀಕರಿಸಿದರು.ಗೆಲುವಿನ ನಂತರ, ಸಚಿವರ ಸಾಲಿನಲ್ಲಿ ಟಿವಿಕೆಯ ಕಿರಿಯ ಸಚಿವೆ ಕೀರ್ತನಾ ಕೊನೆಯವರಾಗಿದ್ದರು. ವಿಧಾನಸಭಾ ಕಾರ್ಯದರ್ಶಿ ಶ್ರೀನಿವಾಸನ್ ಅವರ ಹೆಸರನ್ನು ಕೂಗಿದರು. ಪ್ರಮಾಣ ಸ್ವೀಕರಿಸಲು ಸಚಿವೆ ಆಗಮಿಸಿದಾಗ ಗೆಲುವಿನ ಪ್ರಮಾಣಪತ್ರವನ್ನು ಕಾರ್ಯದರ್ಶಿಗಳು ಕೇಳಿದರು. ಕೀರ್ತನಾ ಅವರು ತಮ್ಮೊಂದಿಗೆ ಪ್ರಮಾಣಪತ್ರ ತಂದಿಲ್ಲ ಎಂದಾಗ, ಆ ದಾಖಲೆ ಇಲ್ಲದೇ ಪ್ರಮಾಣ ವಚನ ನೀಡಲು ಸಾಧ್ಯವಿಲ್ಲ ಎಂದು ಅನುಮತಿ ನಿರಾಕರಿಸಿದರು. ಹೀಗಾಗಿ, ಕಿರಿಯ ಸಚಿವೆ ಪ್ರಮಾಣ ವಚನ ಸ್ವೀಕರಿಸದೇ ತಮ್ಮ ಸ್ಥಾನಕ್ಕೆ ವಾಪಸ್ ತೆರಳಿದರು.

### ನೊಬೆಲ್ ಪ್ರಶಸ್ತಿ ವಿಜೇತೆ ನರ್ಗೆಸ್ ಮೊಹಮ್ಮದಿ ಟೆಹ್ರಾನ್ ಆಸ್ಪತ್ರೆಗೆ ದಾಖಲು

**ಲೆಬನಾನ್:** ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ಮತ್ತು ಕಾರ್ಯಕರ್ತೆ ನರ್ಗೆಸ್ ಮೊಹಮ್ಮದಿ ಅವರು ಜೈಲಿನಲ್ಲಿ ಕುಸಿದು ಬಿದ್ದ ಒಂದು ವಾರಕ್ಕೂ ಹೆಚ್ಚು ಕಾಲದ ನಂತರ ಟೆಹ್ರಾನ್ ಆಸ್ಪತ್ರೆಗೆ ವರ್ಗಾಯಿಸಲಾಗಿದೆ ಎಂದು ಅವರ ಪ್ರತಿಷ್ಠಾನ ತಿಳಿಸಿದೆ.

ಅವರ ಕುಟುಂಬ ಮತ್ತು ಇತರರು ಅವರ ಸ್ಥಿತಿ ಗಂಭೀರವಾಗಿದೆ ಎಂದು ದಿನಗಟ್ಟಲೇ ಮನವಿ ಮಾಡಿದ ನಂತರ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಅವರೀಗ ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದಾರೆ. ಆದರೆ, ಅವರಿಗೆ ಶಿಕ್ಷೆಯಿಂದ ಎಷ್ಟು ಸಮಯದವರೆಗೆ ರಿಲೀಫ್ ನೀಡಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ ಎಂದು ಪ್ರತಿಷ್ಠಾನ ತಿಳಿಸಿದೆ.

ಮೊಹಮ್ಮದಿಯನ್ನು ಝಂಜಾನ್ ಜೈಲಿನಲ್ಲಿ ಡಿಸೆಂಬರ್‌ನಿಂದ ಬಂಧಿಸಲಾಗಿತ್ತು. ಅವರು ಎರಡು ಬಾರಿ ಪ್ರಜ್ಞೆ ಕಳೆದುಕೊಂಡಿದ್ದರು. ಹಾಗಾಗಿ, ಅವರನ್ನು ಮೇ 1 ರಂದು ಸ್ಥಳೀಯ ಆಸ್ಪತ್ರೆಗೆ ವರ್ಗಾಯಿಸಲಾಗಿತ್ತು.

### ಎರಡನೇ ಮದುವೆಗೆ ವಿರೋಧ ವ್ಯಕ್ತಪಡಿಸಿದ ಮಗನನ್ನು ಕೊಂದು, ಆತ್ಮಹತ್ಯೆ ಮಾಡಿಕೊಂಡ ನಿವೃತ್ತ ಸೇನಾ ಯೋಧ!

**ಲುಧಿಯಾನ:** ಎರಡನೇ ಮದುವೆ ವಿಚಾರದಲ್ಲಿ ಉಂಟಾದ ಜಗಳದಲ್ಲಿ 66 ವರ್ಷದ ನಿವೃತ್ತ ಸೇನಾ ಸೈನಿಕನೊಬ್ಬ ತನ್ನ ಮಗನ ಮೇಲೆ ಗುಂಡು ಹಾರಿಸಿ ಕೊಂದು ನಂತರ ತಾನೂ ಆತ್ಮಹತ್ಯೆ ಮಾಡಿಕೊಂಡ ಘಟನೆ ಪಂಜಾಬ್‌ನ ಲುಧಿಯಾನ ಜಿಲ್ಲೆಯಲ್ಲಿ ಭಾನುವಾರ ರಾತ್ರಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಲುಧಿಯಾನದ ನ್ಯೂ ಅಗರ್ ನಗರದಲ್ಲಿ ಈ ಘಟನೆ ನಡೆದಿದೆ. ಲುಧಿಯಾನ ಪೊಲೀಸರ ಪ್ರಕಾರ, ನಿವೃತ್ತ ಸೈನಿಕ ಸುರಿಂದರ್ ಸಿಂಗ್ ಮೊದಲು ತನ್ನ ಮಗ ಗುರುಶರಣ್ ಸಿಂಗ್ ಗಿನ್ನಿ ಮೇಲೆ ತನ್ನ 12-ಬೋರ್ ರೈಫಲ್‌ನಿಂದ ಗುಂಡು ಹಾರಿಸಿದನು, ಇದರಿಂದ ಅವನು ಗಂಭೀರ ಗಾಯಗೊಂಡನು. ಗುರುಶರಣ್ ತನ್ನನ್ನು ತಾನು ಉಳಿಸಿಕೊಳ್ಳಲು ಓಡಲು ಪ್ರಾರಂಭಿಸಿದನು ಆದರೆ ಅವನ ತಂದೆ ಅವನನ್ನು ರಸ್ತೆಯಲ್ಲಿ ಬೆನ್ನಟ್ಟಿ ಗುಂಡು ಹಾರಿಸಿ ಕೊಂದನು. ನಂತರ ಅವನು ಮನೆಗೆ ಹಿಂತಿರುಗಿ ವಿಷಪೂರಿತ ವಸ್ತುವನ್ನು ಸೇವಿಸಿದ್ದಾನೆ ಎಂದು ಆರೋಪಿಸಲಾಗಿದೆ.

# ಮೇ 13 ರಿಂದ 15ರವರೆಗೆ ಚೀನಾಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ ಅಮೆರಿಕ ಅಧ್ಯಕ್ಷ ಟ್ರಂಪ್

**ಬೀಜಿಂಗ್, ಚೀನಾ:** ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರ ಆಹ್ವಾನದ ಮೇರೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇ 13 ರಿಂದ 15 ರವರೆಗೆ ಚೀನಾಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರರು ಸೋಮವಾರ ಪ್ರಕಟಿಸಿದ್ದಾರೆ.

ಸುಮಾರು ಒಂಬತ್ತು ವರ್ಷಗಳಲ್ಲಿ ಅಮೆರಿಕ ಅಧ್ಯಕ್ಷರು ಚೀನಾಕ್ಕೆ ನೀಡುತ್ತಿರುವ ಮೊದಲ ಭೇಟಿ ಇದಾಗಿದೆ. ದೀರ್ಘಾವಧಿಯ ಅಮೆರಿಕ - ಇಸ್ರೇಲ್ - ಇರಾನ್ ಯುದ್ಧ, ಜಾಗತಿಕ ಇಂಧನ ಬಿಕ್ಕಟ್ಟಿಗೆ ಕಾರಣವಾದ ಹಾರ್ಮುಜ್ ಜಲಸಂಧಿಯ ದಿಗ್ಬಂಧನದ ಬಿಕ್ಕಟ್ಟು ಮತ್ತು ತೈವಾನ್ ಸೇರಿದಂತೆ ಹಲವಾರು ವಿಷಯಗಳ ಕುರಿತು ಎರಡೂ ದೇಶಗಳ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಈ ಭೇಟಿ ಭಾರಿ ಮಹತ್ವ ಪಡೆದುಕೊಂಡಿದೆ.

ಅಮೆರಿಕದ ಪ್ರಧಾನ ಉಪ ಪತ್ರಿಕಾ ಕಾರ್ಯದರ್ಶಿ ಅನ್ನಾ ಕೆಲ್ಲಿ ಮಾತನಾಡಿ, ಮಹಾನ್ ಸಾಂಕೇತಿಕ ಮಹತ್ವದ ಭೇಟಿ ಎಂದು ಬಣ್ಣಿಸಿದ್ದಕ್ಕಾಗಿ ಟ್ರಂಪ್ ಬುಧವಾರ ಸಂಜೆ ಬೀಜಿಂಗ್‌ಗೆ ಆಗಮಿಸಲಿದ್ದಾರೆ ಎಂದು ಹೇಳಿದ್ದಾರೆ. ಕೆಲ್ಲಿ ಅವರ ಪ್ರಕಾರ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ದ್ವಿಪಕ್ಷೀಯ ಸಭೆಯಲ್ಲಿ ಭಾಗವಹಿಸಲಿದ್ದಾರೆ. ನಂತರ ಅವರು ದೇವಾಲಯಕ್ಕೆ ಭೇಟಿ ನೀಡಲಿದ್ದಾರೆ ಮತ್ತು ರಾಜ್ಯ ಔತಣಕೂಟವನ್ನು ಆಯೋಜಿಸಲಿದ್ದಾರೆ ಎಂದು ಹಾಂಕಾಂಗ್ ಮೂಲದ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.ದಕ್ಷಿಣ ಕೊರಿಯಾದ ಬುಸಾನ್‌ನಲ್ಲಿ ನಡೆದ ಸಭೆಯಲ್ಲಿ ಮತ್ತು ಹಿಂದಿನ ಫೋನ್ ಕರೆಗಳಲ್ಲಿ ಕ್ಸಿ ಮತ್ತು ಟ್ರಂಪ್ ನಡುವೆ ಮಾಡಿಕೊಳ್ಳಲಾದ ಪ್ರಮುಖ ಒಮ್ಮತ ಮತ್ತು ಪರಸ್ಪರ ಕಾಳಜಿಯ ಆರ್ಥಿಕ ಮತ್ತು ವ್ಯಾಪಾರ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಮಾತುಕತೆಗಳು ನಡೆಯಲಿವೆ ಎಂದು ಚೀನಾದ ವಾಣಿಜ್ಯ ಸಚಿವಾಲಯ ತನ್ನ ಹೇಳಿಕೆಯಲ್ಲಿ ತಿಳಿಸಿದೆ.



### ಔತಣಕೂಟದಲ್ಲಿ ಭೇಟಿ

**ಉಭಯ ನಾಯಕರು ಚಹಾಕೂಟ ಮತ್ತು ಔತಣಕೂಟದಲ್ಲಿ ಭೇಟಿಯಾಗಲಿದ್ದಾರೆ ಎಂದು ಕೆಲ್ಲಿ ಮಾಹಿತಿ ನೀಡಿದ್ದಾರೆ. ಟ್ರಂಪ್ ಭೇಟಿಗೆ ಮುನ್ನ ಮೇ 12 ಮತ್ತು 13 ರಂದು ಅಂತಿಮ ಸುತ್ತಿನ ಮಾತುಕತೆಗಳಲ್ಲಿ ಉಪ ಪ್ರಧಾನಿ ಹೆ ಲಿಫೆಂಗ್ ಅವರು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಅವರೊಂದಿಗೆ ವ್ಯಾಪಾರ ಮಾತುಕತೆಗಾಗಿ ದಕ್ಷಿಣ ಕೊರಿಯಾಕ್ಕೆ ಪ್ರಯಾಣಿಸಲಿದ್ದಾರೆ ಎಂದು ಎರಡೂ ಕಡೆಯವರು ಭಾನುವಾರ ಘೋಷಿಸಿದ್ದಾರೆ. ಎರಡು ಆರ್ಥಿಕತೆಗಳ ನಡುವೆ ವ್ಯಾಪಾರ ಒಪ್ಪಂದದ ನಿರೀಕ್ಷೆಗಳ ನಡುವೆ ಟ್ರಂಪ್ ಅವರ ಚೀನಾ ಭೇಟಿ ನಡೆಯುತ್ತಿದೆ.**

## ಇರಾನ್‌ನ ಶಾಂತಿ ಪ್ರಸ್ತಾಪ ತಿರಸ್ಕರಿಸಿದ ಅಮೆರಿಕ

**ವಾಷಿಂಗ್ಟನ್:** ಅಮೆರಿಕದ ಶಾಂತಿ ಪ್ರಸ್ತಾವನೆಗೆ ಇರಾನ್ ತನ್ನ ಪ್ರತಿಕ್ರಿಯೆಯನ್ನು ಪಾಕಿಸ್ತಾನದ ಮೂಲಕ ತಿಳಿಸಿದ ಕೆಲವೇ ಗಂಟೆಗಳ ನಂತರ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟೆಹ್ರಾನ್‌ನ ಉತ್ತರವನ್ನು ಸಾರ್ವಜನಿಕವಾಗಿ ತಿರಸ್ಕರಿಸಿದರು, ಇದನ್ನು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ ಎಂದು ತಿಳಿಸಿದ್ದಾರೆ. ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವಿನ ಯಾವುದೇ ರಾಜತಾಂತ್ರಿಕ ಮುಕ್ತತೆಯು ದುರ್ಬಲವಾಗಿಯೇ ಉಳಿದಿದೆ ಎಂದು ಹೇಳಿದರು.

ಇರಾನ್‌ನ 'ಪ್ರತಿನಿಧಿಗಳು' ಎಂದು ಕರೆಯಲ್ಪಡುವವರ ಪ್ರತಿಕ್ರಿಯೆಯನ್ನು ನಾನು ಈಗಷ್ಟೇ ಓದಿದ್ದೇನೆ. ನನಗೆ ಅದು ಇಷ್ಟವಿಲ್ಲ - ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ ಎಂದು ಟ್ರಂಪ್ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಇದಕ್ಕೂ ಮೊದಲು ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದ ಅವರು, ಟೆಹ್ರಾನ್ ಸುಮಾರು 50 ವರ್ಷಗಳಿಂದ ಅಮೆರಿಕದೊಂದಿಗೆ ಆಟವಾಡುತ್ತಿದೆ ಎಂದು ಟ್ರಂಪ್ ಆರೋಪಿಸಿದರು.



ಅವರು ಇನ್ನು ಮುಂದೆ ನಗುವುದಿಲ್ಲ ಎಂದೂ ಅವರು ಹೇಳಿದ್ದಾರೆ. ನನಗೆ ಅವರ ಪತ್ರ ಇಷ್ಟವಿಲ್ಲ. ಅದು ಅನುಚಿತ. ಅವರ ಪ್ರತಿಕ್ರಿಯೆ ನನಗೆ ಇಷ್ಟವಾಗಿಲ್ಲ ಎಂದು ಟ್ರಂಪ್ ಅಮೆರಿಕದ ಮಾಧ್ಯಮ ಸಂಸ್ಥೆ ಆಕ್ಸಿಯೋಸ್‌ಗೆ ತಿಳಿಸಿದ್ದಾರೆ.

ಪ್ರಸಾರವಾದ ದೂರದರ್ಶನ ಸಂದರ್ಶನವೊಂದರಲ್ಲಿ ಟ್ರಂಪ್, ಇರಾನ್ ಈಗಾಗಲೇ ದೊಡ್ಡ ಸೋಲನ್ನು ಅನುಭವಿಸಿದೆ ಎಂದು ಹೇಳಿದರು. ಹಾಗಿದ್ದರೂ, ಮಾತುಕತೆಗಳು ವಿಫಲವಾದರೆ ವಾಷಿಂಗ್ಟನ್ ಮಿಲಿಟರಿ ಕಾರ್ಯಾಚರಣೆಗಳನ್ನು ವಿಸ್ತರಿಸಲು ಸಿದ್ಧವಾಗಿದೆ ಎಂದು ಹೇಳಿದ್ದರು.

# ಬಂಡಿ ಸಂಜಯ್ ಪುತ್ರನ ವಿರುದ್ಧದ ಪ್ರಕರಣದ ತನಿಖೆ ಆರಂಭಿಸಿ

**ಹೈದರಾಬಾದ್ :** ಕೇಂದ್ರ ಸಚಿವ ಬಂಡಿ ಸಂಜಯ್ ಪುತ್ರ ಸಾಯಿ ಭಗೀರಥ್ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣದ ತನಿಖೆಯನ್ನು ತಕ್ಷಣ ಆರಂಭಿಸುವಂತೆ ಡಿಜಿಪಿ ಸಿವಿ ಆನಂದ್ ಅವರಿಗೆ ಮುಖ್ಯಮಂತ್ರಿ ರೇವಂತ್ ರೆಡ್ಡಿ ಆದೇಶ ಮಾಡಿದ್ದಾರೆ.

ಮೇ 8ರಂದು ದೂರು ಬಂದರೂ ಇಲ್ಲಿಯವರೆಗೆ ಏಕೆ ಕ್ರಮ ಕೈಗೊಳ್ಳಲಿಲ್ಲ ಎಂದು ಸಿಎಂ ಡಿಜಿಪಿಯನ್ನು ಪ್ರಶ್ನಿಸಿದರು. ಈ ವೇಳೆ ಪ್ರಕರಣದ ವಿವರಗಳನ್ನು ಸಿಎಂ ರೇವಂತ್ ರೆಡ್ಡಿ ಅವರಿಗೆ ವಿವರಿಸಿದ ಡಿಜಿಪಿ, ಪ್ರಧಾನಿ ಮೋದಿ ಭೇಟಿಗೆ ವ್ಯವಸ್ಥೆ ಮಾಡುವಲ್ಲಿ ಸಿಬ್ಬಂದಿ ನಿರತರಾಗಿದ್ದಾರೆ ಎಂದರು. ಬಳಿಕ ಪ್ರಕರಣದ ಸಮಗ್ರ ತನಿಖೆಗಾಗಿ ವಿಶೇಷ ತಂಡಗಳನ್ನು ರಚಿಸುವಂತೆ ಮುಖ್ಯಮಂತ್ರಿ ಅವರು ಡಿಜಿಪಿಗೆ ಆದೇಶಿಸಿದ್ದಾರೆ. ಮುಖ್ಯಮಂತ್ರಿ ಆದೇಶದಂತೆ ಬಂಡಿ ಭಗೀರಥ್ ಪ್ರಕರಣದ ತನಿಖೆಯನ್ನು ಮೇಲ್ವಿಚಾರಣೆ ಮಾಡಲು ತೆಲಂಗಾಣದ ಕುಕಟ್ಟಲ್ಲಿ ಪ್ರದೇಶದ ಡಿಸಿಪಿ ರಿತುರಾಜ್ ಅವರಿಗೆ ಡಿಜಿಪಿ ಆದೇಶಿಸಿದ್ದಾರೆ. ಇದು ಪೋಕ್ಸೋ ಪ್ರಕರಣ ಆಗಿರುವುದರಿಂದ, ತನಿಖೆಯನ್ನು ಮಹಿಳಾ ಅಧಿಕಾರಿಗೆ ವಹಿಸಲಾಗಿದೆ. ಮತ್ತೊಂದೆಡೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಬಂಡಿ ಭಗೀರಥ್ ಪೋಕ್ಸೋ ಪ್ರಕರಣಕ್ಕೆ ಪ್ರತಿಕ್ರಿಯಿಸಿದೆ. ಆಯೋಗದ ಅಧ್ಯಕ್ಷೆ ಕೊಥಕೋಟ ಸೀತಾದಾಯಕರ್ ರೆಡ್ಡಿ ಅವರು ಹೈದರಾಬಾದಿನ ಪೊಲೀಸ್ ಆಯುಕ್ತ ಸಜ್ಜನರ್ ಅವರಿಂದ ವಿವರಗಳನ್ನು ಪಡೆದುಕೊಂಡಿದ್ದಾರೆ. ಪೋಕ್ಸೋ ಪ್ರಕರಣದ ತನಿಖೆಗಾಗಿ ವಿಶೇಷ ಪೀಠವನ್ನು ರಚಿಸಲಾಗಿದೆ. **ಪ್ರಕರಣದ ವಿವರ:** ಪೇಟ್‌ಬಶಿರಾಬಾದ್ ಕಮಿಷನರೇಟ್‌ನಲ್ಲಿ ಭಗೀರಥ್ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿತ್ತು. ಭಗೀರಥ್ ತನ್ನ ಮಗಳಿಗೆ ಕಿರುಕುಳ ನೀಡುತ್ತಿದ್ದಾನೆ ಎಂದು ಆರೋಪಿಸಿ ಸಂತ್ರಸ್ತ ಬಾಲಕಿಯ ತಾಯಿ ನೀಡಿದ ದೂರಿನ ಆಧಾರದ ಮೇಲೆ, ಪೇಟ್‌ಬಶಿರಾಬಾದ್ ಪೊಲೀಸರು ಪೋಕ್ಸೋ ಕಾಯ್ದೆಯ ಸೆಕ್ಷನ್ 11 ಮತ್ತು 12 ಮತ್ತು ಐಪಿಸಿಯ ಸೆಕ್ಷನ್ 74 ಮತ್ತು 75 ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು. ಮತ್ತೊಂದೆಡೆ, ಭಗೀರಥ್ ಕರೀಂನಗರದ ಟೂ ಟೌನ್ ಪೊಲೀಸ್ ಠಾಣೆಯಲ್ಲಿ ಪೊಲೀಸರಿಗೆ ದೂರು ನೀಡಿದ ನಂತರ ಮೂವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.



### ಬಂಡಿ ಭಗೀರಥ್ ಪ್ರಕರಣಕ್ಕೂ ಬಿಜೆಪಿಗೂ ಯಾವುದೇ ಸಂಬಂಧವಿಲ್ಲ

**ಬಂಡಿ ಭಾಗೀರಥ್ ಪ್ರಕರಣದಲ್ಲಿ ಕಾನೂನು ತನ್ನ ಕೆಲಸವನ್ನು ಮಾಡುತ್ತದೆ ಎಂದು ಹೇಳಿದ್ದ ಬಿಜೆಪಿ ರಾಜ್ಯಾಧ್ಯಕ್ಷ ರಾಮಚಂದ್ರ ರಾವ್, ಈ ಪ್ರಕರಣಕ್ಕೂ ಬಿಜೆಪಿಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಬಂಡಿ ಸಂಜಯ್ ಕುಟುಂಬದಿಂದ ಯಾವುದೇ ಹಸ್ತಕ್ಷೇಪವಾಗಿದ್ದರೆ ತನಿಖೆ ನಡೆಸುವಂತೆ ಅವರು ಹೇಳಿದ್ದಾರೆ. ಬಂಡಿ ಸಂಜಯ್ ಕುಟುಂಬದಲ್ಲಿ ನಡೆದದ್ದಕ್ಕೂ ಬಿಜೆಪಿಗೆ ಯಾವುದೇ ಸಂಬಂಧವಿಲ್ಲ. ಬಂಡಿ ಸಂಜಯ್ ನಮ್ಮ ನಾಯಕ ಮತ್ತು ಕೇಂದ್ರ ಸಚಿವ. ಬಂಡಿ ಸಂಜಯ್ ಅವರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ. ಸಂಜಯ್ ಈ ಪ್ರಕರಣಕ್ಕೂ ಸಂಪರ್ಕ ಹೊಂದಿದ್ದರೆ, ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು - ರಾಮಚಂದ್ರ ರಾವ್, ಬಿಜೆಪಿ ರಾಜ್ಯಾಧ್ಯಕ್ಷ.**

# ‘ಕೃಷ್ಣಾವತಾರಂ’ ಚಿತ್ರಕ್ಕೆ ತೆರಿಗೆ ವಿನಾಯಿತಿ

ಮೇ 7ರಂದು ಬಿಡುಗಡೆ ಆಗಿರುವ ‘ಕೃಷ್ಣಾವತಾರಂ’ ಸಿನಿಮಾ ಉತ್ತಮವಾಗಿ ಪ್ರದರ್ಶನ ಕಾಣುತ್ತಿದೆ. ಈ ಸಿನಿಮಾಗೆ ಉತ್ತರ ಪ್ರದೇಶದಲ್ಲಿ ತೆರಿಗೆ ವಿನಾಯಿತಿ ನೀಡಲಾಗಿದೆ. ಯೋಗಿ ಆದಿತ್ಯನಾಥ್ ಸರ್ಕಾರದ ಈ ನಿರ್ಧಾರದಿಂದಾಗಿ ಈ ಚಿತ್ರವು ಹೆಚ್ಚಿನ ಜನರನ್ನು ತಲುಪುವ ನಿರೀಕ್ಷೆಯಿದೆ. ಆ ಬಗ್ಗೆ ಇಲ್ಲಿದೆ ವಿವರ.. ಪೌರಾಣಿಕ ಕಥಾಹಂದರ ಹೊಂದಿರುವ ‘ಕೃಷ್ಣಾವತಾರಂ’ ಚಿತ್ರಕ್ಕೆ ಈಗ ದೊಡ್ಡ ಮನ್ನಣೆ ಸಿಕ್ಕಿದೆ. ಚಿತ್ರದ ಸಾಂಸ್ಕೃತಿಕ ಮಹತ್ವ ಮತ್ತು ಜನಪ್ರಿಯತೆಯನ್ನು ಪರಿಗಣಿಸಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಈ ಚಿತ್ರವನ್ನು ರಾಜ್ಯದಲ್ಲಿ ತೆರಿಗೆ ಮುಕ್ತ ಎಂದು ಘೋಷಿಸಿದ್ದಾರೆ. ಇದರಿಂದಾಗಿ ಚಿತ್ರತಂಡಕ್ಕೆ ದೊಡ್ಡ ಬೆಂಬಲ ಸಿಕ್ಕಂತೆ ಆಗಿದೆ. ಹಿಂದಿ, ತೆಲುಗು, ತಮಿಳಿನಲ್ಲಿ ಬಿಡುಗಡೆ ಆಗಿರುವ ಈ ಸಿನಿಮಾದಲ್ಲಿ ಕನ್ನಡದ ಕಲಾವಿದರಾದ ಕಾರ್ತಿಕ್ ಜಯರಾಮ್, ಸುಷ್ಮಿತಾ ಭಟ್ ಕೂಡ ನಟಿಸಿದ್ದಾರೆ ಎಂಬುದು ವಿಶೇಷ.



ಕೇವಲ ತೆರಿಗೆ ಮುಕ್ತಗೊಳಿಸುವುದು ಮಾತ್ರವಲ್ಲದೆ, ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಈ ಚಿತ್ರದ ವಿಶೇಷ ಪ್ರದರ್ಶನಗಳನ್ನು ಆಯೋಜಿಸುವಂತೆ ಮುಖ್ಯಮಂತ್ರಿಗಳು ಮಾಹಿತಿ ಇಲಾಖೆಗೆ ಸೂಚನೆ ನೀಡಿದ್ದಾರೆ. ಇಂದಿನ ಮಕ್ಕಳು ಮತ್ತು ಯುವಜನತೆ ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯೊಂದಿಗೆ ಬೆರೆಯುವಂತಾಗಲಿ ಎಂಬುದು ಅವರ ಈ ಆದೇಶದ ಹಿಂದಿನ ಉದ್ದೇಶವಾಗಿದೆ.

ಈ ಘೋಷಣೆಯ ಸಂದರ್ಭದಲ್ಲಿ ‘ಕೃಷ್ಣಾವತಾರಂ’ ಚಿತ್ರತಂಡದವರು ಯೋಗಿ ಆದಿತ್ಯನಾಥ್ ಅವರನ್ನು ಭೇಟಿ ಮಾಡಿದರು. ನಿರ್ಮಾಪಕರಾದ ಸಜ್ಜನ್ ರಾಜ್ ಕುರುಪ್, ಶೋಭಾ ಸಂತ ಹಾಗೂ ಪೂನಂ ಶ್ರಾಫ್ ಗಜ್ಜರ್, ನಿರ್ದೇಶಕ ಹಾರ್ದಿಕ್ ಗಜ್ಜರ್ ಮತ್ತು ಮುಖ್ಯ ಭೂಮಿಕೆಯ ನಟರಾದ ಸಿದ್ಧಾರ್ಥ್ ಗುಪ್ತಾ ಮತ್ತು ಸಂಸ್ಕೃತಿ ಜಯಾನ ಈ ವೇಳೆ ಉಪಸ್ಥಿತರಿದ್ದರು. ಮೂರು ಭಾಗಗಳ ಸಿನಿಮಾ ಸರಣಿಯ ಮೊದಲ ಭಾಗವಾಗಿರುವ ‘ಕೃಷ್ಣಾವತಾರಂ ಪಾರ್ಟ್ 1’ ಸಿನಿಮಾ ಈಗಾಗಲೇ ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿದೆ. ಅದ್ದೂರಿ ದೃಶ್ಯವೈಭವ, ಸುಮಧುರ ಸಂಗೀತ ಮತ್ತು ಕಲಾವಿದರ ನಟನೆಗೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ಚಿತ್ರದಲ್ಲಿ ಸಿದ್ಧಾರ್ಥ್ ಗುಪ್ತಾ, ಸಂಸ್ಕೃತಿ ಜಯಾನ, ಸುಷ್ಮಿತಾ ಭಟ್ ಮತ್ತು ನಿವಾಶಿನಿ ಕೃಷ್ಣನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ‘ಕೃಷ್ಣಾವತಾರಂ ಪಾರ್ಟ್ 1’ ಚಿತ್ರವು ಭಾನುವಾರ ಭಾರತೀಯ ಬಾಕ್ಸ್ ಆಫೀಸ್‌ನಲ್ಲಿ ಸುಮಾರು 3.25 ಕೋಟಿ ರೂಪಾಯಿ ಗಳಿಕೆ ಮಾಡಿದೆ.

# ರಾಜಮೌಳಿ ನೀರಿನ ಸಮಸ್ಯೆಗೆ ಸಿಕ್ಕಿತು ಪರಿಹಾರ



ನಿರ್ದೇಶಕ ರಾಜಮೌಳಿ ಮತ್ತು ನಟ ಮಹೇಶ್ ಬಾಬು ಒಗ್ಗೂಡುತ್ತಿರುವ ’ವಾರಣಾಸಿ’ ಸಿನಿಮಾ ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿದೆ. ಅಡ್ವೆಂಚರ್ ಆಕ್ಷನ್ ಥ್ರಿಲ್ಲರ್ ಆಗಿರುವ ಈ ಚಿತ್ರಕ್ಕೆ ಪ್ರಿಯಾಂಕಾ ಚೋಪ್ರಾ ಸೇರ್ಪಡೆಯಾಗಿರುವುದು ಖಚಿತವಾಗಿದೆ. ನೀರಿನ ಅಭಾವದ ಸವಾಲುಗಳನ್ನು ನಿವಾರಿಸಿಕೊಂಡು ಚಿತ್ರೀಕರಣ ಮುಂದುವರಿದಿದ್ದು, ಮಲಯಾಳಂ ನಟ ಪೃಥ್ವಿರಾಜ್ ಸೇರಿ ಅನೇಕ ಬಹುಭಾಷಾ ನಟರು ಮುಖ್ಯ ಪಾತ್ರಗಳಲ್ಲಿದ್ದಾರೆ. ನಿರ್ದೇಶಕ ಎಸ್.ಎಸ್. ರಾಜಮೌಳಿ ಮತ್ತು ನಟ ಮಹೇಶ್ ಬಾಬು ಮೊದಲ ಬಾರಿಗೆ ಒಂದಾಗುತ್ತಿರುವ ಸಿನಿಮಾ ‘ವಾರಣಾಸಿ’ ಈಗ ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿದೆ. ಇದೊಂದು ಅಡ್ವೆಂಚರ್ ಆಕ್ಷನ್ ಥ್ರಿಲ್ಲರ್ ಆಗಿದ್ದು, ವಿಶ್ವದ ವಿವಿಧ ದೇಶಗಳಲ್ಲಿ ಚಿತ್ರೀಕರಣಗೊಳ್ಳುತ್ತಿದೆ. ಈ ಸಿನಿಮಾ ಮೇಲೆ ಅಭಿಮಾನಿಗಳು ಭಾರಿ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಇದೀಗ ಚಿತ್ರಕ್ಕೆ ಸಂಬಂಧಿಸಿದಂತೆ ಪ್ರಿಯಾಂಕಾ ಚೋಪ್ರಾ ಮಹತ್ವದ ಅಪ್‌ಡೇಟ್ ಒಂದನ್ನು ನೀಡಿದ್ದಾರೆ.

ರಾಜಮೌಳಿ ಅವರ ಈ ಸಿನಿಮಾಗೆ ನೀರಿನ ಶಾರ್ಟೇಜ್ ಉಂಟಾಗಿದೆ ಎಂದು ವರದಿ ಆಗಿತ್ತು. ನಿರ್ದೇಶಕರು 150 ಟ್ಯಾಂಕರ್ ನೀರನ್ನು ಕೇಳಿದ್ದರು. ಆದರೆ, ಬೇಸಿಗೆ ಆಗಿರುವುದರಿಂದ ಅಷ್ಟೊಂದು ನೀರನ್ನು ಕೊಡಲು ಸಾಧ್ಯವಿಲ್ಲ ಎಂದು ಹೈದರಾಬಾದ್ ಜಲ ಮಂಡಳಿ ಹೇಳಿತ್ತು. ಈಗ ಇದಕ್ಕೆ ರಾಜಮೌಳಿ ಬೇರೆಯ ಅರೇಂಜ್‌ಮೆಂಟ್ಸ್ ಮಾಡಿದ್ದಾರೆ ಎಂಬುದು ತಿಳಿಯುತ್ತಿದೆ. ಏಕೆಂದರೆ, ಪ್ರಿಯಾಂಕಾ ಚೋಪ್ರಾ ಅವರು ಸಿನಿಮಾದ ಶೂಟ್‌ನಲ್ಲಿ ಭಾಗವಹಿಸುತ್ತಿದ್ದಾರೆ.

ಇತ್ತೀಚೆಗೆ ಪ್ರಿಯಾಂಕಾ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಫೋಟೋ ಒಂದನ್ನು ಹಂಚಿಕೊಂಡಿರುವ ಪ್ರಿಯಾಂಕಾ ಚೋಪ್ರಾ, ‘ವಾರಣಾಸಿ, ಹಿಯರ್ ವಿ ಗೋ’ ಎಂದು ಬರೆದುಕೊಂಡಿದ್ದಾರೆ.

# ವಿಚಿತ್ರ ಫ್ಯಾಷನ್ ಸ್ಟೈಲ್‌ನಲ್ಲಿ ತಮನ್ನಾ



ನಟಿ ತಮನ್ನಾ ಭಾಟಿಯಾ ಕಾಮಿಕ್ ಕಾನ್ ಕಾರ್ಯಕ್ರಮದಲ್ಲಿ ಧರಿಸಿದ್ದ ವಿಶಿಷ್ಟ ಜೀನ್ಸ್ ಉಡುಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ. ಅವರ 'ವಿಚಿತ್ರ ಫ್ಯಾಷನ್' ಶೈಲಿಗೆ ಟ್ರೋಲ್‌ಗಳು ಎದುರಾಗಿದ್ದು, ಕೆಲವರು ಧೈರ್ಯಕ್ಕೆ ಬೆಂಬಲ ನೀಡಿದ್ದಾರೆ. ಸೆಲೆಬ್ರಿಟಿಗಳ ಬೋಲ್ಡ್ ಫ್ಯಾಷನ್ ಆಯ್ಕೆಗಳು ನಿರಂತರವಾಗಿ ಗಮನ ಸೆಳೆಯುತ್ತಿವೆ. ಸೆಲೆಬ್ರಿಟಿಗಳ ಉಡುಗೆ ಬಗ್ಗೆ ಆಗಾಗ ಚರ್ಚೆ ನಡೆಯುತ್ತಲೇ ಇರುತ್ತದೆ. ಅವರು ಹಾಕುವ ಚಿತ್ರ-ವಿಚಿತ್ರ ಉಡುಗೆ ಚರ್ಚೆ ಆಗುತ್ತದೆ. ಈಗ ನಟಿ ತಮನ್ನಾ ಭಾಟಿಯಾ ಅವರ ಹೊಸ ವಿಡಿಯೋ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ. ಮುಂಬೈನಲ್ಲಿ ನಡೆದ ‘ಕಾಮಿಕ್ ಕಾನ್’ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ತಮನ್ನಾ ಉಡುಗೆಯ ಶೈಲಿ ಅನೇಕರಿಗೆ ವಿಚಿತ್ರವಾಗಿ ಕಂಡಿದೆ. ಕೆಲವರು ಇದನ್ನು ಟ್ರೋಲ್ ಮಾಡಿದ್ದಾರೆ. ತಮನ್ನಾ ಈ ಕಾರ್ಯಕ್ರಮಕ್ಕೆ ಬಿಳಿ ಬಣ್ಣದ ಕ್ರಾಪ್ ಟೀ-ಶರ್ಟ್ ಮತ್ತು ತಿಳಿ ನೀಲಿ ಬಣ್ಣದ ಡೆನಿಮ್ ಜೀನ್ಸ್ ಧರಿಸಿದ್ದರು. ಆದರೆ, ಈ ಜೀನ್ಸ್ ಪ್ಯಾಂಟ್ ವಿನ್ಯಾಸವು ಅತ್ಯಂತ ವಿಭಿನ್ನವಾಗಿತ್ತು. ಪ್ಯಾಂಟ್‌ನ ಸೊಂಟದ ಭಾಗದಲ್ಲಿ ದೊಡ್ಡದಾದ ಕಟ್‌ಗಳಿದ್ದು, ಅವುಗಳನ್ನು ಚೈನ್‌ನಿಂದ ಜೋಡಿಸಲಾಗಿತ್ತು. ಇದು ನೋಡಲು ಜೀನ್ಸ್ ಪ್ಯಾಂಟ್ ಜಾರಿ ಬೀಳುತ್ತಿರುವಂತೆ ಭಾಸವಾಗುತ್ತಿದ್ದುದರಿಂದ ಅನೇಕ ನೆಟ್ಟಿಗರು ಇದನ್ನು ‘ವಿಚಿತ್ರ ಫ್ಯಾಷನ್’ ಎಂದು ಕರೆದಿದ್ದಾರೆ.

ಕೆಲವರಿಗೆ ಅವರ ಡ್ರೆಸ್ ಮುಜುಗ ತಂದಿದೆ. ಆದರೆ, ತಮನ್ನಾ ಈ ಡ್ರೆಸ್ ಅನ್ನು ತುಂಬಾನೇ ಇಷ್ಟಪಟ್ಟಿದ್ದಾರೆ. ವಿಡಿಯೋದಲ್ಲಿ ತಮನ್ನಾ ಕ್ಯಾಮೆರಾಗಳಿಗೆ ಪೋಸ್ ನೀಡುತ್ತಾ ನಕ್ಕಿದ್ದಾರೆ. ಆದರೆ ಈ ವಿಡಿಯೋ ವೈರಲ್ ಆಗುತ್ತಿದ್ದಂತೆ, ‘ಇದು ಯಾವ ತರಹದ ಡ್ರೆಸ್’, ‘ಫ್ಯಾಷನ್ ಹೆಸರಲ್ಲಿ ಏನೆಲ್ಲಾ ಮಾಡ್ತಾರೆ’ ಎಂಬಂತಹ ಟೀಕೆಗಳು ಕೇಳಿಬಂದಿವೆ.

# ಜೆನ್ ಜೀ ಪ್ರೇಕ್ಷಕರ ಮನಗೆಲ್ಲುವ ಪ್ರಯತ್ನ

ನಟ ಅಗಸ್ತ್ಯ ಅವರ ಹೊಸ ಸಿನಿಮಾ ಶೀರ್ಷಿಕೆ ‘ಡಿಂಚಕ್ ಡಿಂಚಕ್’. ಹೊಸ ತಲೆಮಾರಿನ ಪ್ರೇಕ್ಷಕರನ್ನು ಗಮನದಲ್ಲಿ ಇಟ್ಟುಕೊಂಡು ಈ ಸಿನಿಮಾ ಸಿದ್ಧವಾಗಲಿದೆ. ಈ ಚಿತ್ರಕ್ಕೆ ಅಗಸ್ತ್ಯ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ‘ಶ್ರೀರತ್ನ ಫಿಲ್ಮ್ ಕಂಪನಿ’ ಮೂಲಕ ಈ ಸಿನಿಮಾ ನಿರ್ಮಾಣ ಆಗಲಿದೆ. ‘ಜೊತೆಯಾಗಿ ಹಿತವಾಗಿ’ ಎಂಬ ಕಾವ್ಯಾತ್ಮಕ ಚಿತ್ರದ ಮೂಲಕ ಸದ್ದಿಲ್ಲದೆ ಸ್ಯಾಂಡಲ್‌ವುಡ್ ಪ್ರವೇಶಿಸಿ ಪ್ರೇಕ್ಷಕರ ಗಮನ ಸೆಳೆದಿದ್ದ ಹೊಸ ನಟ ಅಗಸ್ತ್ಯ ಅವರು ಈಗ ತಮ್ಮ ಎರಡನೇ ಸಿನಿಮಾದೊಂದಿಗೆ ಪ್ರೇಕ್ಷಕರ ಎದುರು ಬರಲು ಸಿದ್ಧತೆ ಮಾಡಿಕೊಂಡಿದ್ದಾರೆ. ವಿಭಿನ್ನ ಶೀರ್ಷಿಕೆಯ ಮೂಲಕ ಕುತೂಹಲ ಮೂಡಿಸುವ ಪ್ರಯತ್ನ ಅವರದ್ದಾಗಿದೆ. ಈ ಸಿನಿಮಾಗೆ ‘ಡಿಂಚಕ್ ಡಿಂಚಕ್’ ಎಂದು ಹೆಸರಿಡಲಾಗಿದೆ. ಹದಿಹರೆಯದವರ ತರಲೆ-ತಮಾಷೆ ಹಾಗೂ ಕೌಟುಂಬಿಕ ಭಾವನೆಗಳನ್ನೊಳಗೊಂಡ ಅಚ್ಚುಕಟ್ಟಾದ ಕಥಾ ಎಳೆಯನ್ನು ಅಗಸ್ತ್ಯ ಸಿದ್ಧಪಡಿಸಿಕೊಂಡಿದ್ದಾರೆ.



ಇತ್ತೀಚಿನ ದಿನಗಳಲ್ಲಿ ದಕ್ಷಿಣ ಭಾರತದ ಸಿನಿಮಾಗಳಲ್ಲಿ ವಿಚಿತ್ರ ಎನಿಸಿದರೂ, ಇಂದಿನ ತಲೆಮಾರಿಗೆ ಹತ್ತಿರವಾಗುವ ಶೀರ್ಷಿಕೆಗಳು ಹೆಚ್ಚು ಆಕರ್ಷಕ ಎನಿಸಿಕೊಳ್ಳುತ್ತಿವೆ ಎಂಬುದು ಚಿತ್ರತಂಡದ ನಂಬಿಕೆ.

ಇದೇ ಹಾದಿಯಲ್ಲಿ ಹೊರಟಿರುವ ‘ಡಿಂಚಕ್ ಡಿಂಚಕ್’ ಚಿತ್ರತಂಡ, ಪ್ರಮುಖವಾಗಿ ಜನ್-ಜೀ ಮತ್ತು ಜನ್ ಆಲ್ಫಾ ವರ್ಗದವರನ್ನು ಗಮನದಲ್ಲಿ ಇಟ್ಟುಕೊಂಡಿದೆ.

ಕಳೆದ ವರ್ಷ ಬಿಡುಗಡೆಯಾಗಿದ್ದ ‘ಜೊತೆಯಾಗಿ ಹಿತವಾಗಿ’ ಸಿನಿಮಾ ಸೀಮಿತ ಬಜೆಟ್‌ನಲ್ಲಿ ನಿರ್ಮಾಣವಾಗಿದ್ದರೂ, ಅಗಸ್ತ್ಯ ಅವರ ನಟನೆಗೆ ಮೆಚ್ಚುಗೆ ವ್ಯಕ್ತವಾಗಿತ್ತು. ಈಗ ಎರಡನೇ ಚಿತ್ರದಲ್ಲಿ ನಟನೆಯ ಜೊತೆಗೆ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದ ಜವಾಬ್ದಾರಿಯನ್ನೂ ತಮ್ಮ ತಂಡದೊಂದಿಗೆ ಹಂಚಿಕೊಂಡು ಸಾಗಲು ಅಗಸ್ತ್ಯ ಅಣಿಯಾಗಿದ್ದಾರೆ ಎಂಬುದು ವಿಶೇಷ.

‘ಶ್ರೀರತ್ನ ಫಿಲ್ಮ್ ಕಂಪನಿ’ ಮೂಲಕ ಈ ಸಿನಿಮಾ ನಿರ್ಮಾಣ ಆಗಲಿದೆ. ಆನಂದ್ ರಾಜ ವಿಕ್ರಮ ಅವರು ಸಂಗೀತ ನೀಡುತ್ತಿದ್ದಾರೆ.

# ರಸ್ತೆ ಅಪಘಾತದಲ್ಲಿ ಭರತ್ ಕಾಂತ್ ನಿಧನ



ಚಿತ್ರರಂಗದ ಕಂಬನಿ

ಹೈದರಾಬಾದ್‌ನ ಹೊರವರ್ತುಲ ರಸ್ತೆಯಲ್ಲಿ ಸಂಭವಿಸಿದ ಭೀಕರ ಕಾರು ಅಪಘಾತದಲ್ಲಿ ತೆಲುಗು ನಟ ಭರತ್ ಕಾಂತ್ ನಿಧನರಾಗಿದ್ದಾರೆ. ಇವರೊಂದಿಗೆ ಸಿನಿಮಾಟೋಗ್ರಾಫರ್ ಸಾಯಿ ತ್ರಿಲೋಕ್ ಕೂಡ ಪ್ರಾಣ ಕಳೆದುಕೊಂಡಿದ್ದಾರೆ.

ಭರತ್ ಅವರ ಅಕಾಲಿಕ ನಿಧನಕ್ಕೆ ಚಿತ್ರರಂಗದವರು ತೀವ್ರ ಸಂತಾಪ ಸೂಚಿಸಿದ್ದಾರೆ.

ತೆಲುಗು ಚಿತ್ರರಂಗದ ಉದಯೋನ್ಮುಖ ನಟ ಭರತ್ ಕಾಂತ್ (31) ಅವರು ಹೈದರಾಬಾದ್‌ನ ಹೊರವರ್ತುಲ ರಸ್ತೆಯಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ನಿಧನರಾಗಿದ್ದಾರೆ. ಭರತ್ ಅವರೊಂದಿಗೆ ಪ್ರಯಾಣಿಸುತ್ತಿದ್ದ ಸಾಯಿ ತ್ರಿಲೋಕ್ ಎಂಬುವವರು ಕೂಡ ಈ ದುರ್ಘಟನೆಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಅದಿಬಟ್ಲ ಪೊಲೀಸ್ ಠಾಣಾ ವ್ಯಾಪ್ತಿಯ ಎಕ್ಸಿಟ್ ನಂ. 12ರ ಬಳಿ ತಡರಾತ್ರಿ ಈ ಅಪಘಾತ ಸಂಭವಿಸಿದೆ.

ಭರತ್ ಕಾಂತ್ , ಸಾಯಿ ತ್ರಿಲೋಕ್ ಪ್ರಯಾಣಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ಮುಂದೆ ಹೋಗುತ್ತಿದ್ದ ಟ್ರಕ್‌ಗೆ ಹಿಂಬದಿಯಿಂದ ಬಲವಾಗಿ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಸ್ಥಳದಲ್ಲೇ ಭರತ್ ಕಾಂತ್ ಮತ್ತು ಸಾಯಿ ತ್ರಿಲೋಕ್ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸದ್ಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಚಿತ್ರರಂಗದ ಗಣ್ಯರು ಹಾಗೂ ಅಭಿಮಾನಿಗಳು ಭರತ್ ಕಾಂತ್ ಮತ್ತು ಸಾಯಿ ತ್ರಿಲೋಕ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ. ಭರತ್ ಕಾಂತ್ ಅವರು ‘ಗ್ರಾಮಂ’ ಮತ್ತು ‘ಟೆನೆಂಟ್’ ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ನಟಿಸುವ ಮೂಲಕ ಗುರುತಿಸಿಕೊಂಡಿದ್ದರು. ಕೇವಲ ಸಿನಿಮಾಗಳಲ್ಲದೇ ‘ಗೀತಾಂಜಲಿ’ ಮತ್ತು ‘ಪಾರ್ವತಿ ಪರಮೇಶ್ವರಲು’ ಮುಂತಾದ ಜನಪ್ರಿಯ ವೆಬ್ ಸರಣಿಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದರು. ಅವರೊಂದಿಗೆ ಮೃತಪಟ್ಟ ಸಾಯಿ ತ್ರಿಲೋಕ್ ಅವರು ಸಿನಿಮಾಟೋಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದರು. ಭರತ್ ಅವರ ಆಪ್ತ ಗೆಳತಿ ಹಾಗೂ ನಟಿ ಆಶು ರೆಡ್ಡಿ ಈ ಸಾವಿನ ಸುದ್ದಿಯಿಂದ ದಿಗ್ಭ್ರಾಂತರಾಗಿದ್ದಾರೆ. ಇನ್‌ಸ್ಟಾಗ್ರಾಮ್‌ನಲ್ಲಿ ಭರತ್ ಜೊತೆಗಿನ ಫೋಟೋಗಳನ್ನು ಹಂಚಿಕೊಂಡಿರುವ ಅವರು, ‘ಇದು ನನಗೆ ವೈಯಕ್ತಿಕ ನಷ್ಟ. ನನ್ನ ಆತ್ಮೀಯ ಗೆಳೆಯ, ನನ್ನ ಎಮರ್ಜೆನ್ಸಿ ಕಾಂಟ್ಯಾಕ್ಟ್ ಮತ್ತು ನನ್ನ ಕುಟುಂಬದಂತಿದ್ದ ವ್ಯಕ್ತಿ ಈಗ ನಿಧನರಾಗಿದ್ದಾರೆ. ನೀನು ಹೋದ ಜಾಗಕ್ಕೆ ಈ ಸಂದೇಶ ತಲುಪುವುದಿಲ್ಲ ಎಂದು ಗೊತ್ತಿದ್ದರೂ ಬರೆಯುತ್ತಿದ್ದೇನೆ. ನಿನ್ನ ನಗು ಯಾವಾಗಲೂ ನೆನಪಿರುತ್ತದೆ’ ಎಂದು ಭಾವುಕರಾಗಿ ಬರೆದುಕೊಂಡಿದ್ದಾರೆ. ಕಾರು ಚಾಲಕನ ಅತಿ ವೇಗ ಮತ್ತು ನಿರ್ಲಕ್ಷ್ಯದ ಚಾಲನೆಯಿಂದಾಗಿ ಈ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಶಂಕಿಸಿದ್ದಾರೆ. ಮೃತರ ದೇಹಗಳನ್ನು ಉಸ್ಮಾನಿಯಾ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಗಿತ್ತು.

# ಗೇಲಿ ಮಾಡಿದ್ದ ಕೆಕೆಆರ್‌ಗೆ ತಕ್ಕ ತಿರುಗೇಟು ನೀಡುತ್ತಾ ಆರ್‌ಸಿಬಿ



ಐಪಿಎಲ್ 2026 ರ 57ನೇ ಪಂದ್ಯದಲ್ಲಿ ಆರ್‌ಸಿಬಿ ಮತ್ತು ಕೆಕೆಆರ್ ಮುಖಾಮುಖಿಯಾಗಲಿವೆ. ಪ್ಲೇ ಆಫ್ ದೃಷ್ಟಿಯಿಂದ ಇದು ಉಭಯ ತಂಡಗಳಿಗೂ ನಿರ್ಣಾಯಕ. ಕೆಕೆಆರ್‌ಗೆ ಇದು ಮಾಡು ಇಲ್ಲವೇ ಮಡಿ ಪಂದ್ಯವಾಗಿದ್ದು, ಗೆದ್ದರೆ ಮಾತ್ರ ಪ್ಲೇ ಆಫ್ ಕನಸು ಜೀವಂತ. ಇತ್ತ ಆರ್‌ಸಿಬಿ, ಕೆಕೆಆರ್ ಫ್ರಾಂಚೈಸಿ ಈ ಹಿಂದೆ ಮಾಡಿದ ಅವಮಾನಕ್ಕೆ ತಕ್ಕ ತಿರುಗೇಟು ನೀಡಲು ಸಜ್ಜಾಗಿದೆ. ಹಳೆಯ ಪಂದ್ಯಗಳ ಅವಮಾನಕ್ಕೆ ಸೇಡು ತೀರಿಸಿಕೊಳ್ಳಲು ಆರ್‌ಸಿಬಿ ಕಾಯುತ್ತಿದೆ. ಐಪಿಎಲ್ 2026 ರ 57ನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪ್ಲೇ ಆಫ್ ದೃಷ್ಟಿಯಿಂದ ಈ ಪಂದ್ಯ ಉಭಯ ತಂಡಗಳಿಗೂ ನಿರ್ಣಾಯಕವಾಗಿದೆ. ಅದರಲ್ಲೂ ಆರ್‌ಸಿಬಿಗೆ ಹೋಲಿಸಿದರೆ, ಕೆಕೆಆರ್‌ಗೆ ಮಾಡು ಇಲ್ಲವೇ ಮಡಿ ಪಂದ್ಯವಾಗಿದೆ. ಈ ಪಂದ್ಯದಲ್ಲಿ ಗೆದ್ದರಷ್ಟೇ ಕೆಕೆಆರ್‌ಗೆ ಪ್ಲೇಆಫ್ ಕನಸು ಜೀವಂತ, ಇಲ್ಲದಿದ್ದರೆ ಅದು ಕೂಡ ಲೀಗ್ ಹಂತದಲ್ಲೇ ಹೊರಬೀಳಲಿದೆ. ಹೀಗಾಗಿ ರಹಾನೆ ಪಡೆ ಗೆಲ್ಲಲೇಬೇಕಾದ ಒತ್ತಡದಲ್ಲಿದೆ. ಇತ್ತ ಆರ್‌ಸಿಬಿ, ಲೀಗ್ ಆರಂಭಕ್ಕೂ ಮುನ್ನ ಕೆಕೆಆರ್ ಫ್ರಾಂಚೈಸಿ ಮಾಡಿದ್ದ ಅವಮಾನಕ್ಕೆ ತಕ್ಕ ತಿರುಗೇಟು ನೀಡಲು ತಯಾರಾಗಿದೆ.

**158 ರನ್ ನೆನಪಿಸಿದ್ದ ಕೆಕೆಆರ್**

**ಪ್ರೋಮೋದಲ್ಲಿ ಆರ್‌ಸಿಬಿಗೆ ಅವಮಾನ**

ವಾಸ್ತವವಾಗಿ ಐಪಿಎಲ್ ಆರಂಭಕ್ಕೂ ಮುನ್ನ ಕೆಕೆಆರ್ ಫ್ರಾಂಚೈಸಿ ತನ್ನ ತಂಡದ ನೂತನ ಜೆರ್ಸಿಯನ್ನು ಸೋಶಿಯಲ್ ಮೀಡಿಯಾದಲ್ಲಿ ಬಿಡುಗಡೆ ಮಾಡಿತ್ತು. 1:38 ನಿಮಿಷಗಳ ವಿಡಿಯೋದಲ್ಲಿ ಕೆಕೆಆರ್ ತನ್ನ ಕೆಲವು ಐತಿಹಾಸಿಕ ಸಾಧನೆಗಳನ್ನು ನೆನಪು ಮಾಡಲು ಪ್ರಯತ್ನಿಸಿತ್ತು.

ಇದರಲ್ಲಿ ಹೆಚ್ಚಿನದಾಗಿ ಆರ್‌ಸಿಬಿ ವಿರುದ್ಧ ಕೆಕೆಆರ್ ತಂಡದ ಪಾರುಪತ್ಯ ಹೇಗಿತ್ತು ಎಂಬುದನ್ನು ಹೇಳುವುದರ ಜೊತೆಗೆ ಉದ್ದೇಶಪೂರ್ವಕವಾಗಿಯೇ ಆರ್‌ಸಿಬಿಯನ್ನು ಅಣಕಿಸುವ ಕೆಲಸ ಮಾಡಿತ್ತು. ಕೆಕೆಆರ್ ಫ್ರಾಂಚೈಸಿ ಬಿಡುಗಡೆ ಮಾಡಿದ್ದ ಆ ವಿಡಿಯೋದಲ್ಲಿ ಮೊದಲಿಗೆ ಟ್ರಾಫಿಕ್ ಸಿಗ್ನಲ್ ತೋರಿಸಲಾಗಿದ್ದು, ಆ ಸಿಗ್ನಲ್‌ನ ಒಂದು ದೀಪದಲ್ಲಿ 49 ಎಂದು ಬರೆಯಲಾಗಿತ್ತು. ಸಾಮಾನ್ಯವಾಗಿ ಇದು 49 ಸೆಕೆಂಡುಗಳನ್ನು ಅರ್ಥೈಸುತ್ತದೆಯಾದರೂ, ಇಲ್ಲಿ ತನ್ನ ಬುದ್ಧಿ ಬಳಸಿರುವ ಕೆಕೆಆರ್, ಹಾಲಿ ಚಾಂಪಿಯನ್ ಬೆಂಗಳೂರು ತಂಡವನ್ನು 49 ರನ್‌ಗಳಿಗೆ ಆಲೌಟ್ ಮಾಡಿದ್ದನ್ನು ನೆನಪಿಸುವ ಕೆಲಸ ಮಾಡಿತ್ತು. ವಾಸ್ತವವಾಗಿ, 2017 ರ ಆವೃತ್ತಿಯಲ್ಲಿ ಕೆಕೆಆರ್ ಹಾಗೂ ಆರ್‌ಸಿಬಿ ನಡುವೆ ಪಂದ್ಯ ನಡೆದಿತ್ತು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಕೆಕೆಆರ್ 131 ರನ್ ಕಲೆಹಾಕಿತ್ತು. ಈ ಗುರಿ ಬೆನ್ನಟ್ಟಿದ್ದ ಆರ್‌ಸಿಬಿ ಕೇವಲ 49 ರನ್‌ಗಳಿಗೆ ಆಲೌಟ್ ಆಗಿ, ಐಪಿಎಲ್ ಇತಿಹಾಸದಲ್ಲೇ ಅತಿ ಕಡಿಮೆ ಮೊತ್ತಕ್ಕೆ ಆಲೌಟ್ ಆದ ಮೊದಲ ತಂಡವೆಂಬ ಮುಜುಗರದ ದಾಖಲೆಗೆ ಕೊರಳೊಡ್ಡಿತ್ತು.

ಇದಾದ ಬಳಿಕ ಸಿನಿಮಾ ಚಿತ್ರೀಕರಣದಲ್ಲಿ 158ನೇ ಟೇಕ್ ಎಂಬುದನ್ನು ಬಳಸಿರುವ ಕೆಕೆಆರ್ ಮತ್ತೆ ಆರ್‌ಸಿಬಿಯನ್ನು ಅಣಕಿಸುವ ಕೆಲಸ ಮಾಡಿತ್ತು. ಐಪಿಎಲ್ ಮೊದಲ ಆವೃತ್ತಿಯಲ್ಲಿ ಆರ್‌ಸಿಬಿ ಹಾಗೂ ಕೆಕೆಆರ್ ನಡುವೆ ಮೊದಲ ಪಂದ್ಯ ನಡೆದಿತ್ತು. ಆ ಪಂದ್ಯದಲ್ಲಿ ಕೆಕೆಆರ್ ಪರ ಆಡಿದ್ದ ಬ್ರೆಂಡನ್ ಮೆಕಲಮ್ ಬರೋಬ್ಬರಿ 158 ರನ್‌ಗಳ ಇನ್ನಿಂಗ್ಸ್ ಆಡಿದ್ದರು. ಆ ಪಂದ್ಯದಲ್ಲೂ ಆರ್‌ಸಿಬಿ ಹೀನಾಯವಾಗಿ ಸೋತಿತ್ತು.

ಆರ್‌ಸಿಬಿ ಮುಂದಿನ ಪಂದ್ಯ ಯಾವಾಗ ಎದುರಾಳಿ ಯಾರು ಅದೇ ರೀತಿ, ಒಂದು ಸ್ಥಳದಲ್ಲಿ, 105/0 6 ಓವರ್‌ಗಳು ಎಂದು ಬರೆಯಲಾಗಿತ್ತು. ಇದು 2017 ರಲ್ಲಿ ಆರ್‌ಸಿಬಿ ವಿರುದ್ಧದ ಪಂದ್ಯದ ಪವರ್‌ಪ್ಲೇನಲ್ಲಿ ಕೆಕೆಆರ್ ದಾಖಲಿಸಿದ ಅತ್ಯಧಿಕ ಸ್ಕೋರ್ ಆಗಿತ್ತು. ಈ ಎಲ್ಲಾ ಹಳೆಯ ಘಟನೆಗಳನ್ನು ನೆನಪಿಸುತ್ತಾ ಆರ್‌ಸಿಬಿಯನ್ನು ಜರಿಯುವ ಕೆಲಸವನ್ನು ಕೆಕೆಆರ್ ಮಾಡಿತ್ತು.

ಇದೀಗ ಆರ್‌ಸಿಬಿ, ಕೆಕೆಆರ್‌ಗೆ ಸರಿಯಾದ ಪಾಠ ಕಲಿಸಲು ಸಜ್ಜಾಗಿದೆ. ಇತ್ತ ಅಭಿಮಾನಿಗಳು ಕೂಡ ಆರ್‌ಸಿಬಿ, ಕೆಕೆಆರ್ ವಿರುದ್ಧ ಯಾವ ರೀತಿಯ ಪ್ರದರ್ಶನ ನೀಡಲಿದೆ ಎಂಬುದನ್ನು ನೋಡಲು ಕಾದು ಕುಳಿತಿದ್ದಾರೆ.

# ದಶಕದ ಬಳಿಕ ಸಿಡಿಸಿದ ಸಿಕ್ಸ್ ಮೌಲ್ಯ ‘99 ಲಕ್ಷ ರೂ.’

ಇಂಡಿಯನ್ ಪ್ರೀಮಿಯರ್ ಲೀಗ್‌ನ 54ನೇ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಮುಂಬೈ ಇಂಡಿಯನ್ಸ್ ತಂಡವು 20 ಓವರ್‌ಗಳಲ್ಲಿ 167 ರನ್ ಕಲೆಹಾಕಿದ್ದರು. ಈ ಗುರಿಯನ್ನು ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 20 ಓವರ್‌ಗಳಲ್ಲಿ 168 ರನ್ ಬಾರಿಸಿ ರೋಚಕ ಗೆಲುವು ಸಾಧಿಸಿದೆ. ಈ ಗೆಲುವಿನೊಂದಿಗೆ ಆರ್‌ಸಿಬಿ ತಂಡ ಅಂಕ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. 2016 ರಿಂದ 2026 ಅಕ್ಷರಶಃ ಹತ್ತು ವರ್ಷಗಳ ಅಂತರ! ಭುವನೇಶ್ವರ್ ಕುಮಾರ್ ಐಪಿಎಲ್‌ನಲ್ಲಿ ತಮ್ಮ ನಾಲ್ಕನೇ ಸಿಕ್ಸರ್ ಸಿಡಿಸಲು ತೆಗೆದುಕೊಂಡ ಸಮಯವಿದು. ಮುಂಬೈ ಇಂಡಿಯನ್ಸ್ ವಿರುದ್ಧದ ರೋಚಕ ಪಂದ್ಯದಲ್ಲಿ ಆರ್‌ಸಿಬಿ ತಂಡಕ್ಕೆ ಅನಿರೀಕ್ಷಿತ ಗೆಲುವು ತಂದುಕೊಟ್ಟ ಆ ಸಿಕ್ಸರ್ ಮೌಲ್ಯ ಬರೋಬ್ಬರಿ 99 ಲಕ್ಷ ರೂ..!

ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿಗೆ ಗೆಲ್ಲಲು ಕೊನೆಯ ಓವರ್‌ನಲ್ಲಿ ಕಠಿಣ ಸವಾಲಿತ್ತು. ಅದರಲ್ಲೂ ಅಂತಿಮ 3 ಎಸೆತಗಳಲ್ಲಿ 9 ರನ್ ಬೇಕಿದ್ದಾಗ, ಒತ್ತಡದ ಪರಿಸ್ಥಿತಿಯಲ್ಲೂ ಭುವನೇಶ್ವರ್ ಕುಮಾರ್ ಮೈದಾನದ ಆಚೆಗೆ ಚೆಂಡನ್ನು ಅಟ್ಟಿದರು.




ಈ ಒಂದು ಸಿಕ್ಸರ್‌ನಿಂದ ಆರ್‌ಸಿಬಿಯ ಗೆಲುವಿನ ಸಾಧ್ಯತೆಯನ್ನು 51% ರಿಂದ ನೇರವಾಗಿ 99% ಕ್ಕೆ ಏರಿಸಿತು. ಅಲ್ಲದೆ ಈ ಸಿಕ್ಸರ್‌ನ ಮೌಲ್ಯ ವಿಶ್ಲೇಷಣಾತ್ಮಕವಾಗಿ ಸುಮಾರು 99 ಲಕ್ಷ ಎಂದು ಅಂದಾಜಿಸಲಾಗಿದೆ! ಅಂದರೆ ದಶಕದ ಬಳಿಕ ಭುವಿ ಬ್ಯಾಟ್‌ನಿಂದ ಸಿಡಿದ ಸಿಕ್ಸ್ ಇದೀಗ 99 ಲಕ್ಷ ರೂ. ಮೌಲ್ಯದ್ದು ಎಂಬುದು ವಿಶೇಷ.

**4 ಸಿಕ್ಸರ್‌ಗಳು:** ಕ್ರಿಕೆಟ್ ಲೋಕದಲ್ಲಿ ಭುವನೇಶ್ವರ್ ಕುಮಾರ್ ಒಬ್ಬ ಪರಿಣಿತ ಬೌಲರ್ ಎಂಬುದು ಎಲ್ಲರಿಗೂ ಗೊತ್ತು. ಆದರೆ ಐಪಿಎಲ್ ಇತಿಹಾಸದಲ್ಲಿ ಅವರು ಸಿಕ್ಸರ್ ಸಿಡಿಸುವುದು ಒಂದು ಅಪರೂಪದ ವಿದ್ಯಮಾನ. 2016ರಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಪರ ಆಡುವಾಗ ಕೊನೆಯ ಬಾರಿಗೆ ಸಿಕ್ಸರ್ ಬಾರಿಸಿದ್ದ ಭುವಿ, ಆ ಬಳಿಕ ಬೌಂಡರಿಗಳನ್ನಷ್ಟೇ ನಂಬಿದ್ದರು. ಆದರೆ ಮೇ 10, 2026 ರಂದು ಮುಂಬೈ ಇಂಡಿಯನ್ಸ್ ವಿರುದ್ಧ ನಡೆದ ಪಂದ್ಯದಲ್ಲಿ, ಬರೊಬ್ಬರಿ 10 ವರ್ಷಗಳ ನಂತರ ಭುವಿ ಸಿಕ್ಸರ್ ಸಿಡಿಸಿ ಅಭಿಮಾನಿಗಳನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿದರು. ಅಲ್ಲದೆ ಈವರೆಗೆ ಅವರು ಐಪಿಎಲ್‌ನಲ್ಲಿ ಬಾರಿಸಿರುವುದು ಕೇವಲ 4 ಸಿಕ್ಸರ್‌ಗಳು ಮಾತ್ರ.

**‘ಪರ್ಪಲ್’ ಮಿಂಚು:** ಬ್ಯಾಟಿಂಗ್‌ನಲ್ಲಿ ಮಿಂಚುವುದಕ್ಕೂ ಮುನ್ನ, ಭುವನೇಶ್ವರ್ ತಮ್ಮ ಪ್ರಧಾನ ಕೆಲಸವಾದ ಬೌಲಿಂಗ್‌ನಲ್ಲೂ ಕಿಚ್ಚು ಹಚ್ಚಿದ್ದರು. ಮುಂಬೈ ಇಂಡಿಯನ್ಸ್ ವಿರುದ್ಧದ ಈ ಪಂದ್ಯದಲ್ಲಿ 4 ಓವರ್‌ಗಳನ್ನು ಎಸೆದಿದ್ದ ಭುವಿ ಕೇವಲ 23 ರನ್ ನೀಡಿ 4 ವಿಕೆಟ್ ಕಬಳಿಸಿದ್ದರು. ಈ ಮೂಲಕ ಒಟ್ಟು 21 ವಿಕೆಟ್‌ಗಳೊಂದಿಗೆ ಅವರು ಈ ಸೀಸನ್‌ನ ‘ಪರ್ಪಲ್ ಕ್ಯಾಪ್’ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ.

# ಗೆಲುವಿನ ಬೆನ್ನಲ್ಲೇ ಆರ್‌ಸಿಬಿ ಕೋಚ್‌ಗೆ ಭಾರಿ ದಂಡ!



ಇಂಡಿಯನ್ ಪ್ರೀಮಿಯರ್ ಲೀಗ್‌ನ 54ನೇ ಪಂದ್ಯದ ವೇಳೆ ಅಸಭ್ಯ ಪದಗಳನ್ನು ಬಳಸಿದ ಕಾರಣಕ್ಕಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಅವರಿಗೆ ಪಂದ್ಯದ ಶುಲ್ಕದ ಶೇ. 15 ರಷ್ಟು ದಂಡ ವಿಧಿಸಲಾಗಿದೆ. ರಾಯ್‌ಪುರ್‌ನಲ್ಲಿ ನಡೆದ ಈ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಈ ಮ್ಯಾಚ್ ನಡುವೆ ಆರ್‌ಸಿಬಿ ಕೋಚ್ ನಾಲ್ಕನೇ ಅಂಪೈರ್ ಜೊತೆ ವಾಗ್ವಾದ ನಡೆಸಿದ್ದರು. ಇದಕ್ಕೆ ಮುಖ್ಯ ಕಾರಣ ಮೂರನೇ ಅಂಪೈರ್ ನೀಡಿದ ತೀರ್ಪು. ಈ ಪಂದ್ಯದ 17ನೇ 2ನೇ ಎಸೆತವನ್ನು ಕೃನಾಲ್ ಪಾಂಡ್ಯ ಸಿಕ್ಸರ್‌ನತ್ತ ಬಾರಿಸಿದ್ದರು. ಆದರೆ ಚೆಂಡು ಬೌಂಡರಿ ಲೈನ್ ದಾಟುವ ಮುನ್ನ ನಮನ್ ಧೀರ್ ಹಿಡಿದಿದ್ದರು. ಅಲ್ಲದೆ ಅದನ್ನು ರಿಲೇ ಕ್ಯಾಚ್‌ಗಾಗಿ ತಿಲಕ್ ವರ್ಮಾರತ್ತ ಎಸೆದಿದ್ದರು. ಆದರೆ ಈ ಕ್ಯಾಚ್ ಅನ್ನು ತಿಲಕ್ ವರ್ಮಾ ಹಿಡಿದಿರಲಿಲ್ಲ. ಅಷ್ಟೇ ಅಲ್ಲದೆ ಕಾಲು ಬೌಂಡರಿ ಲೈನ್‌ಗೆ ತಾಗಿದೆ ಎಂದು ನಮನ್ ಧೀರ್ ಜೊತೆ ಹೇಳುತ್ತಿರುವುದನ್ನು ಗಮನಿಸಿದ ಕೃನಾಲ್ ಪಾಂಡ್ಯ ಸಿಕ್ಸ್ ಆಗಿದೆ ಎಂದು ರನ್ ಓಡಿರಲಿಲ್ಲ. ಆದರೆ ಮೂರನೇ ಅಂಪೈರ್ ಪರಿಶೀಲನೆ ವೇಳೆ ನಮನ್ ಧೀರ್ ಕಾಲು ಬೌಂಡರಿ ಗೆರೆಗೆ ತಾಗಿರಲಿಲ್ಲ. ಹೀಗಾಗಿ ಮೂರನೇ ಅಂಪೈರ್ ಸಿಕ್ಸ್ ನೀಡಿರಲಿಲ್ಲ. ಇತ್ತ ರನ್ ಓಡದ ಕಾರಣ ಡಾಟ್ ಬಾಲ್ ಆಯಿತು. ಆದರೆ ಅಂಪೈರ್ ತೀರ್ಪಿಗೆ ಅಸಮಾಧಾನ ವ್ಯಕ್ತಪಡಿಸಿದ ಆರ್‌ಸಿಬಿ ಕೋಚ್ ಆ್ಯಂಡಿ ಫ್ಲವರ್ ಡಗೌಟ್ ಬಳಿ ನಾಲ್ಕನೇ ಅಂಪೈರ್ ಜೊತೆ ತೀವ್ರ ವಾಗ್ವಾದಕ್ಕಿಳಿದರು.

**ಶಿಕ್ಷೆಗೆ ಕಾರಣವೇನು:** ನಾಲ್ಕನೇ ಅಂಪೈರ್ ಜೊತೆ ವಾಗ್ವಾದ ನಡೆಸುವಾಗ ಆ್ಯಂಡಿ ಫ್ಲವರ್ ಅವರು ಬಳಸಿದ ಕೆಲವು ‘ಅಸಭ್ಯ ಪದಗಳು’ ಮೈದಾನದ ಮೈಕ್ರೋಫೋನ್‌ನಲ್ಲಿ ಸೆರೆಯಾಗಿದ್ದವು.

ಇದು ಐಪಿಎಲ್ ನೀತಿ ಸಂಹಿತೆಯ ಆರ್ಟಿಕಲ್ 2.3 ರ (ಪಂದ್ಯದ ಅವಧಿಯಲ್ಲಿ ಅಸಭ್ಯ ಭಾಷೆಯ ಬಳಕೆ) ಅಡಿಯಲ್ಲಿ ‘ಲೆವೆಲ್ 1’ ಅಪರಾಧವೆಂದು ಪರಿಗಣಿಸಲಾಗಿದೆ. ಅದರಂತೆ ಮ್ಯಾಚ್ ರೆಫರಿ ಅಮಿತ್ ಶರ್ಮಾ ಅವರು ವಿಧಿಸಿದ ಈ ದಂಡವನ್ನು ಫ್ಲವರ್ ಒಪ್ಪಿಕೊಂಡಿದ್ದಾರೆ. ಅದರಂತೆ ಇದೀಗ ಆ್ಯಂಡಿ ಫ್ಲವರ್‌ಗೆ ಪಂದ್ಯದ ಶುಲ್ಕದ ಶೇ. 15 ರಷ್ಟು ದಂಡ ವಿಧಿಸಲಾಗಿದೆ.

# ಕೃನಾಲ್ ಪಾಂಡ್ಯ ಅಲ್ಲೇ ಸಾಯಬೇಕಿತ್ತು

## ಇದೆಂತಹ ನೀಚತನ..!

ಇಂಡಿಯನ್ ಪ್ರೀಮಿಯರ್ ಲೀಗ್ 2026ರ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮುಂಬೈ ಇಂಡಿಯನ್ಸ್ ನಡುವಿನ ಪಂದ್ಯವು ಕೇವಲ ಆಟದ ಕಾರಣಕ್ಕಷ್ಟೇ ಅಲ್ಲದೆ, ಕಾಮೆಂಟರಿ ಬಾಕ್ಸ್‌ನಿಂದ ಬಂದ ಒಂದು ವಿವಾದಾತ್ಮಕ ಹೇಳಿಕೆಯಿಂದಾಗಿ ಸುದ್ದಿಯಲ್ಲಿದೆ. ಆರ್‌ಸಿಬಿ ಆಟಗಾರ ಕೃನಾಲ್ ಪಾಂಡ್ಯ ಅವರ ಗಾಯದ ಬಗ್ಗೆ ತಮಾಷೆ ಮಾಡಿದ ಮಾಜಿ ಕ್ರಿಕೆಟಿಗ ಸುಬ್ರಮಣ್ಯಂ ಬದರಿನಾಥ್ ಅವರು ಈಗ ಸಾಮಾಜಿಕ ಜಾಲತಾಣದಲ್ಲಿ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ.



**ಘಟನೆಯ ವಿವರ:** ಮೇ 10 ರಂದು ನಡೆದ ನಿರ್ಣಾಯಕ ಪಂದ್ಯದಲ್ಲಿ ಆರ್‌ಸಿಬಿ ಪರ ಬ್ಯಾಟಿಂಗ್ ಮಾಡುತ್ತಿದ್ದ ಕೃನಾಲ್ ಪಾಂಡ್ಯ ತೀವ್ರ ಕಾಲು ಸೆಳೆತದಿಂದ ಬಳಲುತ್ತಿದ್ದರು.

ಈ ಸಂದರ್ಭದಲ್ಲಿ ಎದುರಾಳಿ ತಂಡದ ವಿಕೆಟ್ ಕೀಪರ್ ರಯಾನ್ ರಿಕೆಲ್ಟನ್ ಅವರು ಕೃನಾಲ್ ಸಹಾಯಕ್ಕೆ ಧಾವಿಸಿ ಕ್ರೀಡಾ ಮನೋಭಾವ ಮೆರೆದಿದ್ದರು. ಈ ದೃಶ್ಯಕ್ಕೆ ಕಾಮೆಂಟೇಟರ್ ಬದರಿನಾಥ್, ಸೆಳೆತ ಅಲ್ಲ, ಮುಂಬೈ ಇಂಡಿಯನ್ಸ್ ತಂಡವರು ನೀ ಅಲ್ಲೇ ಸಾಯಿ ಎಂದರೂ ಪರವಾಗಿಲ್ಲ ಎಂಬಾರ್ಥದಲ್ಲಿ ಕಾಮೆಂಟ್ರಿ ಮಾಡಿದ್ದಾರೆ. ಈ ಆಕ್ಷೇಪಾರ್ಹ ಕಾಮೆಂಟ್ರಿ ಇದೀಗ ವಿವಾದಕ್ಕೆ ಕಾರಣವಾಗಿದೆ.

**ಅಭಿಮಾನಿಗಳ ಆಕ್ರೋಶ:**

ಈ ಕಾಮೆಂಟ್ರಿ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದ್ದಂತೆ ಬದರಿನಾಥ್ ವಿರುದ್ಧ ಟೀಕೆಗಳ ಸುರಿಮಳೆಯೇ ಹರಿದುಬಂದಿದೆ. ‘‘ಒಬ್ಬ ಕ್ರೀಡಾಪಟುವಾಗಿ ಮತ್ತೊಬ್ಬ ಆಟಗಾರನ ನೋವಿನ ಬಗ್ಗೆ ಇಷ್ಟು ಕೀಳಾಗಿ ಮಾತನಾಡುವುದು ಸರಿಯಲ್ಲ’’ ಎಂದು ಅಭಿಮಾನಿಗಳು ಆಕ್ರೋಶ ಹೊರಹಾಕಿದ್ದಾರೆ.

ಅಲ್ಲದೆ ಒಬ್ಬ ಆಟಗಾರನನ್ನು ಅಲ್ಲೇ ಸಾಯಬೇಕಿತ್ತು ಎಂದೇಳುವ ನೀನೆಷ್ಟು ನೀಚ ಎಂದು ಸಿಎಸ್‌ಕೆ ತಂಡದ ಮಾಜಿ ಆಟಗಾರನನ್ನು ಕ್ರಿಕೆಟ್ ಪ್ರೇಮಿಗಳು ತರಾಟೆಗೆ ತೆಗೆದುಕೊಂಡಿದ್ದಾರೆ.

ಇದರ ಜೊತೆಗೆ ಇನ್ಸ್ಟಾಗ್ರಾಮ್ ಮತ್ತು ಎಕ್ಸ್ ನಲ್ಲಿ ಅನೇಕರು ಬಿಸಿಸಿಐ ಮತ್ತು ಸ್ಟಾರ್ ಸ್ಪೋರ್ಟ್ಸ್ ಸಂಸ್ಥೆಗಳನ್ನು ಟ್ಯಾಗ್ ಮಾಡಿ, ಇಂತಹ ‘‘ಟಾಕ್ಸಿಕ್’’ ಕಾಮೆಂಟೇಟರ್‌ಗಳನ್ನು ಪ್ಯಾನಲ್‌ನಿಂದ ತೆಗೆದುಹಾಕಬೇಕೆಂದು ಒತ್ತಾಯಿಸಿದ್ದಾರೆ.

ಅಂದಹಾಗೆ ಕ್ರೀಡೆ ಎಂಬುದು ಕೇವಲ ಗೆಲುವು-ಸೋಲಿನಾಟವಲ್ಲ, ಅದು ಪರಸ್ಪರ ಗೌರವ ಮತ್ತು ಮಾನವೀಯತೆಯ ಪ್ರತೀಕ. ಕಾಮೆಂಟರಿ ಬಾಕ್ಸ್‌ನಲ್ಲಿ ಕುಳಿತು ಪಂದ್ಯವನ್ನು ವಿಶ್ಲೇಷಿಸುವ ಜವಾಬ್ದಾರಿಯುತ ಸ್ಥಾನದಲ್ಲಿರುವವರು, ಆಟಗಾರನೊಬ್ಬನ ದೈಹಿಕ ನೋವನ್ನು ಕಂಡು ಇಂತಹ ಅಮಾನವೀಯ ಹೇಳಿಕೆ ನೀಡುವುದು ಕ್ರೀಡಾ ಸ್ಫೂರ್ತಿಗೆ ಎಸಗಿದ ದ್ರೋಹ. ಎಸ್. ಬದರಿನಾಥ್ ಅವರ ಈ ಮಾತುಗಳು ಕೇವಲ ಅವರ ವ್ಯಕ್ತಿತ್ವವನ್ನು ಕುಗ್ಗಿಸುವುದಲ್ಲದೆ, ಕ್ರೀಡಾ ಪ್ರಸಾರ ಲೋಕಕ್ಕೇ ಒಂದು ಕಪ್ಪು ಚುಕ್ಕೆಯಾಗಿದೆ. ಇಂತಹ ವಿಷಕಾರಿ ಮಾತುಗಳಿಗೆ ಕಡಿವಾಣ ಬೀಳದಿದ್ದರೆ, ಕಾಮೆಂಟರಿ ಬಾಕ್ಸ್‌ಗಳು ಕ್ರೀಡಾ ವಿಶ್ಲೇಷಣೆಯ ಬದಲಿಗೆ ಕೇವಲ ‘ಅಸಹ್ಯದ ಅಡ್ಡೆ’ಗಳಾಗಿ ಬದಲಾಗುವುದರಲ್ಲಿ ಸಂಶಯವಿಲ್ಲ.’’


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news


ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966